# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 6 | Issue : 08 | Dec. 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 6 | ಸಂಚಿಕೆ : 08 | ಡಿಸೆಂಬರ್ 2023 | ಪುಟಗಳು : 32 | ₹ 20 ರೂ.



|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

## COURSES OFFERED:

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.



## OUR VISION:

To Impart Quality Education

Transformation of Child through Excellent Education

Child Centered Education

*Hunt Your Dreams*

**Institution Code : 541**



## Salient Features

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library




## For Admissions, Contact :

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

## ಸಂಪಾದಕೀಯ

ಡಿಸೆಂಬರ್ : 2023

**ಸಂಪುಟ 6, ಸಂಚಿಕೆ 8**

ಸಂಪಾದಕರು

**ಡಾ॥ ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com
8971608213

ಸಂಪ್ರೀತಿ – ಸಮೃದ್ಧಿ


ಕುಪ್ಪಳ್ಳಿಯಲ್ಲಿ ಹುಟ್ಟಿ – ಮೈಸೂರಿನಲ್ಲಿ ಬೆಳೆದು – ಕರ್ನಾಟಕದಲ್ಲಿ ಪಸರಿಸಿ – ಸಾಹಿತ್ಯದಲ್ಲಿ ರಸ ಋಷಿಯಾಗಿ – ಕವಿ ಶೈಲ ದಲ್ಲಿ ಲೀನರಾದ ರಾಷ್ಟ್ರ ಕವಿ ಕುವೆಂಪು ಅವರ ಜನುಮ ದಿನದ ಶುಭಾಶಯಗಳನ್ನು ಕೋರುತ್ತಾ ( ಡಿಸೆಂಬರ್ – 29 ) ಕನ್ನಡ ಸಾಹಿತ್ಯ ಲೋಕದಲ್ಲಿ, ಇತಿಹಾಸದ ದಿಗ್ಗಜರ ಸಾಲಿನಲ್ಲಿ, ಮೇರು ಪರ್ವತದಂತೆ ಕಂಗೊಳಿಸುತ್ತಿರುವ ವ್ಯಕ್ತಿತ್ವ ಕುವೆಂಪು ಅವರದ್ದು

ಅಕ್ಷರಗಳ ಮಾಂತ್ರಿಕ ಶಕ್ತಿ ಹೇಗಿರುತ್ತದೆ ? ಬರಹಗಳಲ್ಲಿ ಬದುಕಿನ ಸಂದೇಶ ಹೇಗೆ ನೀಡುವುದು ? ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಸಾಮಾಜಿಕ ಸಾಂಸ್ಕೃತಿಕ ಪ್ರಭಾವ ಹೇಗೆ ಬೀರುತ್ತದೆ ? ಮುಂತಾದ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಕುವೆಂಪು ಅವರನ್ನು ಹೆಸರಿಸಬಹುದು.

ಕನ್ನಡ ಭಾಷೆಯನ್ನು ವಿಸ್ತಾರ ಗೊಳಿಸುವಲ್ಲಿ, ಕನ್ನಡ ಸಾಹಿತ್ಯದ ಓದುಗರ ಚಿಂತನೆಗಳನ್ನು ವಿಶಾಲಕ್ಕೆ ಕೊಂಡೊಯ್ಯುವಲ್ಲಿ, ಕರ್ನಾಟಕದ ಕೀರ್ತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಬೆಳೆಸುವಲ್ಲಿ, ಸಾಮಾನ್ಯ ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸುವಲ್ಲಿ ಕುವೆಂಪು ಅವರ ಕೊಡುಗೆ ಸಾಕ್ಷಿದೆ. –"ಮಂತ್ರ ಮಾಂಗಲ್ಯ" ಎಂಬ ಸರಳ ವಿವಾಹ ಪದ್ದತಿಯನ್ನು ಪರಿಚಯಿಸಿದ್ರು

ಕಾಡದಿರು ನೀನು
ನೋವೆಂಬ ಮಾಯೆ,
ಎಷ್ಟೊಂದು ಹಿಂಸೆ
ನೆನಪುಗಳ ಭಾರ,
ಮುಂದಕ್ಕೂ ಚಲಿಸಲು ಬಿಡದೆ,
ಹಿಂತಿರುಗಲೂ ಅವಕಾಶ ನೀಡದೆ,
ಕಾಡದಿರು ನೀನು ನೋವೆಂಬ ಮಾಯೆ .

ಸಾಹಿತ್ಯವನ್ನು ಅತ್ಯಂತ ವಿಶಾಲ ಅರ್ಥದಲ್ಲಿ ಗ್ರಹಿಸಬೇಕು. ಭಾಷೆಯ ಮೇಲಿನ ಹಿಡಿತ, ವಿಷಯಗಳ ವ್ಯಾಪ್ತಿ, ಅದು ಸಾಹಿತ್ಯ ಕ್ಷೇತ್ರ ಮತ್ತು ಜನಸಾಮಾನ್ಯರಲ್ಲಿ ಬೀರಿರುವ ಪ್ರಭಾವ, ಎಷ್ಟು ದೀರ್ಘಕಾಲದಿಂದ ಅದು ಉಳಿದು ಬಂದಿದೆ, ಪ್ರಶಸ್ತಿ ಮಾನದಂಡಗಳಲ್ಲಿ ಅದಕ್ಕಿರುವ ಸ್ಥಾನ, ಓದುವಾಗ ಆ ಸಾಹಿತ್ಯ ಓದುಗರ ಮನದಲ್ಲಿ ಮೂಡಿಸುವ ಭಾವ ತರಂಗಗಳು, ಸಾಹಿತ್ಯ ಪ್ರಕಾರಗಳು, ಭಾರತೀಯ ಮತ್ತು ವಿಶ್ವದ ಇತರ ಭಾಷೆಗಳ ಸಾಹಿತ್ಯದ ಆಳ ಅಗಲಗಳ ಮೂಲದಿಂದ ಪರಿಶೀಲನೆ, ಸಾಹಿತ್ಯದ ದೂರದೃಷ್ಟಿ, ಮಾನವೀಯ ಸ್ಪಂದನೆ, ಸಾಹಿತಿಯ ಒಟ್ಟು ವ್ಯಕ್ತಿತ್ವ ಮುಂತಾದ ಎಲ್ಲವನ್ನೂ ಒಳಗೊಂಡಿರಬೇಕು.

ದಾಖಲಾತಿಯ ಸಾಹಿತ್ಯ, ಹೊಗಳಿಕೆಯ ಸಾಹಿತ್ಯ, ಪೌರಾಣಿಕ ಸಾಹಿತ್ಯ, ಐತಿಹಾಸಿಕ ಸಾಹಿತ್ಯ, ಭಕ್ತಿ ಸಾಹಿತ್ಯ, ದಾಸ ಸಾಹಿತ್ಯ, ವಚನ ಸಾಹಿತ್ಯ, ನವ್ಯ ಸಾಹಿತ್ಯ, ನವೋದಯ ಸಾಹಿತ್ಯ, ನವ್ಯೋತ್ತರ ಸಾಹಿತ್ಯ, ಬಂಡಾಯ ಸಾಹಿತ್ಯ, ಮಹಿಳಾ ಸಾಹಿತ್ಯ, ಶಿಶು ಸಾಹಿತ್ಯ, ಜಾನಪದ ಸಾಹಿತ್ಯ, ಆಧ್ಯಾತ್ಮಿಕ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಹಾಸ್ಯ ಸಾಹಿತ್ಯ ಮುಂತಾದ ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಒಳಗೊಂಡು .

ಕಥೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ, ಸಂಶೋಧನೆ, ಅನುವಾದ, ವಿಮರ್ಶೆ ಇತ್ಯಾದಿ ಎಲ್ಲವೂ ಸೇರಿ ಕುವೆಂಪು ಅವರು ಕನ್ನಡ ಸಾಹಿತ್ಯ ಕ್ಷೇತ್ರದ ಮೇರು ಪರ್ವತ ಅಗುವುದು ಇಲ್ಲಿಯೇ ಸಾಂಕೇತಿಕವಾಗಿ ಹೇಳುವುದಾದರೆ

ರಾಮಾಯಣ ದರ್ಶನಂ ಎಂಬ ಮಹಾಕಾವ್ಯ, ಜಯ ಭಾರತ ಜನನಿಯ ತನುಜಾತೆ ಎಂಬ ನಾಡಗೀತೆ, ನೇಗಿಲ ಯೋಗಿ ಎಂಬ ರೈತ ಗೀತೆ, ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೇ, ದೋಣಿ ಸಾಗಲಿ ಮುಂದೆ ಹೋಗಲಿ, ಎಲ್ಲಾದರು ಇರು ಎಂತಾದರೂ ಇರು, ಭಾರಿಸು ಕನ್ನಡ ಡಿಂಡಿಮವ ಎಂಬ ಭಾಷಾ ಮಹತ್ವದ ರಚನೆಗಳು, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಎಂಬ ಕಾದಂಬರಿಗಳು, ಶೂದ್ರ ತಪಸ್ವಿ, ಬೆರಳ್ಗೆ ಕೊರಳ್ ನಾಟಕಗಳು, ಎಲ್ಲಕ್ಕಿಂತ ಹೆಚ್ಚಾಗಿ " ವಿಶ್ವ ಮಾನವ ಪ್ರಜ್ಞೆ " ಎತ್ತಿ ಹಿಡಿದ ಮಹಾನ್ ಸಾಹಿತಿ ಕುವೆಂಪು.

ಅವರನ್ನು ಅತ್ಯಂತ ಪ್ರೀತಿ ಅಭಿಮಾನದಿಂದ ಸ್ಮರಿಸುತ್ತಾ ॐ

## ಯುಗದ ಕವಿ, ಜಗದ ಕವಿ, ಕವಿ ಸಂತ, ರಾಷ್ಟ್ರಕವಿ, ರಸಋಷಿ

# ಕುವೆಂಪು



1904ರ ಡಿಸೆಂಬರ್ 29 ರಂದು ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ತಂದೆ ವೆಂಕಟಪ್ಪಗೌಡರು, ತಾಯಿ ಸೀತಮ್ಮ. ತಮ್ಮ ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಆರಂಭಿಸಿದ ಕುವೆಂಪುರವರು ನಂತರ ಪ್ರೌಢಶಾಲೆಯಿಂದ ಎಂ.ಎ. ಪದವಿಯವರೆಗೂ ಮೈಸೂರಿನಲ್ಲಿ ಓದಿದರು. ನಂತರ 1929ರಲ್ಲಿ ಪ್ರಾಧ್ಯಾಪಕರಾಗಿ ಮೈಸೂರಿನ 'ಮಹಾರಾಜಾ' ಕಾಲೇಜನ್ನು ಸೇರಿದ ಇವರು, 1955ರಲ್ಲಿ ಅದೇ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಂತರ ಉಪಕುಲಪತಿಯಾಗಿ ನಿವೃತ್ತರಾದರು. ವಿಶ್ವವಿದ್ಯಾಲಯವೊಂದರ ಕುಲಪತಿಯಾದ ಮೊದಲ ಕನ್ನಡಿಗ ಕುವೆಂಪುರವರು.

**ರಸಋಷಿ ಕುವೆಂಪು:–**

ಮಲೆನಾಡಿನ ಹಿಂದುಳಿದ ವರ್ಗದಿಂದ ಹುಟ್ಟಿ ಬಂದಂತ ಕುವೆಂಪುರವರು ತಾವೆ ಹೇಳಿಕೊಂಡಂತೆ ಮಲೆನಾಡಿನ ಕವಿ. ಕುವೆಂಪುರವರು ಈ ದೇಶದ ಸಮಕಾಲೀನ ಸೃಜನಶೀಲತೆಯ ಉತ್ಕರ್ಷದ ನಿಜವಾದ ಪ್ರತಿನಿಧಿಯಾಗಿದ್ದಾರೆ. ಅವರ ಸಾಹಿತ್ಯದ ವೈವಿಧ್ಯ ಮತ್ತು ಎತ್ತರಗಳು ಅವರು ಮೂಡಿಬಂದ ಸಹ್ಯಾದ್ರಿಯ "ಪರ್ವತಾರಣ್ಯ ಪ್ರಪಂಚ"ದಂತೆ ಬೆರಗು ಹುಟ್ಟಿಸುತ್ತದೆ. ಅವರ ಮಹಾಕಾವ್ಯ, ಕಾದಂಬರಿ, ನಾಟಕ, ಕವಿತೆ ಈ ಅರಣ್ಯಾನುಭವಗಳೇ ಮೂಲದ್ರವ್ಯದಂತೆ ಸರ್ವವ್ಯಾಪಿಯಾಗಿದೆ. ಅವರ ಬಹುತೇಕ ಎಲ್ಲ ಪಾತ್ರಗಳು ಈ ಅರಣ್ಯ ಸಂಸ್ಕೃತಿಯ ಪ್ರತೀಕಗಳೇ. ಕುವೆಂಪು ಅವರಲ್ಲಿ ಪ್ರಕಟವಾಗುವ ಅದಮ್ಯವಾದ ನಿಸರ್ಗ ಪ್ರೀತಿ ಮೂಲತಃ ಜೀವನಪ್ರೀತಿಯ ವಿಸ್ತರಣೆ. ಈ ನಿಸರ್ಗದ ಕುರಿತ ಉತ್ಕಟವಾದ ಹಂಬಲ ಕೇವಲ ಸೌಂದರ್ಯನಿಷ್ಠವಾದುದು ಮಾತ್ರವಲ್ಲ, ಅದನ್ನು ಮೀರಿದ ಆಧ್ಯಾತ್ಮಿಕ ಅನ್ವೇಷಣೆಯ ಪರಿಣಾಮ ಕೂಡ ಆಗಿದೆ. ಮಲೆನಾಡಿನ ನಿಸರ್ಗದ ಚೆಲುವಿನ ಜೊತೆಗೆ ಅದರ ಒಡಲಿನ ಸಾಮಾಜಿಕ ಬದುಕನ್ನು, ಅದರ ಸಾಮಾಜಿಕ ಸ್ಥಿತ್ಯಂತರಗಳನ್ನು ದಾಖಲಿಸುತ್ತ ಬಂದಿದ್ದಾರೆ. ಈ ಅರಣ್ಯ ಕೇಂದ್ರಿತ ಸಾಮಾಜಿಕ ಬದುಕಿನ ಮೂಲಕ ಇಡೀ ಭಾರತೀಯ ಸಾಮಾಜಿಕ ಹಾಗು ಸಾಂಸ್ಕೃತಿಕ ಜೀವನದ ಪಲ್ಲಟಗಳೂ, ತಲ್ಲಣಗಳೂ ಅವರ ಗ್ರಹಣಾ ಶಕ್ತಿಯಿಂದ ವ್ಯಕ್ತವಾಗಿದೆ.

ಅವರ ಸೃಜನಶೀಲ ಪ್ರತಿಭೆ ಪೂರ್ವ ಪಶ್ಚಿಮಗಳ ಚಿಂತನಗಳಿಂದ ಶ್ರೀಮಂತವಾಗಿದೆ. ವಿಶ್ವ ಸಾಹಿತ್ಯದಲ್ಲಿ ಕನ್ನಡಕ್ಕೆ ಗೌರವ ಸ್ಥಾನವನ್ನು ತಂದುಕೊಟ್ಟಿದೆ. ರಸಋಷಿಯ ಸಾಹಿತ್ಯವೆಲ್ಲವೂ ಒಂದರ್ಥದಲ್ಲಿ ಸ್ವಾತಂತ್ರ್ಯ ಪೂರ್ವದ ಆಶೋತ್ತರಗಳ ಅಭಿವ್ಯಕ್ತಿಯಾಗಿ ಮತ್ತು ಸ್ವಾತಂತ್ರ್ಯ ಭಾರತದ ವಾಸ್ತವವನ್ನು ಕುರಿತ ವಿಮರ್ಶೆಯಾಗಿ ತೋರುತ್ತದೆ. ಹಾಗೆಯೇ ಸಾಹಿತ್ಯ ನಿರ್ಮಿತಿಯ ನೆಲೆಯಲ್ಲಿ ಈ ದೇಶದ ಪರಂಪರೆಗೆ ಅವರು ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳು ಮತ್ತು ಜಾಗತಿಕ ಪ್ರಜ್ಞೆಯನ್ನು ಅರಗಿಸಿಕೊಂಡ ಕ್ರಮಗಳು ಹಾಗೂ ಯುಗ ಪರಿವರ್ತನೆಯ ಸೂಕ್ಷ್ಮತೆಗಳಿಗೆ ಸ್ಪಂದಿಸುತ್ತ ಅವುಗಳನ್ನು ಗುರುತಿಸಿ ತಮ್ಮ ಬರಹದ ಮೂಲಕ ಅದಕ್ಕೆ ಹೊಂದುವಂತೆ ಜನಮನವನ್ನು ಸಜ್ಜುಗೊಳಿಸಿದ ಪ್ರಯತ್ನಗಳು ಕುವೆಂಪುರವರನ್ನು ಈ ಯುಗಮಾನದ ಮಹತ್ವದ ಲೇಖಕರನ್ನಾಗಿ ಮಾಡಿವೆ.

ಆಧ್ಯಾತ್ಮ, ವೈಚಾರಿಕತೆ, ಗಾಢವಾದ ನಿಸರ್ಗ ಪ್ರೀತಿಗಳಲ್ಲಿ ಬೇರೂರಿರುವ ಅವರ ಸಾಹಿತ್ಯ ನಮ್ಮ ಪರಂಪರೆಯನ್ನು, ಸಾಮಾನ್ಯ ಜನರ ಬದುಕನ್ನು ನಿರ್ದೇಶಿಸಿದಂತೆಯೇ ಶೋಷಣೆಗೂ ಒಳಗು ಮಾಡಿದ ಪರಂಪರೆಯನ್ನು ತೀಕ್ಷ್ಣ ಹಾಗೂ ಚಿಕಿತ್ಸಕ ದೃಷ್ಟಿಯಿಂದ ಕಂಡಿದೆ. ಅಲ್ಲದೆ, ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿಯ ಬೆಳಕಿನಲ್ಲಿ ಮನುಷ್ಯನ ವ್ಯಕ್ತಿತ್ವದ ಮುಕ್ತ ಬೆಳವಣಿಗೆಯ ಕಾಳಜಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಕುವೆಂಪು ಅವರ ಚಿಂತನೆ, ಅವರ ಕೊನೆಯ ವರ್ಷದಲ್ಲಿ, ದ್ವೇಷ, ಭಾಷೆ, ಜಾತಿ, ಮತ ಸಿದ್ಧಾಂತಗಳ ಹಾಗೂ ತಮಗೆ ಅತ್ಯಂತ ಪ್ರಿಯವಾದ ಸಾಹಿತ್ಯದ ಮೇರೆಯನ್ನು ದಾಟಿತ್ತು. ವಿಶ್ವದೃಷ್ಟಿಯನ್ನು ಹೊಂದಿತ್ತು. ಅದರ ಫಲವೆ ವಿಶ್ವಮಾನವ ಸಂದೇಶ, ಇದರ ಗೌರವಾರ್ಥವಾಗಿ ಕುವೆಂಪುರವರಿಗೆ 'ವಿಶ್ವಮಾನವ' ಎಂಬ ಬಿರುದಿದೆ.

## ಕಾದಂಬರಿಗಳು:–

ಕಾನೂರು ಹೆಗ್ಗಡತಿ (ಚಲನ ಚಿತ್ರವಾಗಿದೆ)
ಮಲೆಗಳಲ್ಲಿ ಮದುಮಗಳು (ಧಾರಾವಾಹಿಯಾಗಿದೆ)

## ನಾಟಕಗಳು:–

ಬೆರಳ್ಗೆ ಕೊರಳ್, ಶೂದ್ರ ತಪಸ್ವಿ, ಸ್ಮಶಾನ ಕುರುಕ್ಷೇತ್ರ, ರಕ್ತಾಕ್ಷಿ, ಬಿರುಗಾಳಿ, ಯಮನ ಸೋಲು, ನನ್ನ ಗೋಪಾಲ (ಮಕ್ಕಳ ನಾಟಕ), ವಾಲ್ಮೀಕಿಯ ಭಾಗ್ಯ, ಮಹಾರಾತ್ರಿ, ಜಲಗಾರ, ಚಂದ್ರಹಾಸ, ಬಲಿದಾನ, ಮೋಡಣ್ಣನ ತಮ್ಮ (ಮಕ್ಕಳ ನಾಟಕ)

## ಕಾವ್ಯಗಳು:–

ಶ್ರೀ ರಾಮಾಯಣ ದರ್ಶನಂ, ಕೊಳಲು, ಅಗ್ನಿಹಂಸ, ಅನಿಕೇತನ, ಅನುತ್ತರಾ, ಇಕ್ಷುಗಂಗೋತ್ರಿ, ಕದರಡಕೆ

## ಕಥನ ಕವನಗಳು:–

ಕಲಾಸುಂದರಿ, ಕಿಂಕಿಣಿ, ಕೃತ್ತಿಕೆ, ಜೇನಾಗುವ, ನವಿಲು, ಪಕ್ಷಿಕಾಶಿ, ಚಿತ್ರಾಂಗದಾ, ಪ್ರೇತಕ್ಯು, ಪ್ರೇಮಕಾಶ್ಮೀರ, ಮಂತ್ರಾಕ್ಷತೆ, ಷೋಡಶಿ, ಹಾಳೂರು, ಕೋಗಿಲೆ, ಪಾಂಚಜನ್ಯ, ಕುಟೀಚಕ.

## ಕಥಾಸಂಕಲನ:–

ನನ್ನ ದೇವರು ಮತ್ತು ಇತರ ಕಥೆಗಳು
ವಿಮರ್ಶೆ : ದ್ರೌಪದಿಯ ಶ್ರೀಮುಡಿ
ಜೀವನ ಚರಿತ್ರೆ : ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮಹಂಸ

## ಕುವೆಂಪುರವರ ಬಗ್ಗೆ ಇತರರು ಬರೆದ ಪುಸ್ತಕಗಳು :–

ಮಗಳು ಕಂಡ ಕುವೆಂಪು – ಲೇ: ತಾರಿಣಿ ಚಿದಾನಂದ ಪ್ರಕಾಶಕರು: ಪುಸ್ತಕ ಪ್ರಕಾಶನ,
ಅಣ್ಣನ ನೆನಪು – ಲೇ: ಕೆ ಪಿ ಪೂರ್ಣಚಂದ್ರ ತೇಜಸ್ವಿ ಪ್ರಕಾಶಕರು: ಪುಸ್ತಕ ಪ್ರಕಾಶನ,

## ಕುವೆಂಪುರವರಿಗೆ ಸಂದ ಗೌರವ ಪ್ರಶಸ್ತಿಗಳು:–

| | | |
|---|---|---|
| 1956 | – | ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕ. |
| 1957 | – | ಧಾರವಾಡದಲ್ಲಿ 39ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ. |
| 1964 | – | ರಾಜ್ಯ ಸರ್ಕಾರದಿಂದ ರಾಷ್ಟ್ರಕವಿ ಬಿರುದಿನ ಗೌರವ. |
| 1968 | – | ಶ್ರೀ ರಾಮಾಯಣದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ. |
| 1968 | – | ರಾಷ್ಟ್ರಪತಿಗಳಿಂದ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ. |
| 1988 | – | ಕರ್ನಾಟಕ ಸರ್ಕಾರದ ಪ್ರಥಮ ಪಂಪ ಪ್ರಶಸ್ತಿ ಪ್ರದಾನ. |
| 1992 | – | ಕರ್ನಾಟಕ ಸರ್ಕಾರದ ಪ್ರಥಮ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ. |

1956 ರಿಂದ 1995, ಎಂಟು ಬೇರೆ–ಬೇರೆ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನು ಪಡೆದಿದ್ದಾರೆ

## ಕುವೆಂಪು ಮತ್ತು ರಾಜಕೀಯ:–

ಕವಿ ಕುವೆಂಪು ಅವರು ಆಗಿನ್ನೂ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಆಗ ಮೈಸೂರು ಮಹಾರಾಜರಾಗಿದ್ದವರು ನಾಲ್ವಡಿ ಕೃಷ್ಣರಾಜ ಒಡೆಯರ್. ಯುವರಾಜ ಜಯಚಾಮರಾಜ ಒಡೆಯರ್. ಒಮ್ಮೆ ಜಯಚಾಮರಾಜರ ಕನ್ನಡದ ಉತ್ತರ ಪತ್ರಿಕೆಯನ್ನು ಕುವೆಂಪು ಮೌಲ್ಯಮಾಪನ ಮಾಡಿದರು. ನೂರಕ್ಕೆ 17 ಅಂಕವನ್ನು ಕೊಟ್ಟರು. ಇದು ಆಗಿನ ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಎನ್.ಎಸ್.ಸುಬ್ಬರಾವ್ ಅವರಿಗೆ ಗೊತ್ತಾಯಿತು. ಅಲ್ಲದೆ ಈ ವಿಷಯ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ಗೂ ತಿಳಿಯಿತು. ಕುಲಪತಿ ಅವರ ಈ ಬಗ್ಗೆ ವಿಚಾರಣೆ ನಡೆಸಲು ಟಿ.ಎಸ್.ವೆಂಕಣ್ಣಯ್ಯ ಅವರನ್ನು ಕೇಳಿಕೊಂಡರು.

ವೆಂಕಣ್ಣಯ್ಯ ಅವರು ಕುವೆಂಪು ಅವರನ್ನು ಕರೆದು, 'ಏನಯ್ಯ, ರಾಜಕುಮಾರರಿಗೆ 17 ಅಂಕ ನೀಡಿದ್ದೀಯಲ್ಲ' ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಕುವೆಂಪು, 'ನಾನು ನೀಡಿದ್ದಲ್ಲ. ಅವರು ತೆಗೆದುಕೊಂಡಿದ್ದು ಅಷ್ಟು' ಎಂದು ಉತ್ತರಿಸಿದರು. 'ಅದನ್ನು 71 ಮಾಡಲು ಸಾಧ್ಯವಿಲ್ಲವೇ?' ಎಂದು ವೆಂಕಣ್ಣಯ್ಯ ಕೇಳಿದಾಗ, 'ಉತ್ತರ ಪತ್ರಿಕೆಯನ್ನು ನೀವೇ ನೋಡಿ. ಎಷ್ಟು ಬೇಕಾದರೂ ಅಂಕ ಕೊಡಿ' ಎಂದು ಕುವೆಂಪು ಹೇಳಿದರಂತೆ.



ಇದರಿಂದ ಮಹಾರಾಜರೇನೂ ಸಿಟ್ಟಾಗಲಿಲ್ಲ. ಬದಲಿಗೆ ಕುವೆಂಪು ಅವರಿಗೆ ವಾರಕ್ಕೆ ಮೂರು ದಿನ ಅರಮನೆಗೆ ಬಂದು ಯುವ ರಾಜರಿಗೆ ಪಾಠ ಮಾಡಿ. ನಿಮ್ಮನ್ನು ಕರೆದುಕೊಂಡು ಬರಲು ಕಾರು ಕಳುಹಿಸಲಾಗುತ್ತದೆ. ಅಲ್ಲದೆ ನೂರು ರೂಪಾಯಿ ಸಂಭಾವನೆ ನೀಡಲಾಗುತ್ತದೆ ಎಂದು ಹೇಳಿದರಂತೆ. ಆದರೆ ಅದಕ್ಕೂ ಕುವೆಂಪು ಒಪ್ಪಲಿಲ್ಲ. ಮಹಾರಾಜರ ಆಹ್ವಾನವನ್ನು ತಿರಸ್ಕರಿಸಿದ್ದೂ ಅಲ್ಲದೆ ಒಂದು ಕವನವನ್ನೂ ಬರೆದರು.

**ವಸಂತ ವನದಲ್ಲಿ ಕೂಗುವ ಕೋಗಿಲೆ**
**ರಾಜರ ಬಿರುದನ್ನು ಬಯಸುವುದಿಲ್ಲ**
**ಕವಿಗೆ ಅರಸುಗಿರಸುಗಳ ಋಣವಿಲ್ಲ**
**ಅವನು ಅಗ್ನಿಮುಖಿ ಪ್ರಳಯ ಶಿಖಿ**

ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಇನ್ನೂ ಮಾನಸ ಗಂಗೋತ್ರಿಗೆ ಸಂಪೂರ್ಣವಾಗಿ ಸ್ಥಳಾಂತರವಾಗಿರಲಿಲ್ಲ. ಸ್ಥಳಾಂತರಕ್ಕೆ ಸಾಕಷ್ಟು ಮಂದಿಯ ವಿರೋಧ ಕೂಡ ಇತ್ತು. ಮಾನಸ ಗಂಗೋತ್ರಿಗೆ ವಿಶ್ವವಿದ್ಯಾಲಯವನ್ನು ಸ್ಥಳಾಂತರಿಸುವ ಸಾಹಸದಲ್ಲಿ ಕುವೆಂಪು ನಿರತರಾಗಿದ್ದರು.

ಮಾಜಿ ಕೇಂದ್ರ ಸಚಿವರೂ ಆಗಿದ್ದ ಸಿ.ಡಿ.ದೇಶಮುಖ್ ಅವರು ಆಗ ಯುಜಿಸಿ ಅಧ್ಯಕ್ಷರಾಗಿದ್ದರು. ಅವರು ಒಮ್ಮೆ ತಮ್ಮ ಪತ್ನಿ ಜೊತೆಗೆ ಕೃಷ್ಣರಾಜಸಾಗರಕ್ಕೆ ಬಂದು ಉಳಿದುಕೊಂಡಿದ್ದರು. ಹೀಗೆ ಬಂದ ದೇಶಮುಖ್ ಅವರಿಗೆ ಜ್ವರ ಬಂದು ನಾಲ್ಕು ದಿನ ಇಲ್ಲಿಯೇ ಉಳಿದುಕೊಳ್ಳುವಂತೆ ಆಯಿತು. ಆಗ ಪ್ರತಿ ದಿನ ಕುವೆಂಪು ಕೆಆರ್‌ಎಸ್‌ಗೆ ಹೋಗಿ ಅವರನ್ನು ನೋಡಿಕೊಂಡು ಬರುತ್ತಿದ್ದರಂತೆ. ದೇಶಮುಖ್ ಅವರ ಪತ್ನಿ ಒಳ್ಳೆ ಕವಯತ್ರಿ. ಕುವೆಂಪು ಅವರು ಅಲ್ಲಿಗೆ ಹೋದಾಗ ಇವರೊಂದು ಅವರೊಂದು ಕವನ ವಾಚಿಸುತ್ತಿದ್ದರಂತೆ.

ಆಗಿನ್ನು ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಯುಜಿಸಿ ವೇತನ ಸಿಗುತ್ತಿರಲಿಲ್ಲ. ಕುವೆಂಪು ಈ ಬಗ್ಗೆ ದೇಶಮುಖ್ ಅವರಲ್ಲಿ ಪ್ರಸ್ತಾಪಿಸಿದಾಗ, 'ನಿಮ್ಮ ರಾಜ್ಯ ಸರ್ಕಾರ ಪ್ರಸ್ತಾವನೆಯನ್ನು ಕಳುಹಿಸಿದರೆ ತಕ್ಷಣವೇ ಅದಕ್ಕೆ ಒಪ್ಪಿಗೆ ಕೊಡುತ್ತೇನೆ' ಎಂಬ ಭರವಸೆಯನ್ನು ನೀಡಿದರು. ಖುಷಿಯಾದ ಕುವೆಂಪು ಈ ಬಗ್ಗೆ ಚರ್ಚೆ ನಡೆಸಲು ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ 'ತಮ್ಮನ್ನು ಕಾಣಲು ಬರಬೇಕು. ನಿಮ್ಮ ಸಮಯ ತಿಳಿಸಿ' ಎಂದು ಕೇಳಿಕೊಂಡರು. ಅದಕ್ಕೆ ನಿಜಲಿಂಗಪ್ಪ 'ನೀವು ನನ್ನನ್ನು ನೋಡಲು ಇಲ್ಲಿಗೆ ಬರುವುದಾ? ನನಗೆ ಅವಮಾನ ಮಾಡಬೇಡಿ. ನಮ್ಮ ಶಿಕ್ಷಣ ಸಚಿವರನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ. ಅವರಲ್ಲಿ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಚರ್ಚೆ ಮಾಡಿ. ನಾನು ಎಲ್ಲಾ ಅನುಕೂಲ ಮಾಡಿಕೊಡುತ್ತೇನೆ' ಎಂದು ಉತ್ತರಿಸಿದರು.

ಅದರಂತೆ ಆಗಿನ ಶಿಕ್ಷಣ ಸಚಿವ ವಿ.ವೆಂಕಟಪ್ಪ ಕುವೆಂಪು ಅವರ ಬಳಿಗೆ ಬಂದು ವಿಶ್ವವಿದ್ಯಾಲಯದ ಸಮಸ್ಯೆಗಳನ್ನು ಆಲಿಸಿದರು. ಯುಜಿಸಿಗೆ ಸೂಕ್ತ ಪ್ರಸ್ತಾವನೆಯನ್ನೂ ಸಲ್ಲಿಸಿದರು. ಅಲ್ಲದೆ ಮಾನಸ ಗಂಗೋತ್ರಿಯಲ್ಲಿ ಸಂಚರಿಸಿ ಅಲ್ಲಿ ಮೂರು ಕಟ್ಟಡಗಳನ್ನು ನಿರ್ಮಿಸಲು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದ ಅನುದಾನವನ್ನು ನೀಡಲು ಒಪ್ಪಿಕೊಂಡರು.

ಕುವೆಂಪು ಅವರು ಕರ್ನಾಟಕ ಏಕೀಕರಣದ ಪರವಾಗಿದ್ದರು. ಇದರಿಂದ ಮೈಸೂರು ಭಾಗದ ರಾಜಕಾರಣಿಗಳು ಸಿಟ್ಟಾಗಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕುವೆಂಪು ಅವರಿಗೆ ಒಂದು ನೋಟಿಸ್ ಜಾರಿ ಮಾಡಿತು. ರಾಜ್ಯ ಸರ್ಕಾರದ ವಿರುದ್ಧ ಮಾತನಾಡುವ ತಮ್ಮ ವಿರುದ್ಧ ಯಾಕೆ ಕ್ರಮ ಕೈಗೊಳ್ಳಬಾರದು ಎಂದು ಸರ್ಕಾರ ಕೇಳಿತು. ಅದಕ್ಕೆ ಕುವೆಂಪು ಪದ್ಯದ ರೂಪದಲ್ಲಿಯೇ ಉತ್ತರ ಬರೆದರು. ಆ ಪದ್ಯವೇ ಕುವೆಂಪು ಅವರ ಪ್ರಸಿದ್ಧ 'ಅಖಂಡ ಕರ್ನಾಟಕ' ಪದ್ಯ.

**ರಾಜ್ಯ ಸರ್ಕಾರದ ನೋಟಿಸ್‌ಗೆ ಕುವೆಂಪು ಉತ್ತರ ಹೀಗಿದೆ:**

ಅಖಂಡ ಕರ್ನಾಟಕ
ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ
ಹರಸುತಿಹನು ದೇವ ಗಾಂಧಿ
ಮಂತ್ರಿಸಿಹುದು ಋಷಿಯ ನಾಂದಿ

***

ಅಖಂಡ ಕರ್ನಾಟಕ
ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರ ಕರ್ಣಕುಂಡಲ

***

ನೃಪತುಂಗನೇ ಚಕ್ರವರ್ತಿ
ಪಂಪನಲ್ಲಿ ಮುಖ್ಯಮಂತ್ರಿ
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ
ಸರಸ್ವತಿಯೆ ರಚಿಸಿದೊಂದು

ನಿತ್ಯ ಸಚಿವ ಮಂಡಲ
ತನಗೆ ರುಚಿರ ಕುಂಡಲ

***

ಕುವೆಂಪು ಅವರ ಪದ್ಯರೂಪದ ಉತ್ತರ ರಾಜಕಾರಣಿಗಳನ್ನು ಇನ್ನಷ್ಟು ಕೆರಳಿಸಿತು. ಅವರನ್ನು ಮೆಳ್ಳಗಣ್ಣು ಎಂದು ಟೀಕಿಸಿದ್ದು ಕೂಡ ಬೆಂಕಿಗೆ ಇನ್ನಷ್ಟು ತುಪ್ಪ ಸುರಿದಂತೆ ಆಗಿತ್ತು. ಮೈಸೂರಿನಲ್ಲಿ ಕೆಲವರು ಈ ಪದ್ಯವನ್ನು ಸಾವಿರಾರು ಪ್ರತಿ ಮಾಡಿ ಹಂಚಿಬಿಟ್ಟರು. ವಿಷಯ ಸಚಿವ ಸಂಪುಟದ ಮುಂದೆ ಬಂತು. ಆಗ ಮುಖ್ಯಮಂತ್ರಿಯಾಗಿದ್ದವರು ಕೆ.ಸಿ.ರೆಡ್ಡಿ. ಸಂಪುಟ ಸಭೆಯಲ್ಲಿ ಕೆಲವು ಸಚಿವರು ಕುವೆಂಪು ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಅವರ ಬಡ್ತಿ ರದ್ದು ಮಾಡಬೇಕು. ಇನ್ನೊಂದು ನೋಟಿಸ್ ನೀಡಬೇಕು ಎಂದೆಲ್ಲಾ ಒತ್ತಾಯಿಸಿದರು.

ಆಗ ಕೆ.ಸಿ.ರೆಡ್ಡಿ ಅವರು 'ಒಂದು ನೋಟಿಸ್‌ಗೆ ಈ ಪದ್ಯ ಬರೆದಿದ್ದಾರೆ. ಇನ್ನೊಂದು ನೋಟಿಸ್ ನೀಡಿದರೆ ಮತ್ತೆ ಮೂರು ಪದ್ಯ ಬರೆಯಬಹುದು. ಬೆಂಕಿಯ ಜೊತೆ ಸರಸ ಒಳ್ಳೆಯದಲ್ಲ' ಎಂದು ಹೇಳಿ ಈ ಬಗ್ಗೆ ತಾವು ವಿಚಾರಣೆ ನಡೆಸುವುದಾಗಿ ಹೇಳಿದರು.

ಅದರಂತೆ ಕೆ.ಸಿ.ರೆಡ್ಡಿ ಅವರು ನಿಟ್ಟೂರು ಶ್ರೀನಿವಾಸರಾಯರ ಬಳಿ ಈ ಬಗ್ಗೆ ಚರ್ಚೆ ನಡೆಸಿದರು. ಆಗ ನಿಟ್ಟೂರು ಶ್ರೀನಿವಾಸರಾಯರು 'ಪುಟ್ಟಪ್ಪ ಕೈ ಎತ್ತಿದರೆ ಕರ್ನಾಟಕವೇ ಕೈ ಎತ್ತುತ್ತದೆ. ಅದಕ್ಕಾಗಿ ನೋಟಿಸ್ ವಾಪಸ್ ಪಡೆಯುವುದೇ ಸೂಕ್ತ' ಎಂದು ಮುಖ್ಯಮಂತ್ರಿಗೆ ಸಲಹೆ ಮಾಡಿದರು. ರೆಡ್ಡಿ ಅವರು ಕುವೆಂಪು ಅವರಿಗೆ ನೀಡಿದ್ದ ನೋಟಿಸ್ ವಾಪಸ್ ಪಡೆದರು.

1929ರ ವೇಳೆಗೆ ಕುವೆಂಪು ಇನ್ನೂ ಯುವಕರು. ಶ್ರೀರಂಗಪಟ್ಟಣದಲ್ಲಿ ಒಂದು ಭಾಷಣ ಮಾಡಿದರು. 'ನಿರಂಕುಶಮತಿಗಳಾಗಿ' ಎಂದು ಜನರಿಗೆ ಕರೆ ನೀಡಿದರು. ಸರ್ಕಾರದ ವಿರುದ್ಧ, ಮೂಢ ನಂಬಿಕೆಗಳ ವಿರುದ್ಧ ಅವರು ಮಾತನಾಡಿದ್ದು ಕೂಡ ಅಧಿಕಾರಸ್ಥರನ್ನು ಕೆರಳಿಸಿತು. ಈ ಬಗ್ಗೆ ವರದಿ ನೀಡುವಂತೆ ಟಿ.ಎಸ್.ವೆಂಕಣ್ಣಯ್ಯ ಅವರನ್ನು ಕೇಳಿಕೊಳ್ಳಲಾಯಿತು. ವೆಂಕಣ್ಣಯ್ಯ ಅವರು ಕುವೆಂಪು ಅವರ ಭಾಷಣವನ್ನು ಪರಿಶೀಲಿಸಿ 'ನನ್ನ ಮಗನಿಗೆ ಬುದ್ಧಿ ಹೇಳಿ ಎಂದು ಯಾರಾದರೂ ಹೇಳಿದರೆ ನಾನು ಇದಕ್ಕಿಂತ ಚೆನ್ನಾಗಿ ಹೇಳಲಾಗದು' ಎಂದು ಸರ್ಕಾರಕ್ಕೆ ವರದಿ ನೀಡಿದರು. ಅದು ಅಲ್ಲಿಗೇ ನಿಂತಿತು.

ಕುವೆಂಪು ಅವರಿಗೆ ವಿನೋಬಾ ಭಾವೆ ಅವರನ್ನು ಕಂಡರೆ ತುಂಬಾ ಗೌರವ. ಯಾವಾಗಲೂ ಅವರನ್ನು ಹೊಗಳುತ್ತಿದ್ದರು. ಒಮ್ಮೆ ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘದ ಕಾರ್ಯಕ್ರಮ. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಅಧ್ಯಕ್ಷತೆ. ಕುವೆಂಪು ಅತಿಥಿಗಳು. ಕುವೆಂಪು ತಮ್ಮ ಭಾಷಣದಲ್ಲಿ ವಿನೋಬಾ ಅವರನ್ನು ಸಾಕಷ್ಟು ಹೊಗಳಿದರು. ಇದು ಕೆಂಗಲ್ ಅವರಿಗೆ ಸರಿಕಾಣಲಿಲ್ಲ. ಅವರು ತಮ್ಮ ಭಾಷಣದಲ್ಲಿ ಕುವೆಂಪು ಅವರು ವಿನೋಬಾ ಅವರನ್ನು ಹೊಗಳಿದ್ದು ಹೆಚ್ಚಾಯಿತು ಎಂದರು. ಇದರಿಂದ ಕುವೆಂಪು ಸಿಟ್ಟಾದರಲ್ಲದೆ ಸಭೆಯನ್ನು ಬಹಿಷ್ಕರಿಸಿ ಹೊರ ನಡೆದರು. ಕೆಂಗಲ್ ಕಸಿವಿಸಿಗೊಂಡರು. ಈ ಸುದ್ದಿ ಯಾವ ಪತ್ರಿಕೆಯಲ್ಲೂ ಬರದಂತೆ ನೋಡಿಕೊಂಡರು.

ಆದರೆ ಈ ಘಟನೆ ಕೆಂಗಲ್ ಮತ್ತು ಕುವೆಂಪು ಅವರ ಸಂಬಂಧವನ್ನು ಹಾಳು ಮಾಡಲಿಲ್ಲ. ಮುಂದೆ ಕುವೆಂಪು ಅವರನ್ನು ಮಹಾರಾಜ ಕಾಲೇಜು ಪ್ರಾಂಶುಪಾಲರನ್ನಾಗಿ ಮಾಡಿದ್ದು ಮತ್ತು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ಮಾಡಿದ್ದು ಕೂಡ ಕೆಂಗಲ್ ಹನುಮಂತಯ್ಯ ಅವರೆ.

ಕೆಂಗಲ್ ಹನುಮಂತಯ್ಯ ಅವರ ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿತ್ತು. ಅವರನ್ನು ಕೆಳಕ್ಕೆ ಇಳಿಸಲು ಕಸರತ್ತುಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಒಮ್ಮೆ ಕುವೆಂಪು ಅವರು ಕೆಂಗಲ್ ಹನುಮಂತಯ್ಯ ಅವರನ್ನು ನೋಡಲು ಅವರ ಮನೆಗೆ ಹೋದರು. ಆಗ ಹನುಮಂತಯ್ಯ ಪ್ಲೇಟೋನ 'ರಿಪಬ್ಲಿಕ್' ಪುಸ್ತಕವನ್ನು ಓದುತ್ತಿದ್ದರು. ಅದನ್ನು ಕಂಡು ಕುವೆಂಪು ಅವರಿಗೆ ಅಚ್ಚರಿಯಾಯಿತು.

'ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿದೆ. ನಿಮ್ಮ ವಿರೋಧಿಗಳು ದಿನಕ್ಕೊಂದು ಆರೋಪ ಮಾಡುತ್ತಿದ್ದಾರೆ. ಆದರೂ ನೀವು ಶಾಂತವಾಗಿ ರಿಪಬ್ಲಿಕ್ ಓದುತ್ತಿದ್ದೀರಲ್ಲ?' ಎಂದು ಕೆಂಗಲ್‌ರನ್ನು ಕುವೆಂಪು ಕೇಳಿದರು.

'ಪುಟ್ಟಪ್ಪ, ನಾನು ನನ್ನ ಬದುಕಿನಲ್ಲಿ ಹಲವಾರು ಬಾರಿ ಆತ್ಮಹತ್ಯೆಗೆ ಮನಸ್ಸು ಮಾಡಿದ್ದೆ. ಆಗೆಲ್ಲಾ ನನ್ನನ್ನು ರಕ್ಷಿಸಿದ್ದು ರಾಮಾಯಣ, ಮಹಾಭಾರತ, ಪ್ಲೇಟೊ, ಅರಿಸ್ಟಾಟಲ್ ಮುಂತಾದವರು. ಈಗ ಅದೆಲ್ಲಾ ಯಾಕೆ. ನೀವು ಅಕ್ಷರದಲ್ಲಿ ಮಹಾಕಾವ್ಯ ರಚಿಸಿದ್ದೀರಿ. ನಾನು ಕಲ್ಲಿನಲ್ಲಿ ಮಹಾಕಾವ್ಯ ರಚಿಸಿದ್ದೇನೆ. ನೋಡೋಣ ಬನ್ನಿ' ಎಂದು ಕುವೆಂಪು ಅವರನ್ನು ವಿಧಾನಸೌಧ ತೋರಿಸಲು ಕರೆದುಕೊಂಡು ಹೋದರು. ಈ ಘಟನೆ ನಡೆದಾಗ ದೇಜಗೌ ಅವರು ಕುವೆಂಪು ಅವರೊಂದಿಗೆ ಇದ್ದರು.

ಒಮ್ಮೆ ವಿನೋಬಾ ಭಾವೆ ಅವರು ಮೈಸೂರಿಗೆ ಬಂದಿದ್ದರು. ಅವರನ್ನು ಕಾಣಲು ಕುವೆಂಪು ಹೋದರು. ಕುವೆಂಪು ಅವರ 'ರಾಮಾಯಣ ದರ್ಶನಂ' ಕಾವ್ಯವನ್ನು ವಿನೋಬಾ ಭಾವೆ ಅವರೂ ಓದಿದ್ದರು. ಭಾವೆ ಅವರನ್ನು ಭೇಟಿ ಮಾಡಿ ಹೊರಡುವಾಗ ಕುವೆಂಪು ಅವರಿಗೆ ವಿನೋಬಾ ಅವರು, 'ನೀವು ನಿಮ್ಮ ಮನೆಗೆ ನನ್ನನ್ನು ಕರೆದೇ ಇಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಅದಕ್ಕೆ ಕುವೆಂಪು ಉತ್ತರ 'ಧನ್ಯೋಸ್ಮಿ' ಎಂದಷ್ಟೆ.

ನಂತರ ವಿನೋಬಾ ಕುವೆಂಪು ಅವರ 'ಉದಯ ರವಿ'ಗೆ ಬಂದರು. ಕುವೆಂಪು 'ರಾಮಾಯಣ ದರ್ಶನಂ' ಬರೆದ ಜಾಗವನ್ನು ಕೇಳಿ ತಿಳಿದುಕೊಂಡು ಅಲ್ಲಿಯೇ ಕೊಂಚ ಕಾಲ ಧ್ಯಾನಸ್ಥರಾಗಿ ಕುಳಿತುಕೊಂಡರು. ಕೆಲವರಿಂದ 'ರಾಮಾಯಣ ದರ್ಶನಂ'ನ ಕೆಲವು ಭಾಗಗಳನ್ನು ಮತ್ತೆ ಓದಿಸಿಕೊಂಡರು. ನಂತರ ಪುರಭವನದಲ್ಲಿ ನಡೆದ ಸಮಾರಂಭದಲ್ಲಿಯೂ ಕುವೆಂಪು ಅವರನ್ನು 'ಸಂತ' ಎಂದು ಕರೆದು ಹೊಗಳಿದರು.

ಕುವೆಂಪು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಆಗಿದ್ದಾಗ ಕೆಲವು ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿತ್ತು. ಆಗ ಒಬ್ಬ ಸಚಿವರು ಕುವೆಂಪು ಅವರಿಗೆ ಫೋನ್ ಮಾಡಿ ತಮ್ಮ ಕಡೆಯವರನ್ನು ಆಯ್ಕೆ ಮಾಡಿಕೊಳ್ಳುವಂತೆ ಒತ್ತಡ ಹೇರಿದರು. ಕುವೆಂಪು ನಿರಾಕರಿಸಿದರು. ಅದಕ್ಕೆ ಸಚಿವರು 'ನನ್ನ ಮಾತನ್ನೇ ಕೇಳುವುದಿಲ್ಲವೇ ನಿಮ್ಮನ್ನು ನೋಡಿಕೊಳ್ಳುತ್ತೇನೆ' ಎಂದರು. ಆಗ ಕುವೆಂಪು 'ಏನ್ ನೋಡಿಕೊಳ್ಳುತ್ತೀಯಾ, ಎಂದು ಫೋನ್ ಇಟ್ಟುಬಿಟ್ಟರು. ಈ ಘಟನೆಗೂ ತಾವೇ ಸಾಕ್ಷಿ ಎಂದು ದೇಜಗೌ ಹೇಳುತ್ತಾರೆ.

**ಇಂತಹ ಸೈದ್ಧಾಂತಿಕ ಸಾಹಿತ್ಯ ಕ್ಷೇತ್ರದ ಮೇರುಪರ್ವತ
ನಮ್ಮ ನಾಡಿನಲ್ಲಿ ಜನಿಸಿದ್ದೇ
ನಮ್ಮ ಪಾಲಿನ ಭಾಗ್ಯ ಎಂದು ಭಾವಿಸೋಣ.**

# ಧನುರ್ಮಾಸದ ಮಹತ್ವ





ಮಾರ್ಗಶಿರ ಮಾಸದಲ್ಲಿ ಧನುರಾಶಿಗೆ ಸೂರ್ಯನು ಪ್ರವೇಶಿಸುವನು. ಧನುರಾಶಿಗೆ ಸೂರ್ಯನ ಪ್ರವೇಶವನ್ನು ಧನುರ್ಮಾಸ ಎನ್ನಲಾಗಿದೆ. ದೇವತೆಗಳಿಗೆ ದಕ್ಷಿಣಾಯಣವು ರಾತ್ರಿಯಾಗಿದೆ. ಉತ್ತರಾಯಣವು ಹಗಲಾಗಿದೆ. ಉತ್ಥಾನದ್ವಾದಶಿಯಂದು ಎದ್ದ ಭಗವಂತನಿಗೆ ಧನುರ್ಮಾಸವು ಅರುಣೋದಯ ಕಾಲವಾಗಿದೆ. ದೇವತೆಗಳು ಅರುಣೋದಯಕಾಲದಲ್ಲಿ ಭಗವಂತನಿಗೆ (ಹುಗ್ಗಿ) ಮುದ್ಗಾನ್ನ ವನ್ನು ನಿವೇದಿಸುವರು.

**ಧನುರ್ಮಾಸದಲ್ಲಿ ದೇವರಿಗೆ ಮುದ್ಗಾನ್ನ (ಹುಗ್ಗಿ) ನೈವೇದ್ಯದ ಮಹತ್ವ**

**ನೀವೇದಯನ್ ಮೇ ಮುದ್ಗಾನ್ನಂ ಸ ವೈ ಭಾಗವತೋತ್ತಮಃ**
**ಕೊದಂಡಸ್ಥೆ ಸವಿತರಿ ಮುದ್ಗಾನ್ನಕ ಯೋ ನಿವೇದಯೇತ್**
**ಸಹಸ್ರವಾರ್ಷಿಕೀ ಪೂಜಾ ದಿನ್ಯೆನೈಕೇನ ಸಿದ್ಧ್ಯತಿ**

ಧನುರ್ಮಾಸದಲ್ಲಿ ಯಾರು ಒಂದು ತಿಂಗಳ ಕಾಲ, ಅರಣೋದಯದಲ್ಲಿ ಎದ್ದು ಸ್ನಾನಾದಿಗಳನ್ನು ಮಾಡಿ ಹುಗ್ಗಿಯ ನೈವೇದ್ಯವನ್ನು ಮಾಡಿ ಭಗವಂತನನ್ನು ಪೂಜಿಸುವನೊ ಅವನು ಭಾಗವತೋತ್ತಮನೆನಿಸುವನು. ಈ ಪೂಜೆಯಿಂದ ಪೂಜಕನಿಗೆ ಸಾವಿರವರ್ಷ ಪೂಜಾಫಲವು ಲಭಿಸುತ್ತದೆ.

**ಮುಖ್ಯಾ ಅರುಣೋದಯೇ ಪೂಜಾ, ಮಧ್ಯಮಾ ಲುಪ್ತಕಾರಕಾ**
**ಅಧಮಾ ಸೂರ್ಯಸಹಿತಾ ಮಧ್ಯಹ್ನೇ ನಿಷ್ಫಲಾ ಭವೇತ್**

## ಧನುರ್ಮಾಸದ ಪೂಜಾ ಸಮಯ

ಧನುರ್ಮಾಸ ಪೂಜೆಯು ಅರುಣೋದಯ ಕಾಲದಲ್ಲಿ ಆಚರಿಸುವುದು ಉತ್ತಮ ಪಕ್ಷವಾಗಿದೆ. ನಕ್ಷತ್ರಗಳು ಕಾಣಿಸದ ಸ್ವಲ್ಪ ಮುಂಜಾನೆಯಲ್ಲಿ ಮಾಡಿದ ಪೂಜೆಯು ಮಧ್ಯಮವಾಗಿದೆ. ಸೂರ್ಯೋದಯವಾದ ಮೇಲೆ ಮಾಡಿದ ಪೂಜೆಯು ಅಧಮ ಪಕ್ಷವಾಗಿದೆ. ಮಧ್ಯಾಹ್ನದಲ್ಲಿ ಮಾಡಿದ ಪೂಜೆಯು ನಿಷ್ಫಲವಾದದ್ದು.

**ಆಯನಂ ದಕ್ಷಿಣಂ ರಾತ್ರಿರುತ್ತರಂ ತು ದಿವಾ ಭವೇತ್**
**ದೈವಂ ತತ್ತದಹೋರಾತ್ರಕಂ ಚಾಪಮಾನಂ ವಿಧುರ್ಭುಧಾಃ**
**ಅರುಣೋದಯಕಾಲದ ಪ್ರಾಮುಖ್ಯತೇ**

ದಕ್ಷಿಣಾಯನದ ಆರು ತಿಂಗಳುಗಳಲ್ಲಿ ಎರಡೆರಡು ತಿಂಗಳಿಗೆ ಒಂದು ಯಾಮದಂತೆ ಯಾಮತ್ರಯ ಭಗವಂತನಿಗೆ ಅತ್ಯಂತ ಪ್ರಿಯವಾಗಿದ್ದು ಮೊದಲಿನ ಎರಡು ಯಾಮಗಳು, ಚಾತುರ್ಮಾಸ್ಯ ಕಾಲವಾಗಿದೆ. ಮೂರು ಯಾಮಗಳಲ್ಲಿ ಆಷಾಢ ಏಕಾದಶಿಯಿಂದ ಪ್ರಾರಂಭವಾದ ಚಾತುರ್ಮಾಸ್ಯದಲ್ಲಿ ಮಲಗಿದ ಭಗವಂತನು ಕಾರ್ತಿಕ ಮಾಸದ ಶುಕ್ಲ (ಉತ್ಥಾನ) ದ್ವಾದಶಿಯಂದು ಏಳುವನು. ಮಾರ್ಗಶಿರ ಮಾಸವಾದರು ಮೂರನೇ ಯಾಮದ ಕಡೆ ಪ್ರಹರವಾಗಿದ್ದು ನಂತರ ಬರುವ ಧನುರ್ಮಾಸ ದೇವತೆಗಳ ಅರುಣೋದಯದ ಕಾಲವಾಗಿದೆ.

**ಸಮೃದ್ಧಿ ಸುಜ್ಞಾನ**
ಕನಸಿನ ಗೋಪುರ ಕಟ್ಟಿ ನಿರೀಕ್ಷೆಯಲ್ಲಿ
ಬದುಕುವುದಕ್ಕಿಂತ ಬದುಕು ಬಂದಂತೆ ಅನುಭವಿಸುತ್ತ
ನೆಮ್ಮದಿ ಕಾಣುವುದು ಉತ್ತಮ

ಕಾರ್ತೀಕಸ್ಯ ಸಿತೇ ಪಕ್ಷೇ ತದೇವ ದಿನಪಂಚಕಮ್
ವಿರೋಧಯಂತಿ ದೇವೇಶಂ ಗತ್ವಾ ಸೇಂದ್ರಾ ದಿವೌಕಸಃ

ಹೀಗೆ ಎದ್ದಿರುವ ಭಗವಂತನಿಗೆ ದೇವತೆಗಳು ಅರುಣೋದಯ ಕಾಲವಾದ ಧನುರ್ಮಾಸದಲ್ಲಿ ಹುಗ್ಗಿಯನ್ನು ನಿವೇದಿಸುವರು. ಆದ್ದರಿಂದ ಪ್ರತಿಯೊಬ್ಬನೂ ಸೂರ್ಯನು ಧನುರಾಶಿಯಲ್ಲಿರುವವರೆಗೂ ಒಂದು ತಿಂಗಳು ಕಾಲ ಸೂರ್ಯೋದಯ ಮೊದಲು ತೊಂಬತ್ತಾರು ನಿಮಿಷ ಮೊದಲು ದೇವರಪೂಜೆಯನ್ನು ಮಾಡಿ ಮುದ್ಗಾನ್ನ (ಹುಗ್ಗಿಯನ್ನು ಹಾಗೂ ಇತರ ಪಾಯಸಾದಿ ಭಕ್ಷ್ಯಗಳನ್ನು ಭಗವಂತನಿಗೆ ನೈವೇದ್ಯ ಮಾಡಬೇಕು. ಸಂಧ್ಯಾವಂಧನೆ ಮೊದಲಾದ ನಿತ್ಯಾಹ್ನಿಕವನ್ನು ಪೂಜಾ ನಂತರ ಮಾಡಿದರೂ ದೋಷವಿರುವುದಿಲ್ಲ. ಮೊದಲೂ ಭಗವಂತನಿಗೆ ಪೂಜೆ ಹಾಗೂ ಹುಗ್ಗಿಯನ್ನು ನಿವೇದಿಸಿ ನಂತರ ಆಹ್ನಿಕವನ್ನು ಮಾಡಬಹುದು


ಯಥಾ ಸಂಕೋಚ್ಯ ಸತ್ಕರ್ಮ ಭುಂಕ್ತೆ ಲ್ವದ್ವಾದಶಿ ದಿನೇ
ತಥಾ ಪ್ರಾತರ್ಧನುರ್ಮಾಸೇ ತ್ಯಕ್ತ್ವಾ ಕರ್ಮಾನ್ಯಾರ್ಚಯೇತ್

ಉಷಃಕಾಲದಲ್ಲಿ ಎದ್ದು ಪೂಜೆ ಹುಗ್ಗಿ ನಿವೇದನೆಯನ್ನು ಮಾಡುತ್ತಿದ್ದರೆ ನಿತ್ಯ ಸಂಧ್ಯಾವಂದನಾದಿ ಲೋಪ ಬರುತ್ತದೆ ಎಂದು ಯಾರಾದರು ದೇವರ ಪೂಜಾದಿಗಳನ್ನು ಮಾಡದೆ ನಿತ್ಯಾಹ್ನಿಕದಲ್ಲೇ ನಿರತನಾಗುವನೋ ಏಳು ಜನ್ಮ ನಿರ್ಧನನಾಗುವನು.
ಯಃ ಕರ್ಮಹಾನಿಮಾಶಂಕ್ಯ ನಾರ್ಚಯೇದುಷನೀಶ್ವರಮ್

ವಿಷ್ಣವೇ ಕಾರ್ಮುಕೇ ಪಾತ್ರಃ
ಸಪ್ತ ಜನ್ಮಸು ನಿರ್ಧನಃ

ಅರುಣೋದಯ ಕಾಲದಲ್ಲಿ ಮೊದಲು ಷೋಡೋಶೋಪಾಚರ ಪೂಜೆ, ನಂತರ ಪಾಯಸ ಮುಂತಾದ ಭಕ್ಷ್ಯಗಳ ಜೊತೆಗೆ ಹುಗ್ಗಿಯ ನೈವೇದ್ಯ, ಆನಂತರ ನಿತ್ಯಾಹ್ನಿಕವನ್ನು ಮಾಡಿ ಸೂರ್ಯೋದಯವಾದ ಮೇಲೆ ಬ್ರಾಹ್ಮಣರ ಭೋಜನವನ್ನು ಮಾಡಿಸಿ ತಾನು ಭುಂಜಿಸಬೇಕು.

ಅರ್ಚಯಿತ್ವಾ ಹರಿಂ ಪಶ್ಚಾತ್ ಧನುರ್ಮಾಸೇಂತ್ಯಾಮಾಕಂ
ಪಶ್ಚಾತ್ ಸಂಧ್ಯಾಮುಪಾಸೀತ ಧರ್ಮಲೋಪೋ ನ ವಿಧ್ಯತೇ ॐ



## ಸಂಪ್ರೀತಿ ಸುಘೋಷ



ಮಾನಸಿಕ ಆರೋಗ್ಯ
ಸದೃಢವಾಗಬೇಕಾದರೆ
ಉತ್ತಮ ಆಲೋಚನೆ, ಧ್ಯಾನ,
ಜಪ ಅನುಷ್ಠಾನ ಮಾತ್ರದಿಂದ
ಸ್ವಸ್ಥಚಿತ್ತವನ್ನು ಬೆಳೆಸಿಕೊಳ್ಳಬೇಕು.

ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ



# ಮಾನವ ಹಕ್ಕುಗಳ ದಿನ

10 ಡಿಸೆಂಬರ್ 2023 ವಿಶ್ವದ ಅತ್ಯಂತ ಅದ್ಭುತವಾದ ಜಾಗತಿಕ ಪ್ರತಿಜ್ಞೆಗಳ 75 ನೇ ವಾರ್ಷಿಕೋತ್ಸವವನ್ನು ಗುರುತಿಸುತ್ತದೆ: ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (UDHR). ಜನಾಂಗ, ಬಣ್ಣ, ಧರ್ಮ, ಲಿಂಗ, ಭಾಷೆ, ರಾಜಕೀಯ ಅಥವಾ ಇತರ ಅಭಿಪ್ರಾಯಗಳು, ರಾಷ್ಟ್ರೀಯ ಅಥವಾ ಸಾಮಾಜಿಕ ಮೂಲ, ಆಸ್ತಿ, ಜನ್ಮ ಅಥವಾ ಇತರ ಸ್ಥಾನಮಾನಗಳನ್ನು ಲೆಕ್ಕಿಸದೆ – ಈ ಹೆಗ್ಗುರುತು ದಾಖಲೆಯು ಮಾನವನಾಗಿ ಎಲ್ಲರಿಗೂ ಅರ್ಹವಾದ ಅನಿರ್ದಿಷ್ಟ ಹಕ್ಕುಗಳನ್ನು ಪ್ರತಿಪಾದಿಸುತ್ತದೆ.

10 ಡಿಸೆಂಬರ್ 1948 ರಂದು ಪ್ಯಾರಿಸ್‌ನಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಿಂದ ಘೋಷಣೆಯನ್ನು ಘೋಷಿಸಲಾಯಿತು. ಮೊದಲ ಬಾರಿಗೆ ಮೂಲಭೂತ ಮಾನವ ಹಕ್ಕುಗಳನ್ನು ಸಾರ್ವತ್ರಿಕವಾಗಿ ರಕ್ಷಿಸಲಾಗಿದೆ. 500 ಕ್ಕೂ ಹೆಚ್ಚು ಭಾಷೆಗಳಲ್ಲಿ ಇದು ಲಭ್ಯವಿದೆ, ಇದು ವಿಶ್ವದಲ್ಲೇ ಅತಿ ಹೆಚ್ಚು ಅನುವಾದಿತ ದಾಖಲೆಯಾಗಿದೆ .

ಸಾರ್ವತ್ರಿಕತೆ, ಪ್ರಗತಿ ಮತ್ತು ನಿಶ್ಚಿತಾರ್ಥದ ಮೇಲೆ ಕೇಂದ್ರೀಕರಿಸುವ ಒಂದು ವರ್ಷದ ಅವಧಿಯ ಉಪಕ್ರಮವು ಡಿಸೆಂಬರ್ 2023 ರಲ್ಲಿ ಉನ್ನತ ಮಟ್ಟದ ಈವೆಂಟ್‌ನಲ್ಲಿ ಕೊನೆಗೊಳ್ಳುತ್ತದೆ, ಇದು ಮಾನವ ಹಕ್ಕುಗಳ ಭವಿಷ್ಯದ ದೃಷ್ಟಿಗಾಗಿ ಜಾಗತಿಕ ಪ್ರತಿಜ್ಞೆಗಳು ಮತ್ತು ಆಲೋಚನೆಗಳನ್ನು ಪ್ರಕಟಿಸುತ್ತದೆ.

### UDHR ಕವರ್

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (UDHR) ಮಾನವ ಹಕ್ಕುಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು ದಾಖಲೆಯಾಗಿದೆ. 1948 ರಲ್ಲಿ ಯುನಿವರ್ಸಲ್ ಡಿಕ್ಲರೇಶನ್ ಆಫ್ ಹ್ಯೂಮನ್ ರೈಟ್ಸ್ ಅನ್ನು ಅಳವಡಿಸಿಕೊಂಡ ನಂತರದ ದಶಕಗಳಲ್ಲಿ ಮಾನವ ಹಕ್ಕುಗಳು ಪ್ರಪಂಚದಾದ್ಯಂತ ಹೆಚ್ಚು ಗುರುತಿಸಲ್ಪಟ್ಟಿವೆ ಮತ್ತು ಹೆಚ್ಚು ಖಾತರಿಪಡಿಸಿವೆ. UDHR ಮಾನವ ಹಕ್ಕುಗಳ ರಕ್ಷಣೆಯ ವಿಸ್ತರಣಾ ವ್ಯವಸ್ಥೆಗೆ ಅಡಿಪಾಯವಾಗಿ ಕಾರ್ಯನಿರ್ವಹಿಸಿದೆ, ಅದು ಇಂದು ವಿಕಲಾಂಗ ವ್ಯಕ್ತಿಗಳು, ಸ್ಥಳೀಯ ಜನರು ಮತ್ತು ವಲಸಿಗರಂತಹ ದುರ್ಬಲ ಗುಂಪುಗಳ ಮೇಲೆ ಕೇಂದ್ರೀಕರಿಸುತ್ತದೆ.

ಆದಾಗ್ಯೂ, UDHR ನ ಭರವಸೆ, ಘನತೆ ಮತ್ತು ಹಕ್ಕುಗಳಲ್ಲಿ ಸಮಾನತೆ, ಇತ್ತೀಚಿನ ವರ್ಷಗಳಲ್ಲಿ ನಿರಂತರ ಆಕ್ರಮಣಕ್ಕೆ ಒಳಗಾಗಿದೆ. ಜಗತ್ತು ಹೊಸ ಸವಾಲುಗಳನ್ನು ಎದುರಿಸುತ್ತಿರುವಾಗ – ಸಾಂಕ್ರಾಮಿಕ ರೋಗಗಳು, ಘರ್ಷಣೆಗಳು, ಸ್ಫೋಟಗೊಳ್ಳುತ್ತಿರುವ ಅಸಮಾನತೆಗಳು, ನೈತಿಕವಾಗಿ ದಿವಾಳಿಯಾದ ಜಾಗತಿಕ ಹಣಕಾಸು ವ್ಯವಸ್ಥೆ, ವರ್ಣಭೇದ ನೀತಿ, ಹವಾಮಾನ ಬದಲಾವಣೆ – UDHR ನಲ್ಲಿ ಪ್ರತಿಪಾದಿಸಲಾದ ಮೌಲ್ಯಗಳು ಮತ್ತು ಹಕ್ಕುಗಳು ನಮ್ಮ ಸಾಮೂಹಿಕ ಕ್ರಿಯೆಗಳಿಗೆ ಮಾರ್ಗಸೂಚಿಗಳನ್ನು ಒದಗಿಸುತ್ತವೆ. ವರ್ಷದ ಮಾನವ ಹಕ್ಕುಗಳ 75 ಉಪಕ್ರಮವು UDHR ನ ಸಾರ್ವತ್ರಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಕ್ರಿಯಾಶೀಲತೆಯ ಬಗ್ಗೆ ಹೆಚ್ಚಿನ ಜ್ಞಾನದ ಕಡೆಗೆ ತಿಳುವಳಿಕೆ ಮತ್ತು ಕ್ರಿಯೆಯ ಸೂಜಿಯನ್ನು ಬದಲಾಯಿಸಲು ಪ್ರಯತ್ನಿಸುತ್ತದೆ.

## ಯುವಕರು ಮತ್ತು ಮಾನವ ಹಕ್ಕುಗಳು 75 ಉಪಕ್ರಮ

ಯುವಜನರು ತಮ್ಮ ಹಕ್ಕುಗಳನ್ನು ಚಲಾಯಿಸುವಲ್ಲಿ ನಿರ್ದಿಷ್ಟ ಸವಾಲುಗಳನ್ನು ಎದುರಿಸುತ್ತಾರೆ, ಆಗಾಗ್ಗೆ ಮಾನವ ಹಕ್ಕುಗಳ ಕ್ರಿಯಾಶೀಲತೆಯ ಮುಂಚೂಣಿಯಲ್ಲಿರುವಾಗ, ಯುವಕರ ನಿಶ್ಚಿತಾರ್ಥವು ಉಪಕ್ರಮದ ಪ್ರಮುಖ ಅಂಶವಾಗಿದೆ. ಅಂತಹ ನಿಶ್ಚಿತಾರ್ಥವನ್ನು ಖಚಿತಪಡಿಸಿಕೊಳ್ಳಲು, OHCHR ಯುವ ಸಲಹಾ ಗುಂಪನ್ನು ಸ್ಥಾಪಿಸಿತು, ಇದು ಮಾನವ ಹಕ್ಕುಗಳ 75 ಚಟುವಟಿಕೆಗಳ ವಿನ್ಯಾಸ, ಅನುಷ್ಠಾನ ಮತ್ತು ಅನುಸರಣೆಯಲ್ಲಿ ಭಾಗವಹಿಸುತ್ತದೆ. ಶಿಕ್ಷಣದ ಹಕ್ಕಿನಿಂದ ಸಮಾನ ವೇತನದವರೆಗೆ, ಗಳಆಊಖ ಮೊದಲ ಬಾರಿಗೆ ಎಲ್ಲಾ ಮಾನವೀಯತೆಯ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಹಕ್ಕುಗಳನ್ನು ಸ್ಥಾಪಿಸಿತು. "ಎಲ್ಲಾ ಜನರು ಮತ್ತು ಎಲ್ಲಾ ರಾಷ್ಟ್ರಗಳ ಸಾಧನೆಯ ಸಾಮಾನ್ಯ ಮಾನದಂಡ", UDHR ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳು ಮತ್ತು ನೀತಿಗಳಿಗೆ ಜಾಗತಿಕ ನೀಲನಕ್ಷೆಯಾಗಿದೆ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ 2030 ರ ಕಾರ್ಯಸೂಚಿಯ ತಳಹದಿಯಾಗಿದೆ.

UDHR ಘೋಷಣೆಯ ನಂತರ (ಸುಮಾರು) 75 ವರ್ಷಗಳಲ್ಲಿ, ಮಾನವ ಹಕ್ಕುಗಳು ಮುಂದುವರೆದಿದೆ. ಆದಾಗ್ಯೂ, ಪ್ರಗತಿಯು ಹಕ್ಕುಗಳು ಮತ್ತು ಸಮಾನತೆಯ ಹೋರಾಟವು ಎಂದಿಗೂ ಕೊನೆಗೊಳ್ಳುತ್ತದೆ ಎಂದಲ್ಲ. ಯಾವಾಗ ಮತ್ತು ಎಲ್ಲಿ ಮಾನವೀಯತೆಯ ಮೌಲ್ಯಗಳನ್ನು ಕೈಬಿಡಲಾಗುತ್ತದೆಯೋ, ನಾವೆಲ್ಲರೂ ಹೆಚ್ಚಿನ ಅಪಾಯದಲ್ಲಿದ್ದೇವೆ ಎಂದರ್ಥ. ಇಂದಿನ ದೊಡ್ಡ ಬಿಕ್ಕಟ್ಟುಗಳಿಗೆ ಪರಿಹಾರಗಳು ಮಾನವ ಹಕ್ಕುಗಳಲ್ಲಿ ಬೇರೂರಿದೆ. ಹಕ್ಕುಗಳ ಉಲ್ಲಂಘನೆಗಳು ಗಡಿಯುದ್ದಕ್ಕೂ ಮತ್ತು ತಲೆಮಾರುಗಳಾದ್ಯಂತ ಪ್ರತಿಧ್ವನಿಸುತ್ತವೆ. ಇವುಗಳಾಗಬಹುದು. ನಮ್ಮ ಮತ್ತು ಇತರರ ಹಕ್ಕುಗಳಿಗಾಗಿ ನಾವು ನಿಲ್ಲಬೇಕು. ಮಾನವ ಹಕ್ಕುಗಳ ಪರವಾಗಿ ನಿಲ್ಲುವಂತೆ UDHR ಎಲ್ಲರಿಗೂ ಕರೆ ನೀಡುತ್ತದೆ ಹಾಗೂ ಅದರಲ್ಲಿ ನಮ್ಮ ಒಂದು ಪಾತ್ರವಿದೆ.

ಸರ್ಕಾರಗಳು ಮತ್ತು ಜನರ ನಡುವೆ ಮತ್ತು ಸಮಾಜಗಳ ನಡುವಿನ ಸಾಮಾಜಿಕ ಒಪ್ಪಂದವನ್ನು ನವೀಕರಿಸಬೇಕಾಗಿದೆ, ಇದರಿಂದಾಗಿ ನಂಬಿಕೆಯನ್ನು ಪುನರ್ನಿರ್ಮಿಸಲು ನ್ಯಾಯಯುತ ಮತ್ತು ಸುಸ್ಥಿರ ಅಭಿವೃದ್ಧಿಯ ಹಾದಿಯಲ್ಲಿ ಮಾನವ ಹಕ್ಕುಗಳ ಹಂಚಿಕೆಯ ಮತ್ತು ಸಮಗ್ರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು. ॐ



### ಸಂಪ್ರೀತಿ ಸುಘೋಷ



ಯಾರಿಗೆ ಬದುಕುವುದಕ್ಕೆ ಬರುವುದೊ,
ಅವರು ಯಾವುದೇ ಸೌಲಭ್ಯವಿಲ್ಲದಿದ್ದರೂ
ಸಂತೋಷವಾಗಿರುತ್ತಾರೆ.
ಯಾರಿಗೆ ಬದಕಲು ಬರುವುದಿಲ್ಲವೊ,
ಅವರು ಎಲ್ಲ ಸೌಲಭ್ಯವಿದ್ದರೂ
ದುಖಃಪಡುತ್ತಾರೆ.

**ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ**



# ಗರ್ಭಿಣಿಯರ ಆರೈಕೆ



✍ **ಡಾ. ಮಹೇಂದ್ರ ಜಿ, ಪ್ರಾಧ್ಯಾಪಕರು,**
ಸ್ತ್ರೀರೋಗ ವಿಭಾಗ,

ತಾಯ್ತನ ಎಂಬುದು ಮಹಿಳೆಯರ ಜೀವನದ ಅತ್ಯಂತ ಸುಂದರ ಹಾಗೂ ಖುಷಿಯ ದಿನಗಳೆಂದೇ ವರ್ಣಿಸಲಾಗುತ್ತದೆ. ಆದರೆ ದಿನನಿತ್ಯದ ಕೆಲಸಗಳ ಜಂಜಾಟಗಳ ನಡುವೆ ಇನ್ನೂ ಜಗತ್ತನ್ನೇ ಕಾಣದ ಕಂದನ ಆರೈಕೆ, ಬ್ರಹ್ಮಾಂಡವನ್ನೇ ಗರ್ಭದಲ್ಲಿ ಧರಿಸಿ ಸಾವಿರ ಪರಿವರ್ತನೆಗೆ ಒಳಗಾಗುತ್ತಿರುವ ತಾಯಿಯ ದೇಹದ ಕಾಳಜಿ ವಹಿಸುವುದು ಸುಲಭವಾದ ವಿಚಾರವಲ್ಲ.

ಈಗಿನ ಕಾಲದ ಒತ್ತಡದಾಯಕ ಜೀತನಶೈಲಿಯಲ್ಲಿ ವೈದ್ಯಕೀಯ ತಪಾಸಣೆಗಳು, ಪ್ರತಿ ನಿತ್ಯದ ಔಷಧೋಪಚಾರಗಳು, ಪೌಷ್ಟಿಕ ಆಹಾರ ಸೇವನೆ, ವ್ಯಾಯಾಮ, ದೇಹದ ಪರಿವರ್ತನೆಗಳ ತುಲನಾತ್ಮಕ ಹೊಂದಾಣಿಕೆ ಮಾಡಿಕೊಳ್ಳುವುದು, ಮಾನಸಿಕ ಒತ್ತಡಗಳನ್ನು ನಿಭಾಯಿಸುವುದು, ಲಸಿಕೆಗಳ ಬಗ್ಗೆ ಗಮನ ಹರಿಸುವುದು, ಹಂತ–ಹಂತವಾಗಿ ಬದಲಾಗುತ್ತಿರುವ ದೇಹ ಪ್ರಕೃತಿ ಹಾಗೂ ತನ್ನ ಮಗುವಿನ ಉತ್ತಮ ಆರರೋಗ್ಯಕ್ಕಾಗಿ ಹೆಚ್ಚುವರಿ ಆರೈಕೆ ಕ್ರಮಗಳನ್ನು ಅನುಸರಿಸುವುದು ಮುಖ್ಯವಾಗುತ್ತದೆ.

ಸೂಕ್ತ ವಯಸ್ಸಿನೊಳಗಡೆ ಮೊದಲ ಗರ್ಭಧಾರಣೆ ಮಾಡುವುದರಿಂದ ಬಸರಿ ಹೆಂಗಸರಲ್ಲಿ ಆಗುವ ಸಮಸ್ಯೆಗಳಾದ ಬಸಿರುನಂಜು (pre eclampsia), ಸಕ್ಕರೆ ಖಾಯಿಲೆ ಹಾಗೂ ಮಗುವಿನಲ್ಲಾಗುವ ವರ್ಣಜಂತುಗಳ ತೊಂದರೆಗಳನ್ನು ತಡೆಗಟ್ಟಬಹುದು. ಗರ್ಭಧಾರಣೆಗೆ ಕನಿಷ್ಠ ಮೂರು ತಿಂಗಳ ಮುಂಚಿತತಾಗಿಯೇ ಫ್ಲೋಕ್ ಆಸಿಡ್ ಜೀತಸತ್ವ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಮಗುವಿನಲ್ಲಾಗುವ ನರಮಂಡಲದ ಧೋಷಗಳನ್ನು ಕಡಿಮೆಗೊಳಿಸಬಹುದು.

ಗರ್ಭಧಾರಣೆಯಾಗುತ್ತಿದ್ದಂತೆ ಮಾನಸಿಕವಾಗಿ ಮಹಿಳೆಯಲ್ಲಾಗುವ ದೈಹಿಕ ಬದಲಾವಣೆಗೆ ಸ್ಪಂದಿಸುವ ಪರಿಸರವನ್ನು ನಿರ್ಮಿಸಿಕೊಡಬೇಕು. ಮುಟ್ಟು ನಿಂತ ಮೊದಲ ತಿಂಗಳಲ್ಲಿ ತುರ್ತು ಪರೀಕ್ಷೆ (UPT) ಮೂಲಕ ಗರ್ಭಧರಿಸಿರುವುದು ಖಚಿತಗೊಂಡಾಗ ಹತ್ತಿರದ ಸ್ತ್ರೀರೋಗ ತಜ್ಞರನ್ನು ಭೇಟಿ ಮಾಡಿ ಗರ್ಭಾವಸ್ಥೆಯ ಮುಂದಿನ ಹೆಜ್ಜೆಗಳ ಬಗ್ಗೆ ಮಾಹಿತಿ ಹೊಂದಬೇಕು. ವೈದ್ಯರು ಸಲಹೆ ನೀಡುವ ರಕ್ತ ಪರೀಕ್ಷೆಗಳನ್ನು ಹಾಗೂ ಸಾಮಾನ್ಯ ದೈಹಿಕ ಪರೀಕ್ಷೆಗಳನ್ನು ಕೈಗೊಂಡು, ರಕ್ತದೊತ್ತಡದ ಪರೀಕ್ಷೆ ಮಾಡಿಸಿಕೊಳ್ಳಬೇಕು. ವೈದ್ಯರ ಸಲಹೆಯಂತೆ ಸ್ಕ್ಯಾನ್ನಿಂಗ್‌ಗಳನ್ನು ತಪ್ಪದೆ ಮಾಡಿಸಿಕೊಳ್ಳುವುದು ಸೂಕ್ತ. ಏಕೆಂದರೆ ಬಸರಿ ಹೆಂಗಸರಲ್ಲಿ ಸರ್ವೆಸಾಮಾನ್ಯವಾಗಿರುವ ಇತರೆ ರೋಗಗಳ ನಿರ್ಣಯ ಪತ್ತೆ ಅತ್ಯಮೂಲ್ಯವಾಗಿರುತ್ತದೆ.

ಹಿಮೋಗ್ಲೋಬಿನ್‌ನ ಮಟ್ಟ, ಥೈರಾಯ್ಡ್ ಹಾರ್ಮೋನ್‌ನ ಬದಲಾವಣೆಗಳು, ರಕ್ತದಲ್ಲಿರುವ ಸಕ್ಕರೆ ಅಂಶದ ಮಟ್ಟ ಇವೆಲವನ್ನು ಗರ್ಭಧರಿಸಿದ ಮೊದಲ ತಿಂಗಳುಗಲ್ಲಿ ತಿಳಿದುಕೊಳ್ಳುವುದು ಅವಶ್ಯಕ ಹಾಗೂ ಆರೋಗ್ಯಕರ ಗರ್ಭಧಾರಣೆಗೆ ದಾರಿ.

ವೈದ್ಯರು ಡೇಟಿಂಗ್ ಸ್ಕ್ಯಾನ್ ಮಾಡಿಸಲು ಸಲಹೆ ನೀಡಿದಲ್ಲಿ ಈ ಸ್ಕ್ಯಾನ್‌ಗೆ ಒಳಗಾಗಬೇಕು. ಈ ಸ್ಕ್ಯಾನ್ ನಿಂದ ಭ್ರೂಣದ ಬೆಳವಣಿಗೆ ಶುರುವಾಗಿದೆಯೇ ಇಲ್ಲವೇ, ಭ್ರೂಣ ಗರ್ಭಾಶಯದಲ್ಲಿಯೇ ಇದೆಯೇ ಅಥವಾ ಬೇರೆ ಜಾಗದಲ್ಲಿ ಸ್ಥಾಪಿತವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಬಹುದು ಇದರೊಟ್ಟಿಗೆ, ಭ್ರೂಣದ ನಿಖರವಾದ ವಾರಗಳು ಅಥವಾ ವಯಸ್ಸನ್ನು ಹಾಗೂ ನಿರೀಕ್ಷಿತ ಮಗುವಿನ ಜನನ ದಿನಾಂಕವನ್ನು ತಿಳಿಯಬಹುದು.

ಗರ್ಭಧರಿಸಿದ ಮದಲ ತಿಂಗಳುಗಳಲ್ಲಿ ಆಯಾಸವಾಗುವುದು, ವಾಕರಿಕೆ ಹಾಗೂ ವಾಂತಿಯಾಗುವುದು ಸರ್ವೇಸಾಮಾನ್ಯ. ಆದರೆ ಅತಿಯಾದ ಆಯಾಸ, ಅತಿಯಾದ ವಾಂತಿ ಅಥವಾ ಅತೀ ಹೆಚ್ಚುಬಾರಿ ಮೂತ್ರವಿಸರ್ಜನೆ, ಬಿಳಿ ಮುಟ್ಟಿನಂತಹ ಸಮಸ್ಯೆಗಳು ಬಂದಲ್ಲಿ ವೈದ್ಯರನ್ನು ಭೇಟಿಯಾಗುವುದು ಸೂಕ್ತ.

ಮೊದಲ ತ್ರೈಮಾಸದಲ್ಲಿ ಒಂದು ಬಾರಿ ಧನುರ್ವಾಯು ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ತದ ನಂತರ ನಾಲ್ಕು ವಾರಗಳ ನಂತರ ಇನ್ನೊಂದು ಢೋಸ್ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ಇದರಿಂದ ನವಜಾತ ಶಿಶುವಿನ ಧನುರ್ವಾಯುವಿನಂತಹ ರೋಗಗಳನ್ನು ತಡೆಗಟ್ಟಬಹುದು. ಇವೆಲ್ಲದರ ಜೊತೆಗೆ ಪೌಷ್ಟಿಕ ಆಹಾರ ಸೇವನೆ, ದಿನನಿತ್ಯದ ವ್ಯಾಯಾಮ, ಧ್ಯಾನ, ದಿನನಿತ್ಯ ಔಷಧಗಳ ಸೇವನೆ, ಸಮರ್ಪಕ ವಿಶ್ರಾಂತಿ, ಗರ್ಭಿಣಿ ಸ್ತ್ರೀಯರ ಜವಾಬ್ದಾರಿಗಳು. ಮೊದಲ ಹಾಗೂ ಎರಡನೆ ತ್ರೈಮಾಸದಲ್ಲಿ ಮಗುವಿನ ಅಂಗಾಂಗಳ ಬೆಳವಣಿಗೆ ಆಗುತ್ತಿರುತ್ತದೆ. ಆದ್ದರಿಂದ ಯಾವುದೇ ವೈದ್ಯರ ಸಲಹೆ ಇಲ್ಲದೆ ಔಷಧಗಳನ್ನು ತೆಗೆದುಕೊಳ್ಳುವುದು, X-ray,$^{1}$n ಸ್ಕಾನ್‌ಗಳನ್ನು ಮಾಡಿಸುವುದು ಹಾನಿಕಾರಕ. ಹನ್ನೊಂದರಿಂದ ಹದಿಮೂರು ವಾರಗಳಾಗುತ್ತಿದಂತೆಯೇ ಅಂದರೆ ಮೂರು ತಿಂಗಳುಗಳು ತುಂಬುತ್ತಿದ್ದಂತೆಯೇ NT-NB ಸ್ಕಾನ್‌ಗೆ ಒಳಪಡಬೇಕು. ಇದರಿಂದ ಮಗುವಿನ ನರಮಂಡಲ ಸಮಸ್ಯೆ ಹಾಗೂ ವರ್ಣತಂತುಗಳ ತೊಂದರೆಗಳನ್ನು ಕಂಡುಹಿಡಿಯಬಹುದು. ಇದರ ಜೊತೆಗೆ ಮಗುವಿನ ಬೆಳವಣಿಗೆಯ ಬಗ್ಗೆಯ ಮಾಹಿತಿ ತಿಳಿಯುತ್ತದೆ.

ತದನಂತರ ಐರನ್ ಹಾಗೂ ಕ್ಯಾಲ್ಸಿಯಂ ಮಾತ್ರೆಗಳನ್ನು ವೈದ್ಯರ ಸಲಹೆಯಂತೆ ಸೇವಿಸಲು ಪ್ರಾರಂಭಿಸಬೇಕು. ಇಪ್ಪತ್ತನೇ ವಾರವಾಗುತ್ತಿದಂತೆಯೇ (5 ತಿಂಗಳು) ಅಂಗಾಂಗದೋಷಗಳ ಸ್ಕಾನ್‌ಗೆ ಒಳಗಾಗಬೇಕು. ಇದರಿಂದ ಮಗುವಿನಲ್ಲಿ ಹುಟ್ಟಿನಿಂದ ಕಂಡುಬರುವ ಬೆಳವಣಿಗೆ ದೋಷಗಳ ಬಗ್ಗೆ ಮಾಹಿತಿ ತಿಳಿಯುತ್ತದೆ.

ಇಪ್ಪತ್ತನಾಲ್ಕರಿಂದ ಇಪ್ಪತ್ತಾರು ವಾರಗಳ ಒಳಗೆ OGCT ಎನ್ನುವ ರಕ್ತದಲ್ಲಿ ಸಕ್ಕರೆ ಅಂಶದ ಮಟ್ಟ ತಿಳಿಯಲು ಉಪಕಾರಿಯಾಗಿರುವ ಪರೀಕ್ಷೆಯನ್ನು ಮಾಡಿಸಬೇಕು. ಇದರೊಟ್ಟಿಗೆ ಹಿಮೋಗ್ಲೋಬಿನ್ ಅಂಶವನ್ನು ತಿಳಿದುಕೊಳ್ಳುವುದು ಸೂಕ್ತ. ವೈದ್ಯರ ಸಲಹೆ ಇಲ್ಲದೆ ಪದೇ ಪದೇ ಯಾವುದೇ ರಕ್ತ ಪರೀಕ್ಷೆಗಳಿಗೆ ಒಳಗಾಗುವುದು ಉಚಿತವಲ್ಲ, ಇದರಿಂದ ಆತಂಕವೇ ಹೆಚ್ಚು. ತದನಂತರ ಇಪ್ಪತ್ತೆಂಟರಿಂದ ಮೂವತ್ತೆರಡು ವಾರಗಳಲ್ಲಿ ಒಮ್ಮೆ ಬೆಳವಣಿಗೆ ಹಂತದ ಸ್ಕ್ಯಾನ್ ಮಾಡಿಸಿ ಮಗುವಿನ ಬೆಳವಣಿಗೆ, ತೂಕ, ಮಗುವಿನ ಸುತ್ತಲಿನ ನೀರಿನ ಮಟ್ಟ (ಆಮ್ನಿಯೋಟಿಕ್ ಫ್ಲೂಯಿಡ್ ಅಂಶ) ಮಾಸು ಅಥವಾ ಪ್ಲಾಸೆಂಟಾದ ನಿಖರವಾದ ಜಾಗದ ಬಗ್ಗೆ ಮಾಹಿತಿ ಹೊಂದಬೇಕು.

ತಾಯಿಯು ಯಾವುದೇ ತಿಂಗಳ ಗರ್ಭಸ್ತಿತಿಯಲ್ಲಿದ್ದರೂ ಅತಿಯಾದ ವಾಂತಿ, ರಕ್ತಸ್ರಾವವಾಗುವುದು, ಕಣ್ಣು ಮಂಜಾಗುವುದು, ಮೇಲೊಟ್ಟೆ ನೋವು, ಉರಿಮೂತ್ರ, ಬಹುಬಾರಿ ಮೂತ್ರ ವಿಸರ್ಜನೆ, ಜ್ವರ, ದದ್ದುಗಳು, ನೀರು ಸೋರುವಿಕೆ, ಬಿಳಿಮುಟ್ಟಿನಂತಹ ಸಮಸ್ಯೆಗಳಾದಲ್ಲಿ ಶೀಘ್ರವಾಗಿ ವೈದ್ಯರನ್ನು ಭೇಟಿಯಾಗಬೇಕು. ಪ್ರತಿದಿನ ಮಗುವಿನ ಚಲನೆ ಕನಿಷ್ಠ 10 ಸಾರಿಗಿಂತಲೂ ಕಡಿಮೆಯಾದಲ್ಲಿ ತಕ್ಷಣ ವೈದ್ಯರನ್ನು ಕಂಡು ಸ್ಕ್ಯಾನಿಂಗ್ ಮಾಡಿಸಿಕೊಳ್ಳಬೇಕು. ತಾಯಿಯ ದೇಹದ ಮೇಲೆ ಆಗುವ ಕೆಲವು ಸಹಜ ಪರಿವರ್ತನೆಗಳಾದಂತಹ ತೂಕ ಹೆಚ್ಚಾಗುವಿಕೆ (ಗರಿಷ್ಠ 10–12 kg), ಸ್ತನಗಳ ಬದಲಾವಣೆಗಳು, ಹೊಟ್ಟೆ ಮೇಲೆ ಹಿಗ್ಗಿದ ಗುರುತುಗಳು, ಗೆರೆಗಳು, ಕೆಲವೊಮ್ಮೆ ಮುಖದ ಮೇಲೆ ಮೊಡವೆಗಳು, ವಿಶ್ರಾಂತಿಯಿಂದ ಕಡಿಮೆಯಾಗುವ ಕಾಲೂತ ಸರ್ವೇಸಾಮಾನ್ಯ. ಇವೆಲ್ಲದಕ್ಕೆ ಭಯ ಪಡುವ ಅವಶ್ಯಕತೆ ಇರುವುದಿಲ್ಲ. ವೈದ್ಯರು ಸೂಚಿಸಿದ ಹೊರತು ಆಹಾರ ಕ್ರಮದಲ್ಲಿ ಯಾವುದೇ ಬದಲಾವಣೆ ಬೇಡ.

ತಾಯ್ತನ ಹೆಣ್ಣಿನ ಜೀವನದ ಒಂದು ಅದ್ಭುತ ಅನುಭವ. ಇದನ್ನು ಖುಷಿಯಿಂದ ಸ್ವೀಕರಿಸಿ, ಪರಿವರ್ತನೆಗಳಿಗೆ ಹೆದರದೆ ಹೊಂದಿಕೊಳ್ಳಿ, ಒಂದು ಆರೋಗ್ಯಕರ ಮಗುವಿಗೆ ಜನ್ಮ ಕೊಡುವ ಬಯಕೆ ಹಾಗೂ ಹಕ್ಕು ನಿಮ್ಮದು ಅದನ್ನು ಸಹಕಾರಗೊಳಿಸುವ ಕರ್ತವ್ಯ ನಮ್ಮದು. ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ನಿಮ್ಮೊಟ್ಟಿಗೆ ನಾವಿದ್ದೇವೆ, ಹೆದರಿಕೆ ಬೇಡ!


************************** ಓಂ



**ಸಮೃದ್ಧಿ ಸುಜ್ಞಾನ**

ಅದೃಷ್ಟದಿಂದ ಬಂದ ಸಂಪತ್ತು ಅಹಂಕಾರ ತರಿಸುತ್ತದೆ
ಬುದ್ಧಿವಂತಿಕೆಯಿಂದ ಬಂದ ಸಂಪತ್ತು ಸಂತೋಷ ಕೊಡುತ್ತದೆ
ಕಷ್ಟಪಟ್ಟು ಸಂಪಾದಿಸಿದ ಸಂಪತ್ತು ಸಂತೃಪ್ತಿ ನೀಡುತ್ತದೆ.

# ಜನಸಾಮಾನ್ಯ ಭಕ್ತರ ದೈವ ~ ಶಬರಿಮಲೆ ಅಯ್ಯಪ್ಪ



✍ ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)
ಸಂಸ್ಕೃತಿ ಚಿಂತಕರು

ತಿರುಪತಿ, ಕೊಲ್ಹಾಪುರ, ವೈಷ್ಣೋದೇವಿ, ಉಡುಪಿ, ಗುರುವಾಯೂರು, ಕಾಳಿಘಟ್ ಇತ್ಯಾದಿ ಯಾವುದೇ ದೇವಸ್ಥಾನಕ್ಕೆ ನಾವು ಮನಸ್ಸಾದಾಗೆಲ್ಲ ಹೋಗಬಹುದು. ಅಥವಾ ಆ ದೇವಸ್ಥಾನಗಳು ತೆರೆದಿರುವ ದಿನಗಳಲ್ಲಿ ನೇರವಾಗಿ ಭೇಟಿಕೊಟ್ಟು ಬರಬಹುದು. ಕೆಲವು ಕ್ಷೇತ್ರಗಳಿಗೆ ತೀರ ಹತ್ತಿರದಲ್ಲೇ ವಿಮಾನ ನಿಲ್ದಾಣಗಳಿರುತ್ತವೆ. ದೇವಸ್ಥಾನದ ಅಂಗಳದವರೆಗೂ ಬಸ್ಸು, ರೈಲು, ಕಾರುಗಳ ವ್ಯವಸ್ಥೆ ಇರುತ್ತದೆ. ದೇವಸ್ಥಾನಗಳ ಸಂದರ್ಶನ ಹಿಂದಿನ ಕಾಲದಷ್ಟು ಕಠಿಣವಾಗಿಯೇನೂ ಉಳಿದಿಲ್ಲ. ಆದರೆ ಶಬರಿಮಲೆಯ ಅಯ್ಯಪ್ಪನ ದರ್ಶನಭಾಗ್ಯದ ಕತೆ ಹಾಗಲ್ಲ. ಇಲ್ಲಿ ಎರಡು ರೀತಿಯ ಪರೀಕ್ಷೆಗಳನ್ನು ಭಕ್ತ ಹಾದುಬರಬೇಕು. ಒಂದು –ಆತ ಕನಿಷ್ಠ ಮೂರರಿಂದ ಗರಿಷ್ಠ 48 ದಿನಗಳವರೆಗೆ ವ್ರತನಿಷ್ಠನಾಗಬೇಕು. ಎರಡನೆಯದಾಗಿ, ಪಂಪಾ ನದಿಯಿಂದ ಕನಿಷ್ಠ ಎಂಟು ಕೀಲೋಮೀಟರ್ ದೂರವನ್ನು ಕಾಲ್ನಡಿಗೆಯಲ್ಲಿ ಆತ ಕ್ರಮಿಸಬೇಕಾಗುತ್ತದೆ. 'ಸುಲಭನೋ ಹರಿ' ಎಂದರು ದಾಸರು. ಆದರೆ ಹರಿಯ ಪುತ್ರ ಅಷ್ಟು ಸುಲಭನಲ್ಲ!

ಧನುರ್ಮಾಸದ ಕುಳಿರ್ಗಾಳಿಯ ಬೀಸಾಟ ಯಾರಿಗೆ ಗೊತ್ತಿಲ್ಲ! ಎಂಥ ಎಂಟೆದೆಯ ಬಂಟನನ್ನೂ ರಾತ್ರಿ ಹತ್ತದರೆ ಸಾಕು ಕಂಬಳಿಯೊಳಗೆ ಕೈ–ಕಾಲು ಮುದುಡಿ ಮಲಗಿದ ಹುಳುವಾಗಿಸಬಲ್ಲ ಭಯಂಕರ ಚಳಿಗಾಲ ಅದು. ಬೆಳಗ್ಗೆ ಏಳಾದರೂ ಬಿಟ್ಟೇಳದಂತೆ ಅಪ್ಪಿಹಿಡಿವ ಬೆಚ್ಚನೆ ಹಾಸಿಗೆಯ ಅಂಥ ಸಖ್ಯವನ್ನು ಯಾವ ಸುಖಪುರುಷ ತೊರೆದಾನು? ವಿವಾಹಿತರಿಗಂತೂ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಕೋಟಿ ರೂಪಾಯಿ ಅನ್ನಿಸುವಂತೆ ಮಾಡುವ ತಿಂಗಳು ಅದು. ಮದ್ಯ–ಸಿಗರೇಟುಗಳ ವ್ಯಸನಕ್ಕೆ ಬಿದ್ದವರಿಗೆ ಡಿಸೆಂಬರಿನ ಚಳಿ ಆಪಾಯ್ಯಮಾನ. ಇಂಥದೊಂದು ಮಾಸದಲ್ಲಿ ಅಯ್ಯಪ್ಪನ ಭಕ್ತರು ಮನೆಯಿಂದ ಹೊರಡುತ್ತಾರೆ. ಮನೆಯಿಂದ ದೂರದಲ್ಲಿರುವ ಒಂದು ಗುಡಿಯಲ್ಲಿ ತಮ್ಮ ತಾತ್ಕಾಲಿಕ ವಾಸಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಮುಂಜಾನೆ ಮೂರನೆಯ ಜಾವಕ್ಕೆ ಎದ್ದು ಬಾವಿಕಟ್ಟೆಯಲ್ಲಿ ನೀರು ಮೊಗೆದು ನಡುಗುತ್ತ ತಲೆಗೆ ಸುರುವಿಕೊಳ್ಳುತ್ತಾರೆ. ಹತ್ತಿರದ ದೇಗುಲದಲ್ಲಿ ಸೇರಿಕೊಂಡು ದೇವರ ಧ್ಯಾನ–ಸ್ಮರಣೆ–ಭಜನೆಗಳಲ್ಲಿ ತೊಡಗುತ್ತಾರೆ. ಎಲ್ಲರೂ ಕಲೆತು ಅಡುಗೆ ಮಾಡಿ ದೇವರಿಗೆ ಎಡೆ ಇಡುತ್ತಾರೆ. ಊರಿನ ಹುಂಜ ಆರರ ಜಾವಕ್ಕೆ ಕೊಕ್ಕೊಕ್ಕೋ ಎನ್ನುವ ಹೊತ್ತಿಗೆ ಅಯ್ಯಪ್ಪನ ಭಕ್ತರ ದಿನದ ಆರನೆಯ ಒಂದು ಭಾಗ ಕಳೆದಿರುತ್ತದೆ.

ಒಂದಲ್ಲ ಎರಡಲ್ಲ ನಲವತ್ತೊಂದು ದಿನ, ಕೆಲವೊಬ್ಬರು ನಲವತ್ತೆಂಟು ದಿನ ಮಾಡುವ ಭಕ್ತಿಪೂಜೆ ಇದು. ಹೊಟ್ಟೆತುಂಬ ಉಣ್ಣಬೇಡ, ಕಣ್ಣುತುಂಬ ನಿದ್ದೆ ಬೇಡ, ಬಣ್ಣಬಣ್ಣದ ಬಟ್ಟೆ ಬೇಡ, ಸಾರಾಯಿ ಎಣ್ಣೆ ಬೇಡ, 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ...' ಅಬ್ಬಬ್ಬ ಅವೆಷ್ಟು ಬೇಡಗಳ ಪಟ್ಟಿ ಅದು! ಆಷ್ಟು ಬೇಡಗಳ ನಡುವೆಯೂ ಧನುರ್ಮಾಸದ ಚಳಿ ಸಹಿಸಿಕೊಂಡು ವ್ರತಾಚರಣೆ ಮಾಡುವುದು ಅಷ್ಟು ಸುಲಭವಲ್ಲ. ಆದರೂ ಶಬರಿಮಲೆಯಲ್ಲಿ ವರ್ಷವರ್ಷ ಜನಜಾತ್ರೆ ಹೆಚ್ಚುತ್ತಿದೆ. ಪ್ರಪಂಚದಲ್ಲಿ ಅತಿ ಹೆಚ್ಚು ಜನ ಭೇಟಿ ಕೊಡುವ ಧಾರ್ಮಿಕ ಶ್ರದ್ಧಾಕೇಂದ್ರ ಶಬರಿಮಲೆಗೆ ಹೋಗಲು ಇಂದಿಗೂ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲ. ಸಂದರ್ಶಿಸುವವರೆಲ್ಲರೂ ಪಂಪಾ ನದಿಯವರೆಗೆ ಹೋಗಿ ಅಲ್ಲೊಂದು ಪುಟ್ಟ ಜಳಕ ಪೂರೈಸಿಕೊಂಡು ಇರುಮುಡಿಯನ್ನು ತಲೆಯಲ್ಲಿ ಹೊತ್ತು ಎಂಟು ಕಿಲೋಮೀಟರ್‌ಗಳನ್ನು

ಕಾಡಹಾದಿಯಲ್ಲಿ ಕ್ರಮಿಸಿ, ಅಯ್ಯಪ್ಪನ ಸನ್ನಿಧಿಯನ್ನು ಸೇರಬೇಕು. ಎಲ್ಲರೂ ನನ್ನ ಭಕ್ತರೇ, ಎಲ್ಲರೂ ಸಮಾನರೇ, ಯಾರು ಮೇಲಲ್ಲ ಯಾರೂ ಕೀಳಲ್ಲ ಎಂಬ ಅಪ್ಪಟ ಸಮಾಜವಾದಿ ಈ ಅಯ್ಯಪ್ಪ ಬಯಸಿ ಬಂದ ಹುಡುಗಿಯ ಮದುವೆಯ ಬೇಡಿಕೆಯನ್ನು ತಿರಸ್ಕರಿಸುವ ಸಲುವಾಗಿ ಆತ, ಯಾವ ವರ್ಷ ತನ್ನನ್ನು ಕಾಣಲು ಭಕ್ತರ ದಂಡು ಬರುವುದಿಲ್ಲವೋ ಆ ವರ್ಷವೇ ಮದುವೆಯಾಗಿ ಮಂಗಳಸೂತ್ರ ಕಟ್ಟುತ್ತೇನೆಂದು ಮಾತು ಕೊಟ್ಟನಂತೆ! ಅಯ್ಯಪ್ಪನ ಬ್ರಹ್ಮಚಾರಿತ್ವದ ಬಯಕೆಯನ್ನು ನೆರವೇರಿಸಲೋ ಎಂಬಂತೆ ಪ್ರತಿ ವರ್ಷ ಭಕ್ತರ ದಂಡು ಹಿಂಡುಹಿಂಡಾಗಿ ಬಂದು ಆತನ ದರ್ಶನ ಪಡೆಯುತ್ತಲೇ ಇವೆ. ದಶಕದ ಹಿಂದೆ ವಾರ್ಷಿಕ ನಾಲ್ಕು ಕೋಟಿ ಮುಟ್ಟುತ್ತಿದ್ದ ಭಕ್ತರ ಸಂಖ್ಯೆ ಇದೀಗ ಆರು ಕೋಟಿ ದಾಟುವಲ್ಲಿಗೆ ಬಂದು ನಿಂತಿದೆ.

## ಶಬರಿಮಲೆ ಒಂದು ಪರಿಚಯ

ಕೇರಳದ ದಕ್ಷಿಣ ಭಾಗದಲ್ಲಿರುವ, ಪೆರಿಯಾರ್ ಹುಲಿ ಸಂರಕ್ಷಣಾ ಅರಣ್ಯಕ್ಕೆ ಸೇರಿಕೊಂಡಂತಿರುವ ಶಬರಿಮಲೆ ದೇಶ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಧರ್ಮಕ್ಷೇತ್ರ. ಪ್ರಪಂಚದಲ್ಲೇ ಅತಿಹೆಚ್ಚು ವಾರ್ಷಿಕ ಪ್ರವಾಸಿಗರನ್ನು ಸೆಳೆಯುವ ಧಾರ್ಮಿಕ ಸ್ಥಳ ಎಂಬ ಖ್ಯಾತಿ ಶಬರಿಮಲೆಗಿದೆ. ಮಲೆ ಎಂದರೆ ಗೊತ್ತಲ್ಲ? ಅದಕ್ಕೆ ಬೆಟ್ಟ ಎಂಬ ಅರ್ಥವೂ ಉಂಟು. ಶಬರಿಮಲೆ ಬೆಟ್ಟವೂ ಹೌದು, ಬೆಟ್ಟದ ಮೇಲಿನ ದಟ್ಟ ಕಾಡೂ ಹೌದು. ಪಶ್ಚಿಮಘಟ್ಟಗಳ ಭಾಗವಾಗಿರುವ ಇದು ಕೇವಲ ಒಂದು ಬೆಟ್ಟ ಅಲ್ಲ; ಹದಿನೆಂಟು ಬೆಟ್ಟಗಳ ಸಮೂಹ. ಸಮುದ್ರಮಟ್ಟದಿಂದ ಶಬರಿಮಲೆ 1,260 ಮೀಟರ್ ಎತ್ತರದಲ್ಲಿದೆ. ತಲುಪುವ ದಾರಿ ಕಠಿಣ. ಈಗ ಅಷ್ಟೋ ಇಷ್ಟೋ ವಾಹನ ಸೌಕರ್ಯ ಒದಗಿಸಲಾಗಿದೆಯಾದರೂ ಯಾತ್ರೆಯ ಕೊನೆಯ ಭಾಗವಾದ ಎಂಟು ಕಿಲೋಮೀಟರ್‌ಗಳ ದೂರವನ್ನು ನಡೆದೇ ಕ್ರಮಿಸಬೇಕು. ನಡೆಯಲು ಅಶಕ್ತರಾದ ವೃದ್ಧರು ಅಥವಾ ಮಕ್ಕಳಿಗೆ ಡೋಲಿ (ಮೇನೆ) ವ್ಯವಸ್ಥೆ ಇದೆ. ನಿರ್ದಿಷ್ಟ ಮೊತ್ತ ಕೊಟ್ಟರೆ ನಾಲ್ಕು ಜನ ಡೋಲಿಯಲ್ಲಿ ವ್ಯಕ್ತಿಯನ್ನು ಕುಳ್ಳಿರಿಸಿ ಹೊತ್ತು ಸಾಗುತ್ತಾರೆ. ದೇವಸ್ಥಾನದಿಂದ ಮರಳಿ ಪಂಪಾ ನದೀತೀರದವರೆಗೆ ಕರೆ ತರುವುದಕ್ಕೂ ಡೋಲಿಗಳನ್ನು ಬಳಸುತ್ತಾರೆ.

## ಎಲ್ಲಿದೆ ಶಬರಿಮಲೆ

ಶಬರಿಮಲೆ ಪಟ್ಟಣಂತಿಟ್ಟ ಜಿಲ್ಲೆಯಲ್ಲಿದೆ. ವಾಯು, ರೈಲು, ರಸ್ತೆ–ಮೂರೂ ಮಾರ್ಗಗಳಿಂದ ಈ ಸ್ಥಳವನ್ನು ಸುಲಭವಾಗಿ ತಲುಪಬಹುದು. ಹತ್ತಿರದ ವಿಮಾನ ನಿಲ್ದಾಣ ಕೊಚ್ಚಿನ್. ಅಲ್ಲಿಂದ ಬಸ್ಸು ಅಥವಾ ಕ್ಯಾಬ್ ಮೂಲಕ ಶಬರಮಲೆಗೆ ಬರಬಹುದು. ಕೊಟ್ಟಾಯಂವರೆಗೆ ರೈಲಿನಲ್ಲಿ ತೆರಳಿ, ಅನಂತರ ರಸ್ತೆ ಮೂಲಕ ತಲುಪಬಹುದು. ಅಥವಾ ಕೊಟ್ಟಾಯಂ ಮತ್ತು ಚೆಂಗನೂರ್‌ಗಳಿಂದ ಪಂಪಾವರೆಗೆ ರೈಲಿನಲ್ಲಿ ಬಂದು, ಆನಂತರ ಕಾಲುನಡಿಗೆಯಲ್ಲಿ ಬೆಟ್ಟ ಹತ್ತುವ ಸಾಹಸ ಮಾಡಬಹುದು. ವ್ರತಾಚರಣೆ ಹಿಡಿದವರು ಎರುಮೇಲಿಯಿಂದ ತಮ್ಮ ಕಾಲ್ನಡಿಗೆಯ ಪ್ರಯಾಣ ಶುರುಮಾಡುವುದಾದರೆ ಶಬರಿಮಲೆ ತಲುಪಲು ಎರಡು ಅಥವಾ ಮೂರು ದಿನ ಬೇಕು. ಎರುಮೇಲಿಯಿಂದ ಪಂಪಾ ನದಿಯವರೆಗೆ 45 ಕಿಲೋಮೀಟರ್‌ಗಳ ಪ್ರಯಾಣ. ಅಲ್ಲಿಂದ ಅಯ್ಯಪ್ಪನ ಸನ್ನಿಧಿಗೆ ಮತ್ತೆ ಎಂಟು ಕಿಲೋಮೀಟರ್‌ಗಳಷ್ಟು ದೂರ.

## ಬಾಕ್ಸ್

ದೇಶದ ಎಲ್ಲೆಡೆಗಳಿಂದ ತಂಡೋಪತಂಡವಾಗಿ ಬರುತ್ತಿರುವ ಭಕ್ತಗಣ ಜಾತಿ–ಮತ, ಲಿಂಗ–ಭೇದ ಮರೆತು ಭಕ್ತಕೋಟಿಯಲ್ಲಿ ಒಂದಾಗಿ ಬೆರೆಯುವ ಅಪೂರ್ವ ದೃಶ್ಯ ಕಾಣಲು ಸಿಗುವುದು ಪ್ರಾಯಶಃ ಶಬರಿಮಲೆಯಲ್ಲಿ ಮಾತ್ರ.
ರುದ್ರರಮಣೀಯ ಪ್ರಕೃತಿ ಸೊಬಗಿನ ಅಯ್ಯಪ್ಪನ ಈ ಕ್ಷೇತ್ರದಲ್ಲಿ ಭಕ್ತರ ಭಕ್ತಿ–ಸಾಗರದ ಭೋರ್ಗರೆತದಲ್ಲಿ ಜೀವನದ ಒಲವು–ಗೆಲುವು, ಸ್ನೇಹ, ಪ್ರೀತಿ ಎಲ್ಲವೂ ಭಕ್ತಿರಸದಲ್ಲಿ ಸಾಕಾರಗೊಂಡ ಉತ್ಕಟ ಸ್ಪಂದನವನ್ನು ಆ ಸಾನಿಧ್ಯದಲ್ಲೇ ಕಂಡು ಆನಂದಿಸಬೇಕು.

## ಹೆಂಗಸರಿಗೇಕೆ ಪ್ರವೇಶವಿಲ್ಲ.

ಶಬರಿಮಲೆಗೆ ಹೆಂಗಸರು ಹೋಗುವಂತಾಗಬೇಕು. ಹಾಗೊಂದು ವಿವಾದ ಒಂದೆರಡು ವರ್ಷಗಳ ಹಿಂದೆ ಸಣ್ಣದಾಗಿ ಹುಟ್ಟಿ ನಂತರ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಯಿತು. ಹೆಂಗಸರನ್ನು ಯಾಕೆ ಇಲ್ಲಿ ನಿರ್ಬಂಧಿಸಲಾಗಿದೆ? ಇದು ಮಹಿಳಾಸ್ವಾತಂತ್ರ್ಯದ ಹರಣ ಎಂಬ ಬೊಬ್ಬೆ ತೆಗೆದರು ಕೆಲವರು. ಈ ದೇಶದಲ್ಲಿ ನಮಗೆ ಮುಕ್ತ  ಧಾರ್ಮಿಕ ಸ್ವಾತಂತ್ರ್ಯ ಇಲ್ಲವೆ? ನಮ್ಮನ್ನೇಕೆ ಎರಡನೆಯ ದರ್ಜೆಯ ನಾಗರಿಕರಂತೆ ಕಾಣಲಾಗುತ್ತಿದೆ? ಎಂಬ ವಾದ, ಕೂಗಾಟಗಳು ಕೂಡ ಹೊಮ್ಮಿದವು.

ತಮಾಷೆ ಎಂದರೆ, ಶಬರಿಮಲೆಯಲ್ಲಿ ಮಹಿಳೆಯರನ್ನು ನಿರ್ಬಂಧಿಸಬಾರದು; ಅವರಿಗೂ ಮುಕ್ತ ಪ್ರವೇಶ ಒದಗಿಸಬೇಕು ಎಂದು ಮೊದಲು ಗಲಾಟೆ ಎಬ್ಬಿಸಿದವರು ನಾಸ್ತಿಕರೆಂದು ಕರೆಸಿಕೊಳ್ಳುವ ಎಡಪಂಥೀಯರು! ಶಬರಿಮಲೆಯಲ್ಲಿ ಹೆಂಗಸರ ಪ್ರವೇಶದ

ಮೇಲಿನ ತಡೆಯನ್ನು ನಿವಾರಿಸಬೇಕು ಎಂದು ಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದವರು ಈ ಇಡೀ ಪ್ರಕರಣಕ್ಕೆ ಸಂಬಂಧವೇ ಇಲ್ಲದಿದ್ದ ಒಬ್ಬರು ಮುಸ್ಲಿಂ ನ್ಯಾಯವಾದಿ! ಅಂದರೆ ದೇವಸ್ಥಾನಗಳ ವಿಷಯದಲ್ಲಿ ಮೂಗು ತೂರಿಸಿ ಒಂದಷ್ಟು ಗಲಭೆ ಸೃಷ್ಟಿಸಬೇಕು; ಸಮಾಜದಲ್ಲಿ ಅಶಾಂತಿ ಮೂಡಿಸಬೇಕು; ಹಿಂದೂ ಸಮುದಾಯದಲ್ಲಿ ಒಡಕು ತರಬೇಕು ಎಂಬ ಗುಪ್ತಯೋಜನೆಯೊಂದಿಗೆ ಈ ವಿವಾದವನ್ನು ಹುಟ್ಟು ಹಾಕಲಾಗಿತ್ತು ಎಂಬುದು ಅತ್ಯಂತ ಸ್ಪಷ್ಟ.

ವಿವಾದವನ್ನು ಬದಿಗಿಟ್ಟು ಸಮಸ್ಯೆಯನ್ನು ವಿಶ್ಲೇಷಿಸೋಣ. ಶಬರಿಮಲೆಯಲ್ಲಿ ಹೆಂಗರಿಗೆ ಪ್ರವೇಶ ಇಲ್ಲ ಎಂಬುದು ಸತ್ಯಕ್ಕೆ ದೂರವಾದ ವಿಚಾರ. ಹತ್ತು ವರ್ಷದ ಒಳಗಿನ ಹೆಣ್ಣು ಮಕ್ಕಳು ಮತ್ತು 50 ವರ್ಷ ದಾಟಿದ ಹಿರಿಯ ಹೆಂಗಸರು ಶಬರಿಮಲೆಯನ್ನು ಸಂದರ್ಶಿಸಲು ಯಾವ ನಿರ್ಬಂಧವೂ ಇಲ್ಲ. ಹಾಗಾದರೆ ನಡುವಿನ ಒಂದು ವರ್ಗವನ್ನು ಮಾತ್ರ ಯಾಕೆ ನಿಷೇಧಿಸಿದರು? ನಮಗೆಲ್ಲ ತಿಳಿದಿರುವಂತೆ ಹತ್ತರಿಂದ ಐವತ್ತು ವರ್ಷದ ನಡುವಿನ ವಯಸ್ಸು ಹೆಣ್ಣು ಋತುಮತಿಯಾಗುವ ಘಟ್ಟ ಹಿಂದಿನ ಕಾಲದಲ್ಲಿ ಶಬರಿಮಲೆ ಯಾತ್ರೆ ಎಂದರೆ, ಐವತ್ತರವತ್ತು ಕಿಲೋಮೀಟರ್‌ಗಳನ್ನು ದಟ್ಟವಾದ ಅರಣ್ಯಭಾಗದಲ್ಲಿ ಕ್ರಮಿಸಬೇಕಾಗಿತ್ತು. ಅಲ್ಲದೆ ಬೆಟ್ಟಗಳನ್ನು ಹತ್ತಿಳಿದ ಅತ್ಯಂತ ಕಷ್ಟಕರ ಪ್ರಯಾಣ ಅದು. ತಿಂಗಳಿಗೊಮ್ಮೆ ಮುಟ್ಟಾಗುವ ಹೆಂಗಸರಿಗೆ ಅಂತಹ ದೈಹಿಕ ಶ್ರಮದ ನಡಿಗೆ ಕಷ್ಟವೇ. ಅದೂ ಅಲ್ಲದೆ, ಆಗಿನ ಕಾಲದಲ್ಲಿ ಈಗಿನಂತೆ ಶಬರಿಮಲೆಯ ಬುಡದವರೆಗೆ ವಾಹನಗಳು ಹೋಗುತ್ತಿರಲಿಲ್ಲ. ಸರಿಯಾದ ರಸ್ತೆಗಳು ಇರಲಿಲ್ಲ. ಇದ್ದದ್ದು ನೂರಾರು ಭಕ್ತರು ಹೋಗಿಬರುತ್ತಿದ್ದ ನಡಿಗೆಯ ಕಾಲುದಾರಿಗಳು ಮಾತ್ರ. ಹಿಂಸಾಮೃಗಗಳ ಕಾಟ ಬೇರೆ. ರಜಸ್ವಲೆಯರಾಗುತ್ತಿದ್ದ ಹೆಂಗಸರ ನೆತ್ತರು ಮತ್ತು ಬೆವರಿನ ವಾಸನೆಯನ್ನು ಹುಲಿ, ಚಿರತೆಯಂಥ ಮೃಗಗಳು ಕೂಡಲೇ ಗ್ರಹಿಸಿಬಿಡುತ್ತಿದ್ದವು. ಅದು ಒಂದು ಇಡೀ ಗುಂಪನ್ನೇ ಅಪಾಯದ ಅಂಚಿಗೆ ತಂದು ನಿಲ್ಲಿಸಬಹುದಾಗಿತ್ತು. ಈ ಎಲ್ಲ ಕೋನದಿಂದ ಯೋಚಿಸಿದ್ದ ಪೂರ್ವಿಕರು ಹೆಂಗಸರನ್ನು, ಅವರ ಯೌವನದಲ್ಲಿ ಶಬರಿಮಲೆಯಂತಹ ಕಠಿಣ ಯಾತ್ರೆಗೆ ಬರುವುದು ಬೇಡ ಎಂದು ನಿರ್ಬಂಧಿಸಿರಬಹುದು. ಈಗ ಪ್ರಯಾಣ ಅಷ್ಟೊಂದು ಕಷ್ಟಕರವಾಗಿ ಉಳಿದಿಲ್ಲ. ಹಿಂಸಾಮೃಗಗಳ ಭಯವಿಲ್ಲ. ಹಾಗಾಗಿ ಈಗ ಮಹಿಳೆಯರ ದೇವಸ್ಥಾನ ಪ್ರವೇಶಕ್ಕೆ ಅಂತಹ ದೊಡ್ಡ ತೊಂದರೆಗಳೇನಿಲ್ಲ. ಹಾಗಿದ್ದಾಗ್ಯೂ, ಈ ಸಮಸ್ಯೆಯನ್ನು ಪರಿಹರಿಸಬೇಕಾಗಿರುವುದು ದೇವಸ್ಥಾನದ ಆಡಳಿದ ಮಂಡಳಿ ಮತ್ತು ಸಮಾಜದ ಒಂದಷ್ಟು ಹಿರಿಯರೇ ಹೊರತು ನ್ಯಾಯಾಲಯಗಳಲ್ಲ, ನ್ಯಾಯಾಲಯಗಳು ದೇಶದ ಎಲ್ಲ ಸಾಂಸ್ಥಿಕ ಸಂವಿಧಾನಗಳಲ್ಲೂ ಮೂಗು ತೂರಿಸುತ್ತ ಹೋದರೆ ಅದು ಬೇರೆ ಸ್ವರೂಪದ ಹೊಸ ಸಮಸ್ಯೆಗಳನ್ನು ಸೃಷ್ಟಿಸಬಹುದು. ಸದ್ಯಕ್ಕೆ ಶಬರಿಮಲೆಯ ವಿವಾದ ಸುಪ್ರೀಮ್ ಕೋರ್ಟ್ ಅಂಗಳದಲ್ಲಿದೆ.

## ವ್ರತ ಮಾಡಿ ನೋಡು ಮಲೆಯ ಹತ್ತಿ ನೋಡು

ಅಯ್ಯಪ್ಪನ ಭಕ್ತರ 41 ದಿನಗಳ ವ್ರತ ಬಹಳ ವಿಶಿಷ್ಟವಾದದ್ದು. ಶಿಷ್ಟ ಭಾಷೆಯಲ್ಲಿ ಇದನ್ನು ಮಂಡಲಕಾಲ ಎಂದರೆ; ಜನಸಾಮಾನ್ಯರ ನುಡುಗಟ್ಟಿನಲ್ಲಿ ಮಾಲೆ ಹಾಕುವುದು ಎಂದೂ ಹೆಸರಿದೆ. ವ್ರತನಿಷ್ಠರಾದ ಭಕ್ತರು ಶಬರಿಮಲೆ ಸಂದರ್ಶನದ ಸಂಕಲ್ಪ ತೊಟ್ಟಿದ್ದಕ್ಕೆ ಕುರುಹಾಗಿ ತುಳಸೀ ಮತ್ತು ರುದ್ರಾಕ್ಷಿಯ ಮಾಲೆಗಳನ್ನು ಕೊರಳಿಗೆ ಹಾಕಿಕೊಳ್ಳುತ್ತಾರೆ. ತುಳಸೀ ಮಾಲೆ ವಿಷ್ಣುವಿನ ಸಂಕೇತವಾದರೆ ರುದ್ರಾಕ್ಷಿ ಶಿವನ ಗುರುತು. ಈ ಮಾಲೆಗಳನ್ನು ಅವರು ವ್ರತದಲ್ಲಿರುವಷ್ಟು ಕಾಲವೂ ತೊಟ್ಟಿರುವುದರಿಂದ, ಅವರಿಗೆ 'ಮಾಲೆ ಹಾಕಿದವರು' ಎಂಬುದು ಅನ್ವರ್ಥ. ಮಾಲೆ ಹಾಕಿದರೆ ಸಾಕೆ? ಖಂಡಿತ ಇಲ್ಲ! ಆ ನಲವತ್ತೊಂದು ದಿನಗಳಲ್ಲಿ ಏನೇನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂಬ ದೊಡ್ಡದೊಂದು ಸಂವಿಧಾನವೇ ಇದೆ. ಮುಖ್ಯವಾಗಿ ಶಬರಿಮಲೆಗೆ ಇರುಮುಡಿ ಸಮೇತ ಹೋಗುವ ಸಂಕಲ್ಪ ತೊಟ್ಟ ಮಂದಿ ತಮಗೊಂದು ಗುರುಸ್ವಾಮಿಯನ್ನು ಗೊತ್ತುಪಡಿಸಿಕೊಳ್ಳಬೇಕು. ಹಾಗೆ ಗೊತ್ತುಪಡಿಸಿಕೊಂಡು ತನ್ನನ್ನು ಸಂಪೂರ್ಣವಾಗಿ ಗುರುವಿಗೆ ಸಮರ್ಪಿಸಿಕೊಳ್ಳುವ ಮೂಲಕ ಅಲ್ಲೊಂದು ವಿಶಿಷ್ಟವಾದ ಗುರು–ಶಿಷ್ಯ ಸಂಬಂಧ ರೂಪುಗೊಳ್ಳುತ್ತದೆ. ಆ ಗುರು ಈ ಶಿಷ್ಯನಿಗೆ ವ್ರತದೀಕ್ಷೆ ಕೊಡಬೇಕು. ತುಳಸೀ ಮತ್ತು ರುದ್ರಾಕ್ಷಿಯ ಮಾಲೆಯನ್ನು ಶಿಷ್ಯನ ಕೊರಳಿಗೆ ಹಾಕುವುದೇ ಆ ದೀಕ್ಷೆಯ ಮುಖ್ಯ ಭಾಗ. ಅಲ್ಲಿಂದ ವ್ರತವೆಂಬ ಒಂದು ದೀರ್ಘ ಶಿಬಿರ ಪ್ರಾರಂಭಗೊಳ್ಳುತ್ತದೆ.

ವ್ರತಧಾರಿಯಾದ ಶಿಷ್ಯ ತನ್ನ ಮನೆಯನ್ನು ತೊರೆದು ಊರ ಹೊರಗಿರುವ ಗುಡಿಯಲ್ಲಿ ಅಥವಾ ಬೇರಾವುದಾದರೂ ಬಿಡಾರದಲ್ಲಿ ವಾಸ್ತವ್ಯ ಹೂಡಬೇಕು. ಮನೆಯಲ್ಲಿದ್ದರೆ ಅಲ್ಲಿನ ಒಂದಿಲ್ಲೊಂದು ಸಂಸಾರ ತಾಪತ್ರಯಗಳಿಗೆ ಸಿಕ್ಕಿ ವ್ರತಭಂಗವಾಗಬಹುದು ಎಂಬುದಕ್ಕೆ ಇದು ಮುಂಜಾಗ್ರತೆ ಅಷ್ಟೆ. ವ್ರತ ಹಿಡಿದವರು ದಿನಕ್ಕೆರಡು ಸಲ ಸಂಧ್ಯಾಕಾಲದಲ್ಲಿ ಚಳಿಗೆ ಹೆದರದೆ ತಣ್ಣನೆ ಕೊರೆವ ನೀರನ್ನು ಮೈಗೆ ಸುರುವಿಕೊಂಡು ಸ್ನಾನ ಮಾಡಬೇಕು. ಅಯ್ಯಪ್ಪನ ಪೂಜೆಯನ್ನು ನಿಷ್ಠೆಯಿಂದ ನೆರವೇರಿಸಬೇಕು. ಪ್ರತಿ ಮುಂಜಾವು ಮತ್ತು ಗೋಧೂಳಿ ಸಮಯದಲ್ಲಿ ಪೂಜೆ ಮಾಡಿ ಅಯ್ಯಪ್ಪನಿಗೆ ನೈವೇದ್ಯ ಅರ್ಪಿಸಬೇಕು.

## ಸ್ವಾಮಿಯೇ ಶರಣಂ ಅಯ್ಯಪ್ಪ

ವ್ರತನಿಷ್ಠನಾದವನು ಆತನ ಓರಗೆಯವರು ಸ್ವಾಮಿ ಅಥವಾ ಅಯ್ಯಪ್ಪ ಎಂದು ಕರೆಯುವುದು ವಾಡಿಕೆ. ಆತನೂ ತನ್ನ ಸಹವ್ರತಧಾರಿಗಳನ್ನು ಹಾಗೆಯೇ ಕರೆಯಬೇಕು. ಸ್ವಾಮಿಯಾದವನು ಕಟ್ಟುನಿಟ್ಟಾಗಿ ನಿರ್ವಹಿಸಬೇಕಾದ ಜವಾಬ್ದಾರಿ ಎಂದರೆ ಮದ್ಯ-ಧೂಮಪಾನಗಳಂಥ ದುಶ್ಚಟ್ಟಗಳಿಂದ ದೂರವಿರುವುದು ಮತ್ತು ಬ್ರಹ್ಮಚರ್ಯ ಪಾಲನೆ ಮಾಡುವುದು. ವ್ರತದಲ್ಲಿರುವಷ್ಟು ದಿನವೂ ಆತ ಸ್ವತಃ ತಾನು ತಯಾರಿಸಿದ ಅಥವಾ ಇತರ ಸ್ವಾಮಿಗಳು ತಯಾರಿಸಿದ ಅಡುಗೆಯನ್ನಲ್ಲದೆ ಬೇರೆಯದನ್ನು ಸೇವಿಸುವಂತಿಲ್ಲ. ಒಪ್ಪೊತ್ತಷ್ಟೇ ಊಟ; ಮಿಕ್ಕೆರಡು ಹೊತ್ತಲ್ಲಿ ಫಲಾಹಾರ. ಊಟ ಕೂಡ ಮಿತಿಯದ್ದು. ದಿನಕ್ಕೊಮ್ಮೆ ಮಾಡುವ ಭೋಜನವೆನ್ನುತ್ತ ತಟ್ಟೆ ತುಂಬಿ ಚೆಲ್ಲುವಂತೆ ಉಣ್ಣುವಂತಿಲ್ಲ. ಊಟ-ಫಲಹಾರಗಳನ್ನು ಬಿಟ್ಟರೆ ದಿನದ ಮಿಕ್ಕ ಯಾವ ಹೊತ್ತಲ್ಲೂ ಏನನ್ನೂ ಸೇವಿಸುವಂತಿಲ್ಲ. ಸ್ವಾಮಿಯಾದವನು ಕಾರ್ತಿಕ, ಧನು ಮಾಸಗಳ ಚಳಿಗೆ ಬೆದರಿ ಹಾಸಿಗೆಯೊಳಗೆ ಮುದುರಿಕೊಳ್ಳುವಂತಿಲ್ಲ. ಒಂದೋ ಚಾಪೆ ಇಲ್ಲವೇ ಖಾಲಿ ನೆಲದಲ್ಲಿ ಮಲಗಬೇಕು. ಚಪ್ಪಲಿ ನಿಷಿದ್ಧ. ವಾಹನಗಳನ್ನು ಎರಬಾರದು. ಯಾವ ಕೆಲಸಕ್ಕೂ ಕಾಲ್ನಡಿಗೆಯನ್ನೇ ಅಲವಂಬಿಸಬೇಕು. 41 ದಿನಗಳ ವ್ರತಾಧಾರಿ ಸ್ವಾಮಿ ಉಗುರು, ತಲೆಗೂದಲು ಮತ್ತು ಗಡ್ಡವನ್ನು ಕತ್ತರಿಕೊಳ್ಳಬಾರದು.

ಇವೆಲ್ಲವನ್ನೂ ಮನುಷ್ಯ ಮಾಡಿದನೆಂದೇ ಹೇಳೋಣ. ಆದರೆ ಕಾಯಾ ವಾಚಾ ಮನಸಾ ಕೆಟ್ಟದನ್ನು ದೂರವಿಡುವುದು? ಬಹುಶಃ ನಮಗೆಲ್ಲ ಇದೇ ಅತ್ಯಂತ ದೊಡ್ಡ ಸವಾಲು ಎಂದು ಕಾಣುತ್ತದೆ. ವ್ರತ ಹಿಡಿದ ಸ್ವಾಮಿಗಳಿಗೆ ಇದೊಂದು ಅಗ್ನಿಪರೀಕ್ಷೆ. ಅವರು 41 ದಿನಗಳ ಕಾಲ ಯಾರ ಮೇಲೂ ರೇಗಾಡುವಂತಿಲ್ಲ; ಯಾರ ಜತೆಯೂ ಜಗಳಾಡುವಂತಿಲ್ಲ. ಪ್ರತಿಯೊಬ್ಬರನ್ನೂ ಸ್ನೇಹಪೂರ್ವಕವಾಗಿ ಮಾತನಾಡಿಸಬೇಕು. ಸ್ವಾಮಿಯಾದ ಯಾವುದೇ ವ್ಯಕ್ತಿ ತಯಾರಿಸಿದ ಅಡುಗೆಯನ್ನು ಯಾವ ಮಡಿ-ಮೈಲಿಗೆಯ ಚಿಂತೆ ಮಾಡದೆ ಪ್ರಾಂಜಲವಾಗಿ ಉಣ್ಣಬೇಕು. ದೀಕ್ಷೆ ತೊಟ್ಟ ಅವಧಿಯಲ್ಲಿ ತಾವು ಬೇರೆಯವರ ಅಡುಗೆಯನ್ನು ಉಣ್ಣುವುದಲ್ಲದೆ, ಕನಿಷ್ಠ ಐದು ಜನ ಸ್ವಾಮಿಗಳಿಗೆ ಭೋಜನದ ಏರ್ಪಾಡು ಮಾಡಬೇಕು. ಶಬರಿಮಲೆ ಯಾತ್ರೆ ಹೊರಡಲು ಆರ್ಥಿಕವಾಗಿ ತೊಂದರೆಯಲ್ಲಿರುವವರಿಗೆ ಸಹಾಯ ಮಾಡಬೇಕು. ಪ್ರತಿಯೊಬ್ಬ ಸ್ವಾಮಿಯಲ್ಲೂ ಅಯ್ಯಪ್ಪ ಸ್ವಾಮಿಯನ್ನು ಕಾಣಬೇಕು. ಸುಳ್ಳು, ಮೋಸ, ವಂಚನೆ, ಆತ್ಮರತಿ, ಕೋಪ, ಹಗೆ, ತಾತ್ಸರ ಇವೆಲ್ಲವನ್ನೂ ಗಂಟುಕಟ್ಟಿ ಅರಬ್ಬೀ ಸಮುದ್ರಕ್ಕೆ ಎಸೆಯಬೇಕು. ಒಂದೇ ಮಾತಲ್ಲಿ ಹೇಳಬೇಕೆಂದರೆ ವ್ರತ ಹಿಡಿದ ವ್ಯಕ್ತಿ ಕನಿಷ್ಠಪಕ್ಷ ಆ ವ್ರತ ಹಿಡಿದಷ್ಟು ದಿನಗಳ ಕಾಲ ವಿಶ್ವಮಾನವನಾಗಿರಬೇಕು.

## ವಿಶ್ವಮಾನವ ಸಂದೇಶ

ಒಂದು ದೊಡ್ಡ ಧರ್ಮ ಅಥವಾ ರಿಲಿಜನ್‌ನ ಒಳಗಿದ್ದು ಕೆಲವೊಂದು ನಿರ್ದಿಷ್ಟ ಕಟ್ಟುಪಾಡುಗಳನ್ನು ವಿಧಿಸಿಕೊಳ್ಳುವ ಪಂಥಕ್ಕೆ ಇಂಗ್ಲಿಷ್‌ನಲ್ಲಿ 'ಕಲ್ಟ್' ಅನ್ನುತ್ತಾರೆ. ಆ ದೃಷ್ಟಿಯಲ್ಲಿ ನೋಡಿದರೆ ಅಯ್ಯಪ್ಪನ ದರ್ಶನಕ್ಕಾಗಿ ಹೊರಡುವ ಇಂತಹ ವ್ರತಾಧಾರಿಗಳ ಗುಂಪುಗಳನ್ನು ಕಲ್ಟ್ ಎನ್ನಬಹುದೇನೋ. ಆದರೆ ಹೆಚ್ಚಾಗಿ ಅಂತಹ ಪಂಥಗಳಲ್ಲಿ, ಕಟ್ಟುಪಾಡುಗಳನ್ನು ವಿಧಿಸಿಕೊಳ್ಳುವ ಭರದಲ್ಲಿ ಅನ್ಯಪಂಥಗಳತ್ತ ಕಣ್ಣೆತ್ತಿಯೂ ನೋಡಬಾರದೆಂಬ ನಿಷೇಧಭಾವನೆಯೇ ಹೆಚ್ಚಾಗಿರುತ್ತದೆ. ಅಯ್ಯಪ್ಪನ ಭಕ್ತರಲ್ಲಿ ಅದನ್ನು ನಾವು ಕಾಣಲಾರೆವು. ಶಬರಿಮಲೆಯ ಯಾತ್ರೆಗೆ ಹೊರಟವರು ತಮ್ಮ ಯಾತ್ರೆಯ ದಾರಿಯಲ್ಲಿ ಸಿಗುವ ದೇವಸ್ಥಾನಗಳನ್ನು ಸಂದರ್ಶಿಸಿ ದೇವರ ಪೂಜೆ/ಸೇವೆ ಮಾಡಿಕೊಂಡು ಮುಂದುವರಿಯಬೇಕೆಂಬ ಕಟ್ಟಳೆ ಇದೆ. ಮಾತ್ರವಲ್ಲ ಅಯ್ಯಪ್ಪನ ಕತೆಯಲ್ಲೇ ಹಲವು ದೇವರನ್ನು ಕಾಣಬಹುದು. ಎಲ್ಲಕ್ಕಿಂತ ಮೊದಲು ಅದು ಶೈವ ಮತ್ತು ವೈಷ್ಣವರ ನಡುವೆ ಅಭೇದ ಕಲ್ಪಿಸಿ, ತಾತ್ವಿಕವಾಗಿ ಸಿಡಿದು ನಿಲ್ಲುವ ಎರಡು ಪಂಗಡಗಳನ್ನು ಹತ್ತಿರ ತರಲು ಪ್ರಯತ್ನಿಸಿತು. ಅಯ್ಯಪ್ಪನ ಮುಂದುವರಿದ ಕಥಾಭಾಗದಲ್ಲಿ ಗಣೇಶ, ಶಕ್ತಿ, ರಾಮ, ಆಂಜನೇಯ, ದತ್ತಾತ್ರೇಯ. ಪರಶುರಾಮ ಇತ್ಯಾದಿ ದೇವರು ಮತ್ತು ಪೌರಾಣಿಕ ವ್ಯಕ್ತಿಗಳು ಬರುತ್ತಾರೆ. ಆ ಕಾಲದಲ್ಲಿ ಚಾಲ್ತಿಯಲ್ಲಿದ್ದಿರಬಹುದಾದ ಬಗೆಬಗೆಯ ಕಲ್ಟ್‌ಗಳನ್ನೂ ಅವುಗಳಿಗೆ ಅಂಟಿಕೊಂಡು ಚದುರಿಹೋಗಿದ್ದ ಹಲವು ಪಂಗಡಗಳನ್ನೂ ಒಟ್ಟಾಗಿಸಲು ಅಯ್ಯಪ್ಪನ ಪಂಥ ಪ್ರಯತ್ನಿಸಿರಬಹುದೇ ಎಂಬ ಅನುಮಾನ ಕಾಡುತ್ತದೆ. ಇವಿಷ್ಟು ಮಾತ್ರವಲ್ಲದೆ, ಅದು ಮುಸಲ್ಮಾನರನ್ನೂ ಒಳಗೊಳ್ಳುವ ಅತ್ಯಂತ ನಿರ್ಭೀತ ಹೆಜ್ಜೆಯನ್ನೂ ಇಟ್ಟಿತು. ಆ ದೃಷ್ಟಿಯಲ್ಲಿ ಅಯ್ಯಪ್ಪನ ಪಂಥ ಒಂದು ಕ್ರಾಂತಿಕಾರಿಯಾದ ಕೆಲಸವನ್ನು ಮಾಡಿತು ಎಂದೇ ಹೇಳಬೇಕು.

ದೇವರಲ್ಲಿ ಮಾತ್ರವಲ್ಲದೆ ಮನುಷ್ಯರಲ್ಲೂ ಅನೇಕ ಸಂಪ್ರದಾಯ ಭಿನ್ನತೆಗಳನ್ನು ಪರಿಹರಿಸಿ ಎಲ್ಲರನ್ನೂ ಒಂದೇ ಛತ್ರಿಯಡಿ ತರುವ ಕೆಲಸ ಅಯ್ಯಪ್ಪನ ಆರಾಧನೆಯ ಹೆಸರಲ್ಲಿ ನಡೆಯಿತು. ಮುಖ್ಯವಾಗಿ ಅಯ್ಯಪ್ಯನ ಸೇವೆ ಮಾಡುವ ಸ್ವಾಮಿಗಳೆಲ್ಲರೂ ಒಂದೇ; ಅವರ ನಡುವೆ ಮೇಲು-ಕೀಳು-ಬಡವ-ಬಲ್ಲಿದ ಹಿಂದೂ-ಮುಸ್ಲಿಮ್ ಬ್ರಾಹ್ಮಣ-ದಲಿತ ಎಂಬ ಶ್ರೇಣಿಗಳಿಲ್ಲ ಎಂಬುದನ್ನು ತೋರಿಸಲಾಯಿತು. ಇಬ್ಬರು ಸ್ವಾಮಿಗಳು ಪರಸ್ಪರ ಎದುರು ಸಿಕ್ಕಾಗ ಯಾವ ಎರಡನೆಯ ಯೋಚನೆಯನ್ನೂ ಮಾಡದೆ ಕಾಲಿಗೆ ಬೀಳುವ ಸಂಪ್ರದಾಯವನ್ನು ಅಲ್ಲಿ ಪ್ರಾರಂಭಿಸಲಾಯಿತು. ಸಹಪಂಕ್ತಿ ಭೋಜನವನ್ನು ಅಳವಡಿಸಿಕೊಳ್ಳಲಾಯಿತು. ಪ್ರತಿಯೊಬ್ಬರಲ್ಲೂ

ಧಾರ್ಮಿಕ ಪ್ರಜ್ಞೆ ಜಾಗೃತಗೊಳ್ಳುವಂತೆ ಮಾಡಲು ಮುಂಜಾನೆ ಮತ್ತು ಸಂಜೆಯ ಸಮಯದಲ್ಲಿ ಸ್ನಾನ, ಪೂಜೆ, ಭಜನೆ, ನೈವೇದ್ಯ ಸಮರ್ಪಣೆಯಂತಹ ಕೆಲವೊಂದು ಧಾರ್ಮಿಕ ವಿಧಿಗಳನ್ನು ಕಡ್ಡಾಯವಾಗಿಸಲಾಯಿತು. ದೇಹನೈರ್ಮಲ್ಯ ಮತ್ತು ಮನಸ್ಸಿನ ಶುದ್ಧಿಗೆ ಹೆಚ್ಚಿನ ಒತ್ತು ಕೊಡಲಾಯಿತು. ಬ್ರಹ್ಮಚರ್ಯ, ಏಕಭಕ್ತಿಯಂಥ ಕೆಲವೊಂದು ಕಟ್ಟುಪಾಡುಗಳನ್ನು ವಿಧಿಸುವ ಮೂಲಕ ಮನಸ್ಸಿನ ನಿಯಂತ್ರಣಕ್ಕೆ ತರಬೇತಿ ಕೊಡುವ ಕೆಲಸವನ್ನು ಮಾಡಿದರು. ಸೂಕ್ಷ್ಮವಾಗಿ ನೋಡಿದರೆ ಅಯ್ಯಪ್ಪ ವ್ರತಧಾರಿಗಳ ಕಲ್ಟ್ ಯಾವ ಜಾತಿ ಅಥವಾ ಪಂಥದ ಆಚರಣೆಗಳನ್ನೂ ನಿರಾಕರಿಸಲಿಲ್ಲ; ಅವಹೇಳನ ಮಾಡಲಿಲ್ಲ. ಆದರೆ ಅವೆಲ್ಲವನ್ನೂ ಒಳಗೊಂಡೂ ಎಲ್ಲರನ್ನೂ ಒಳಗೊಳ್ಳುವ ಮಹತ್ತರವಾದ ಕೆಲಸವನ್ನು ಮಾಡಿತು. ಇನ್ನೇನು ಕೆಲವು ವರ್ಷಗಳಲ್ಲಿ ಅಯ್ಯಪ್ಪನ ದೇವಸ್ಥಾನಕ್ಕೆ ಭೇಟಿ ಕೊಡುವ ಭಕ್ತರ ಸಂಖ್ಯೆ ವರ್ಷಕ್ಕೆ ಹತ್ತು ಕೋಟಿಯನ್ನು ಮುಟ್ಟಲಿದೆ ಎಂದರೆ ಈ ಕಲ್ಟ್ ಅಷ್ಟೊಂದು ಜನರ ಪ್ರೀತ್ಯಾದರಗಳನ್ನೂ ನಂಬಿಕೆಯನ್ನೂ ಗಳಿಸಿದೆ ಎಂದೇ ಅರ್ಥ ತಾನೇ? ಇಂತಹ ಒಂದು ಆಂದೋಲನ ಯಶಸ್ವಿಯಾಗಿರುವುದಕ್ಕೆ ಏನು ಕಾರಣಗಳಿರಬಹುದು ಎಂದು ಯಾವ ಸಮಾಜಶಾಸ್ತ್ರಜ್ಞರೂ ಸಂಶೋಧನೆ ನಡೆಸದಿರುವುದು ಅಚ್ಚರಿ ಮೂಡಿಸುತ್ತದೆ.

## ಮಕರವಿಳಕ್ಕು ಎಂಬ ಮಿನುಗುಜ್ಯೋತಿ

ಶಬರಿಮಲೆಯ ಪೂಜಾವೈಭವ ತನ್ನ ಉತ್ತುಂಗ ತಲುಪುವುದು ಮಕರಸಂಕ್ರಾತಿಯ ರಾತ್ರಿ ನಡೆಯುವ ವಿಶೇಷ ಪೂಜೆಯ ಸಂದರ್ಭದಲ್ಲಿ, ಯಾಕೆಂದರೆ ಆ ಹೊತ್ತಿನಲ್ಲಿ ದೂರದ ಪೊನ್ನಂಬಲ ಮೇಡು ಬೆಟ್ಟದ ತುದಿಯಲ್ಲಿ ಮಕರಜ್ಯೋತಿ ಕಾಣಿಸಿಕೊಳ್ಳುತ್ತದೆ. ಜ್ಯೋತಿ ಉದಿಸುವ ಈ ಬೆಟ್ಟವನ್ನು ಕಾಂತಿಮೇಲೆ ಅಥವಾ ಜ್ಯೋತಿಮಲೆ ಎಂದು ಕರೆಯುವ ಪರಿಪಾಠವೂ ಉಂಟು. ಮೂರು ಬಾರಿ ಮಿನುಗಿ ಮರೆಯಾಗುವ ಈ ದೀಪವನ್ನು ಕಣ್ತುಂಬಿಕೊಳ್ಳಲು ಜನರ ನೂಕುನುಗ್ಗಲು ಹೇಳತೀರದು. ಮಕರಜ್ಯೋತಿಯನ್ನು ನೋಡಬೇಕೆಂದೇ ಹಲವಾರು ಸಾವಿರ ಮೈಲಿಗಳ ದೂರದಿಂದ ಬರುವವರೂ ಇದ್ದಾರೆ. ಐತಿಹ್ಯದ ಪ್ರಕಾರ ಅಯ್ಯಪ್ಪ ಸ್ವಾಮಿಯ ಆಭರಣಗಳನ್ನು ಗರುಡವೊಂದು ತೆಗೆದುಕೊಂಡು ಬರುವಾಗ ಕಾಣಿಸುವ ಬೆಳಕು ಅದು. ಆದರೆ ಐತಿಹ್ಯವನ್ನು ಕುರುಡಾಗಿ ನಂಬದವರು ಮಕರಜ್ಯೋತಿಯನ್ನು ಆ ಬೆಟ್ಟದ ತುದಿಯಲ್ಲಿ ಕೃತಕವಾಗಿ ಸೃಷ್ಟಿಸಲಾಗುತ್ತದೆ ಎಂಬ ವಾದವನ್ನು ಬಹಳ ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ.

ಮೊದಲು ಈ ಬೆಳಕನ್ನು ಪೊನ್ನಂಬಲ ಮೇಡು ಬೆಟ್ಟದಲ್ಲಿ ವಾಸವಾಗಿದ್ದ ಬುಡಕಟ್ಟು ಸಮುದಾಯದ ಕೆಲವು ಸದಸ್ಯರು ಸೃಷ್ಟಿಸುತ್ತಿದ್ದರಂತೆ. ಆದರೆ ಒಂದು ವಿದ್ಯುತ್ ಯೋಜನೆಗಾಗಿ ಅಲ್ಲಿನ ಜನರನ್ನು ಒಕ್ಕಲೆಬ್ಬಿಸಿದ ಮೇಲೆ ಶಬರಿಮಲೆಯ ದೇವಸ್ಥಾನದ ಆಡಳಿತ ನೋಡಿಕೊಳ್ಳುತ್ತಿರುವ ತಿರುವಾಂಕೂರು ದೇವಸ್ವಂ ಬೋರ್ಡ್‌ನ ಸಿಬ್ಬಂದಿಯೇ ಅಲ್ಲಿ ಬೆಳಕು ಕಾಣುವಂತೆ ಮಾಡುವ ವ್ಯವಸೇ ಮಾಡುತ್ತಿದ್ದರಂತೆ, ಅದಾಗಿ ಕೆಲವು ವರ್ಷಗಳ ಅನಂತರ ಈಗ ಬೆಳಕು ಮೂಡಿಸುವ ಜವಾಬ್ದಾರಿ ಕೇರಳದ ವಿದ್ಯುತ್ ನಿಗಮಕ್ಕೆ ಬಂದಿದೆ ಎಂದು ಹೇಳುತ್ತಾರೆ. ಮಕರಜ್ಯೋತಿ ಮಾನವನಿರ್ಮಿತ ಬೆಳಕು ಎಂಬುದರಲ್ಲಿ ಅನುಮಾನವಿಲ್ಲ. ಕೇವಲ ನಾಲ್ಕು ದಶಕಗಳಿಂದಷ್ಟೆ ಹುಟ್ಟಿಕೊಂಡಿರುವ ಹೊಸ ಸಂಪ್ರದಾಯ ಇದು ಎಂಬುದೂ ಸರಿಯೇ. ಆದರೆ ಮಕರಜ್ಯೋತಿ ಬೆಳಕು ನೈಸರ್ಗಿಕವೋ ಕೃತಕವೋ ದೇವಾಲಯ ಮಂಡಳಿಯವರು ಹೇಳಲೇಬೇಕು ಎಂದು ಹಠ ಹಿಡಿದ ಒಂದಷ್ಟು ವಿಚಾರವಾದಿಗಳು ಕೆಲವು ವರ್ಷಗಳ ಹಿಂದೆ ಕೋರ್ಟ್ ಮೆಟ್ಟಿಲು ಹತ್ತಿದರು. ಈ ವಿಚಾರವನ್ನು ಅತಿಮುಖ್ಯ ಪ್ರಶ್ನೆ ಎಂಬಂತೆ ಕೈಗೆತ್ತಿಕೊಂಡ ಕೇರಳ ಉಚ್ಚನ್ಯಾಯಾಲಯ ನ್ಯಾಯಪೀಠ, ಈ ವಿಷಯದಲ್ಲಿ ಯಾವುದೇ ಸಂಶಯಕ್ಕೆಡೆ ಇಲ್ಲದಂತೆ ಸತ್ಯವನ್ನು ಜನರ ಮುಂದಿಡಬೇಕು ಎಂದು ತಿರುವಾಂಕೂರು ದೇವಸ್ವಂ ಮಂಡಳಿಗೆ ತಾಕೀತು ಮಾಡಿತು. ಜನರ ಕುತೂಹಲಕ್ಕೆ ಕಾರಣವಾಗಿದ್ದ ಒಂದು ವಿಸ್ಮಯದ ಘಟನೆ ಹೀಗೆ ವಿಚಾರವಾದಿಗಳ ಕೈಗೆ ಸಿಕ್ಕು ಕಾನೂನಾತ್ಮಕ ಕೈಗಳಲ್ಲಿ ಸಿಕ್ಕಿಬೀಳುವಂತಾಯಿತು.

ಮನುಷ್ಯ ಮೂಲತಃ ಕುತೂಹಲ, ಕೌತುಕ, ವಿಸ್ಮಯಗಳನ್ನು ಬಯಸುವವನು. ಜಗತ್ತಿನ ಎಲ್ಲ ಸತ್ಯಗಳೂ ತಿಳಿದುಹೋದವು ಎಂದ ದಿನ ಬದುಕು ನೀರಸವಾಗುತ್ತದೆ; ನಿರರ್ಥಕವೆನಿಸುತ್ತದೆ. ಬದುಕಿನಲ್ಲಿ ಸ್ವಾರಸ್ಯವಿರಬೇಕಾದರೆ ಒಂದಷ್ಟು ಅಚ್ಚರಿಗಳೂ ನಿಗೂಢಗಳೂ ನಮ್ಮ ಸುತ್ತಮುತ್ತ ಘಟಿಸುತ್ತಿರಬೇಕು. ಮಕರಜ್ಯೋತಿ ನಿಜವಾಗಿಯೂ ನೈಸರ್ಗಿಕವೋ ಕೃತಕವೋ ಎಂಬುದರಲ್ಲಿ ನಿಜಕ್ಕಾದರೆ ಆಸ್ತಿಕರಿಗೆ ಆಸಕ್ತಿಯೇ ಇಲ್ಲ. ಆದರೆ, ಇತ್ತ ಮಕರ ಸಂಕ್ರಮಣದ ಪೂಜೆಯ ಕಾಲಕ್ಕೆ ಸರಿಯಾಗಿ ಅದೆಲ್ಲೋ ದೂರದ ಬೆಟ್ಟದ ಶಿಖರದಲ್ಲಿ ಬೆಳಕು ಕಾಣಿಸಿಕೊಳ್ಳುತ್ತದೆ ಎಂಬ ಚಮತ್ಕಾರವೇ ಮನುಷ್ಯನ ಕೌತುಕ ಪ್ರವೃತ್ತಿಯನ್ನು ಜೀವಂತವಾಗಿಡುತ್ತದೆ. ಬದುಕಿನ ಇಂತಹ ಸಣ್ಣ ಸಣ್ಣ ಸಂಭ್ರಮಗಳನ್ನು ಸುಖಿಸಲು ಕಲಿಯದೆ ಹೋದರೆ ನಾವು ಬದುಕನ್ನು ನಿಸ್ಸಾರವಾಗಿಸಿಕೊಳ್ಳುತ್ತೇವೆ. ವಿಚಾರವಾದಿಗಳಿಗೂ ನ್ಯಾಯಾಂಗ ವ್ಯವಸ್ಥೆಗೂ ಈ ತಥ್ಯ ಗೊತ್ತಾಗಿಲ್ಲವಲ್ಲ ಎಂಬುದು ಖೇದದ ಸಂಗತಿ. ಅದೂ ಅಲ್ಲದೆ, ಇವರ ಕಾನೂನುಗಳು ಏನಿದ್ದರೂ ಹಿಂದೂ ಸಂಸ್ಕೃತಿಯೊಳಗಿನ ಆಚರಣೆಗಳನ್ನಷ್ಟೇ ಪ್ರಶ್ನಿಸುತ್ತವೆ, ತುಚ್ಛೀಕರಿಸುತ್ತವೆ.

**ಮನೆ ಮದ್ದು**

ಕಾಲಿನ ಹಿಮ್ಮಡಿ ಹೊಡೆದಾಗ ಅರಿಶಿನ ಪುಡಿಗೆ ಹರಳೆಣ್ಣೆಯನ್ನು ಬೆರೆಸಿ ಹಚ್ಚಿದಾಗ ನೋವು ನಿವಾರಣೆಯಾಗುತ್ತದೆ.

ಇಷ್ಟಕ್ಕೂ ಮಕರಜ್ಯೋತಿ ಒಂದು ನೈಜ ವಿದ್ಯಮಾನ ಎಂದು ಯಾರಾದರೂ ಸಾಧಿಸಲು ಹೊರಟಿದ್ದಾರಾ? ಶಬರಿಮಲೆಯ ದೇವಸ್ಥಾನಗಳ ಆಡಳಿತ ಮಂಡಳಿಯಾದ ತಿರುವಾಂಕೂರು ಬೋರ್ಡ್, ಮಕರಜ್ಯೋತಿಯ ಸತ್ಯಾಸತ್ಯತೆಯನ್ನು ಭಕ್ತರೆಲ್ಲರೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಕೆಂದು ತಾಕೀತು ಮಾಡಿದೆಯೇ? ಜ್ಯೋತಿಯನ್ನು ತೋರಿಸಿ ಯಾರಾದರೂ ಜನರನ್ನು ಮೋಸ ಮಾಡುತ್ತಿದ್ದಾರಾ? ಹಣ ಸುಲಿಯುತ್ತಿದ್ದಾರಾ? ಈ ಯಾವುದೂ ಇಲ್ಲದಿರುವಾಗ, ಅಲ್ಲೆಲ್ಲೋ ದೂರದಲ್ಲಿ ನಡೆವ ಒಂದು ವಿದ್ಯಮಾನವನ್ನು ವಿವರಿಸಿ ಎಂದು ದೇವಸ್ವಂ ಬೋರ್ಡ್ ಅನ್ನು ಕೇಳಿಕೊಳ್ಳುವುದು ಎಷ್ಟರಮಟ್ಟಿಗೆ ಸಮಂಜಸ? ಮಕರಜ್ಯೋತಿಗೆ ಪೌರಾಣಿಕ ಹಿನ್ನೆಲೆ ಇಲ್ಲ; ಅದು ಸಂಪೂರ್ಣವಾಗಿ ಮಾನವಕೃತ ಎಂದು ಸಾಬೀತಾದರೂ ಜನರ ಆಕರ್ಷಣೆ, ಕುತೂಹಲಗಳು ಕಡಿಮೆಯಾಗುವುದಿಲ್ಲ, ಶಬರಿಮಲೆ ದೇಗುಲಕ್ಕೆ ಭಕ್ತರ ನೂಕುನುಗ್ಗಲು ಕೂಡ ಇಳಿಯುವುದಿಲ್ಲ. ಈ ಸೂಕ್ಷ್ಮವನ್ನು ಅರ್ಥ ಮಾಡಿಕೊಂಡ ದಿನವಷ್ಟೇ ವಿಚಾರವಾದಿಗಳ ಬೌದ್ಧಿಕ ಸಮಸ್ಯೆಗಳು ತಕ್ಕಮಟ್ಟಿಗೆ ತಹಬದಿಗೆ ಬರಬಹುದೇನೋ!

## ಅಯ್ಯಪ್ಪ ಬೋಧಿಸುತ್ತಿರುವ ತತ್ತ್ವವಾದರೂ ಯಾವುದು?

ಅಯ್ಯಪ್ಪ ಸ್ವಾಮಿಯ ಭಕ್ತರು ಸಮಾಜದ ಯಾವ ಪದರದಿಂದ ಬೇಕಾದರೂ ಬರಬಹುದು. ಹಿಂದೂ ಮಾತ್ರವಲ್ಲದೆ ಮುಸ್ಲಿಂ, ಬೌದ್ಧ, ಕ್ರೈಸ್ತ ಕೂಡ ಆಗಿರಬಹುದು! ಕಳೆದ ಹದಿನೈದಿಪ್ಪತ್ತು ವರ್ಷಗಳಿಂದ ಅಯ್ಯಪ್ಪ ವಿದೇಶಗಳಲ್ಲೂ ಭಲೇ ಜನಪ್ರಿಯನಾಗಿದ್ದಾನೆ. ರಷ್ಯ, ಜರ್ಮನಿ, ಇಂಗ್ಲೆಂಡ್, ಅಮೆರಿಕಾಗಳಿಂದ ಭಾರತಕ್ಕೆ ಬಂದು, ನಲವತ್ತೊಂದು ದಿನಗಳ ಕಠಿಣ ವ್ರತ ಪಾಲಿಸಿ ಗಿರಿ ಹತ್ತುವ ಸಾವಿರಾರು ಬಿಳಿಯರು ಇಂದು ಇದ್ದಾರೆ! ಹೀಗೆ ತನ್ನೆಡೆಗೆ ಬಂದ ಎಲ್ಲರನ್ನೂ ಜಾತಿ–ಮತಗಳ ಭೇದ ಕಾಣದೆ ಸೆಳೆದುಕೊಳ್ಳುವ ಅಯ್ಯಪ್ಪನ ಗುಣವೇ ಆತನನ್ನು ಇಂದು ಭಾರತದ ಜನಪ್ರಿಯ ದೇವತೆಯಾಗಿಸಿದೆ.

ಒಳ್ಳೆಯವನಾಗಿರು, ಒಳ್ಳೆಯ ಚಿಂತನೆಗಳನ್ನು ಬೆಳೆಸಿಕೋ, ದುಷ್ಟಚಟಗಳಿಂದ ದೂರವಿರು, ಜ್ಞಾನದ ಮಾರ್ಗ ಹಿಡಿ. ಬಹುಶಃ ಇವೆಲ್ಲವನ್ನೂ ಪ್ರವಚನದ ಮೂಲಕ ಹೇಳಲು ಹೋಗಿದ್ದರೆ ಅಯ್ಯಪ್ಪನ ಭಕ್ತರ ಸಂಖ್ಯೆ ಇಷ್ಟು ದೊಡ್ಡದಾಗಿ ಬೆಳೆಯುತ್ತಿತ್ತೋ ಇಲ್ಲವೋ. ಆದರೆ ಅಯ್ಯಪ್ಪನದ್ದು ಮಾತಿನ ಉಪದೇಶವಲ್ಲ; ಮಾಡಿ ತಿಳಿ ಎಂಬಂಥ ಪ್ರಾಕ್ಟಿಕಲ್ ಪಾಠ. ಮಾಲೆ ಹಾಕಲು ಬರುವವರಲ್ಲಿ ಅದೆಷ್ಟೋ ಮಾದಕವ್ಯಸನಿಗಳಿರುತ್ತಾರೆ, ಕುಡುಕರಿರುತ್ತಾರೆ, ಜೀವನ ದಿಕ್ಕು ತಪ್ಪಿದ ಹಡಗಿನಂತಾಗಿ ದಿಕ್ಕಾಪಾಲಾಗಿ ದಿಕ್ಕೆಟ್ಟು ಕೂತವರು ಇರುತ್ತಾರೆ. ಇವರನ್ನೆಲ್ಲ ಒಂದು ಕಠಿಣ ನಿಯಮಕ್ಕೊಳಪಡಿಸುವುದು ಅತ್ಯಂತ ಕಷ್ಟದ ಜವಾಬ್ದಾರಿಯೇ. ಆದರೆ ಭಕ್ತಿಯೆಂಬ ಚಾಲಕ ಶಕ್ತಿಯಿಂದ ಅವೆಲ್ಲ ಲೀಲಾಜಾಲವಾಗಿ ನಡೆದುಹೋಗುತ್ತವೆ. ಒಂದೆರಡು ದಿನ ಮುಂಜಾವಿನ ಚಳಿಗೆದ್ದು ತಣ್ಣೀರು ಸುರುವಿಕೊಳ್ಳಲು ಚಂಡಿ ಹಿಡಿವ ದೇಹ ಮೂರ್ನಾಲ್ಕು ದಿನಗಳಿಗೆಲ್ಲ ಹದಕ್ಕೆ ಬರುತ್ತದೆ. ಮಾತು ಕೇಳತೊಡಗುತ್ತದೆ. ಒಪ್ಪೊತ್ತು ಊಟಕ್ಕೆ ಸಿಟ್ಟಾಗಿ ಮೊದಮೊದಲು ಮುಷ್ಕರ ಹೂಡುವ ಹೊಟ್ಟೆ ಆಮೇಲಾಮೇಲೆ ತಣ್ಣಗಾಗುತ್ತದೆ. ಹೊಟ್ಟೆಯ ಹಸಿವು ಕಡಿಮೆಯಾಗಿ ಭಕ್ತಿಯ ಹಸಿವು ಹೆಚ್ಚುತ್ತದೆ. ದೇಹದಂಡನೆಗೆ ತಕ್ಕಂತೆ ಮನಸ್ಸು ಚುರುಕಾಗುತ್ತದೆ. ದೈವಭಕ್ತಿಯಲ್ಲಿ ಏಕಾಗ್ರಗೊಳ್ಳುತ್ತದೆ. ನಲವತ್ತೊಂದು ದಿನಗಳ ವ್ರತ ಮಾಡಿ ಶಬರಿಗಿರಿವಾಸನ ದರ್ಶನ ಮಾಡಿ ಬಂದವರು ಆನಂತರ ತಮ್ಮ ಜೀವಮಾನವಿಡೀ ಮಾಂಸಭಕ್ಷಣೆ, ಮದ್ಯಪಾನ. ಧೂಮಪಾನದಂತಹ ದುಶ್ಚಟಗಳನ್ನು ತ್ಯಜಿಸಿದ ಉದಾಹರಣೆಗಳಿವೆ. ಏಕಾಗ್ರತೆ ಹೆಚ್ಚಿಸಿಕೊಂಡು ಉದ್ಯೋಗದಲ್ಲಿ ಪ್ರಾಮಾಣಿಕವಾಗಿ ದುಡಿದು ಬದುಕಿನಲ್ಲಿ ನೆಲೆ ಕಂಡುಕೊಂಡ ದೃಷ್ಟಾಂತಗಳಿವೆ. ಒಮ್ಮೆ ಶಬರಿಮಲೆಯ ದರ್ಶನ ಮಾಡಿ ಬಂದವರು ಅದನ್ನು ನಿಲ್ಲಿಸಿದ ಉದಾಹರಣೆಗಳು ತೀರಾ ಕಡಿಮೆ. ಒಂದು ವರ್ಷ ಕನ್ನಿಸ್ವಾಮಿ (ಅಥವಾ ಕನ್ಯೆಸ್ವಾಮಿ) ಆದವನು. ಎರಡನೆಯ ವರ್ಷದ ಕತ್ತಿಸ್ವಾಮಿಯಾಗುತ್ತಾನೆ. ಮೂರು, ನಾಲ್ಕು, ಐದನೇ ವರ್ಷಕ್ಕೂ ತನ್ನ ಶಬರಿಮಲೆ ವ್ರತವನ್ನು ಮುಂದುವರಿಸಿ ಘಂಟೆಸ್ವಾಮಿ, ಗದೆಸ್ವಾಮಿ, ಪೆರಿಯಸ್ವಾಮಿ ಆಗುತ್ತಾನೆ. ಐದು ವರ್ಷಗಳ ವ್ರತಪಾಲನೆ ಮುಗಿಸಿದವರಿಗೆ ಆರನೇ ವರ್ಷದಿಂದ ಗುರುಸ್ವಾಮಿಯಾಗುವ ಅರ್ಹತೆ ಗಿಟ್ಟುತ್ತದೆ. ಅಂದರೆ ಅವರು ಆ ಬಳಿಕ ತಮ್ಮ ಕೈಕೆಳಗೆ ಹೊಸದಾಗಿ ಸೇರುವ ಶಬರಿಮಲೆ ಭಕ್ತರನ್ನು ಪಳಗಿಸುವ ಕಾರ್ಯಕ್ಕೆ ಅಧಿಕೃತ ಮಾನ್ಯತೆ ಪಡೆಯುತ್ತಾರೆ. ಅಯ್ಯಪ್ಪನ ಭಕ್ತರಾಗಿ ಸೇರಿಕೊಂಡವರಲ್ಲಿ ಹೆಚ್ಚಿನವರೆಲ್ಲ ಐದಾರು ವರ್ಷಗಳ ಕಾಲ ವ್ರತಾಚರಣೆ ಮಾಡುವವರೇ.

ಸುಖವನ್ನು ಹೆಚ್ಚಿಸಿಕೊಳ್ಳುವ ದಾರಿಯಲ್ಲಿ ಜಗತ್ತು ಸಾಗುತ್ತಿರುವಾಗ ಅವನ್ನೆಲ್ಲ ತ್ಯಜಿಸಿ ಪ್ರಕೃತಿಯತ್ತ ಮುಖ ಮಾಡು ಎಂದು ಹೇಳುತ್ತಿರುವ ಅಯ್ಯಪ್ಪನ ಮೌನದ ಮಾತುಗಳಿಗೆ ನಾವು ಕಿವಿಯಾಗಬೇಕಿದೆ. ಅಮರತ್ವದ ಆಸೆಗೆ ಬಿದ್ದು ಮೂರುಲೋಕಗಳನ್ನು ತನ್ನ ಅಹಂಕಾರದಿಂದ ಮೆಟ್ಟಿನಿಲ್ಲುವ ಮಹಿಷಿಯನ್ನು ಅಯ್ಯಪ್ಪ ಕೊಲ್ಲುವುದು, ನಾವು ಬದುಕು ಶಾಶ್ವತವೆಂಬ ಭ್ರಮೆಯಿಂದ ಹೊರಬರಬೇಕೆಂಬುದರ ಸೂಚನೆ. ಐಶ್ವರ್ಯದ ಗುಡ್ಡೆ ಹಾಕಿ ಅವೆಲ್ಲವನ್ನೂ ಕ್ಷಣಾರ್ಧದಲ್ಲಿ ಬೂದಿಯಾಗಿಸಿ ವಾವರನನ್ನು ಬೆಚ್ಚಿಬೀಳಿಸಿದ ಕತೆ ಬದುಕಿನಲ್ಲಿ ನಾವು ಕೂಡಿಹಾಕುವ ಸಂಪತ್ತೆಲ್ಲವೂ ನಶ್ವರ ಎಂಬುದರ ದ್ಯೋತಕ. ಅಹಂಕಾರ, ಅಜ್ಞಾನಗಳ ಕೂಪವಾಗಿರುವ ಮನುಷ್ಯ ತನ್ನ ದೇಹವನ್ನೂ ಮನಸ್ಸನ್ನೂ ದಂಡಿಸಿಕೊಂಡು ಶಬರಿಮಲೆಯಂಥ ದುರ್ಗಮ ದಾರಿಯಲ್ಲಿ ನಡೆದು ಆತ್ಮಜ್ಞಾನದ ದಾರಿಯಲ್ಲಿ ಹದಿನೆಂಟು ಮೆಟ್ಟಿಲುಗಳನ್ನು ಹತ್ತಿ ಬದುಕಿನ ಅಂತಿಮ ಸತ್ಯವನ್ನೂ ಸಾಕ್ಷಾತ್ಕಾರವನ್ನೂ ಕಾಣಬೇಕು ಎಂಬುದೇ ಅಯ್ಯಪ್ಪ ಕೊಡುವ ದಿವ್ಯಸಂದೇಶ.

ॐ

**ಪ್ರಕೃತಿ ವಿಕೃತಿ ಸಂಸ್ಕೃತಿ**

ಹಸುವಿನ ಹಾಲು ಕುಡಿಯುವುದು – ಪ್ರಕೃತಿ
ಹಸುವನ್ನೇ ಕೊಂದು ತಿನ್ನುವುದು – ವಿಕೃತಿ
ಹಸುವಿನ ಹಾಲಿನಿಂದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಪಡೆದು ಸೇವಿಸುವುದು – ಸಂಸ್ಕೃತಿ



# ರೈತರ ದಿನ

ರೈತರನ್ನು ದೇಶದ ಬೆನ್ನೆಲುಬು ಎಂದು ಸ್ಮರಿಸಲು ಮತ್ತು ಗುರುತಿಸಲು ಡಿಸೆಂಬರ್ 23 ರಂದು ಕಿಸಾನ್ ದಿವಸ್ ಎಂದೂ ಕರೆಯಲ್ಪಡುವ ರಾಷ್ಟ್ರೀಯ ರೈತರ ದಿನವನ್ನು ಆಚರಿಸಲಾಗುತ್ತದೆ. ಭಾರತದ ಐದನೇ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮದಿನದ ನೆನಪಿಗಾಗಿ ಈ ದಿನವನ್ನು ಆಯ್ಕೆ ಮಾಡಲಾಗಿದೆ. ಪ್ರತಿ ವರ್ಷ, ಉತ್ತರ ಪ್ರದೇಶ, ಪಂಜಾಬ್, ಹರಿಯಾಣ ಮತ್ತು ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ ರಾಷ್ಟ್ರೀಯ ರೈತ ದಿನವನ್ನು ಆಚರಿಸಲಾಗುತ್ತದೆ, ಅಲ್ಲಿ ರೈತರು ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ. ಜನರು ಹಸಿವಿನಿಂದ ಸಾಯುವುದಿಲ್ಲ ಎಂದು ಖಾತರಿಪಡಿಸಲು ರೈತರು ಗಡಿಯಾರದಂತೆ ವರ್ಷವಿಡೀ ಕೆಲಸ ಮಾಡುತ್ತಾರೆ, ಪ್ರತಿ ವರ್ಷ, ರೈತರಿಗೆ ಜಾಗೃತಿ ಮೂಡಿಸಲು ಮತ್ತು ಸಮಾಜಕ್ಕೆ ಅವರ ಕೊಡುಗೆಗಳಿಗಾಗಿ ಧನ್ಯವಾದಗಳನ್ನು ನೀಡಲು ರೈತ ದಿನಾಚರಣೆಯನ್ನು ಆಚರಿಸಲಾಗುತ್ತದೆ.

## ರಾಷ್ಟ್ರೀಯ ರೈತರ ದಿನದ ಇತಿಹಾಸ:

ಕಿಸಾನ್ ನಾಯಕರಾದ ಚೌಧರಿ ಚರಣ್ ಸಿಂಗ್ ಅವರು ಜುಲೈ 28, 1979 ರಿಂದ ಜನವರಿ 14, 1980 ರವರೆಗೆ ಅಧ್ಯಕ್ಷರಾಗಿದ್ದರು. ರೈತರು ಮತ್ತು ಅವರ ಕಷ್ಟಗಳ ಕುರಿತು ಅವರ ಪ್ರಕಟಣೆಗಳು ದೇಶಾದ್ಯಂತ ರೈತರ ಜೀವನವನ್ನು ಸುಧಾರಿಸಲು ವಿವಿಧ ಸಲಹೆಗಳನ್ನು ಒದಗಿಸಿದ್ದವು. ವಿವಿಧ ರೈತ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ ನೀಡಿ, ಚರಣ್ ಸಿಂಗ್ ಅವರ ಜನ್ಮದಿನದ ಆಚರಣೆಯಲ್ಲಿ, ಸರ್ಕಾರವು 2001 ರಲ್ಲಿ ಕಿಸಾನ್ ದಿವಸ್ ಅನ್ನು ಆಚರಿಸಿತು. ಭಾರತದ ಎರಡನೇ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಹೆಜ್ಜೆಗಳನ್ನು ಅನುಸರಿಸಿ, ಅವರು ರೈತರಿಗೆ "ಜೈ ಜವಾನ್ ಜೈ ಕಿಸಾನ್" ಎಂಬ ಸಾಂಪ್ರದಾಯಿಕ ವಾಕ್ಯವನ್ನು ನೀಡಿದರು.

ಶ್ರೀಮಂತ ಭೂಮಾಲೀಕರು ಅಥವಾ ಜಮೀನ್ದಾರರು ರೈತರನ್ನು ಹೇಗೆ ಶೋಷಿಸುತ್ತಾರೆ ಮತ್ತು ಇದು ಗ್ರಾಮೀಣ ಆರ್ಥಿಕತೆಗೆ ಹೇಗೆ ಹಾನಿ ಮಾಡುತ್ತದೆ ಎಂಬುದನ್ನು ಚರಣ್ ಸಿಂಗ್ ನೋಡಿ, ಅವರು 1937 ರಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಆಯ್ಕೆಯಾದ ನಂತರ ಅಂತಹ ಶೋಷಣೆಯ ರಚನೆಗಳನ್ನು ಕೆಡವಲು ನಿರ್ಧರಿಸಿದರು. ಸಂಸದೀಯ ಕಾರ್ಯದರ್ಶಿಯಾಗಿ 1950 ರ ದಶಕದಲ್ಲಿ ಉತ್ತರ ಪ್ರದೇಶದಲ್ಲಿ ಭೂ ಸುಧಾರಣೆಗಳ ಕಂದಾಯ ಸಚಿವರಾಗಿ, ಚರಣ್ ಸಿಂಗ್ ಭೂಸುಧಾರಣಾ ಕಾನೂನುಗಳನ್ನು ಅಭಿವೃದ್ಧಿಪಡಿಸಿದರು.

ಜಮೀನ್ದಾರಿ ನಿರ್ಮೂಲನೆ,' 'ಜಂಟಿ ಕೃಷಿ ಎಕ್ಸ್-ರೇಡ್,' 'ಭಾರತದ ಬಡತನ ಮತ್ತು ಅದರ ಪರಿಹಾರ,' ಮತ್ತು 'ರೈತ ಮಾಲೀಕತ್ವ,' ಸೇರಿದಂತೆ ಹಲವಾರು ಕೃತಿಗಳನ್ನು ಚರಣ್ ಸಿಂಗ್ ಅವರು ರೈತರ ಉದ್ದೇಶವನ್ನು ಒತ್ತಿಹೇಳಲು ಬರೆದಿದ್ದಾರೆ.

## ರೈತರ ದಿನಾಚರಣೆಯ ಉಲ್ಲೇಖಗಳು:

"ಕೃಷಿಯು ತಪ್ಪಾದರೆ, ದೇಶದಲ್ಲಿ ಬೇರೆ ಯಾವುದೂ ಸರಿಯಾಗಲು ಅವಕಾಶವಿಲ್ಲ."- ಎಂ.ಎಸ್.ಸ್ವಾಮಿನಾಥನ್

"ನಾನು ಪ್ರಪಂಚದ ಚಕ್ರವರ್ತಿಯಾಗುವುದಕ್ಕಿಂತ ನನ್ನ ಜಮೀನಿನಲ್ಲಿರಲು ಬಯಸುತ್ತೇನೆ." – ಜಾರ್ಜ್ ವಾಷಿಂಗ್ಟನ್

"ತನ್ನ ಮಣ್ಣನ್ನು ನಾಶಪಡಿಸುವ ರಾಷ್ಟ್ರವು ತನ್ನನ್ನು ತಾನೇ ನಾಶಪಡಿಸುತ್ತದೆ." – ಫ್ರಾಂಕ್ಲಿನ್ ಡಿ. ರೂಸ್ವೆಲ್ಟ್

"ರೈತ ಮಾತ್ರ ನಮ್ಮ ಆರ್ಥಿಕತೆಯಲ್ಲಿ ಎಲ್ಲವನ್ನೂ ಚಿಲ್ಲರೆಯಲ್ಲಿ ಖರೀದಿಸುತ್ತಾನೆ, ಎಲ್ಲವನ್ನೂ ಸಗಟು ಮಾರಾಟ ಮಾಡುತ್ತಾನೆ ಮತ್ತು ಎರಡೂ ರೀತಿಯಲ್ಲಿ ಸರಕುಗಳನ್ನು ಪಾವತಿಸುತ್ತಾನೆ." – ಜಾನ್ ಎಫ್ ಕೆನಡಿ

"ವಸಂತಕಾಲದಲ್ಲಿ ನಿಷ್ಠೆಯಿಂದ ಬೀಜಗಳನ್ನು ಬಿತ್ತುವ ರೈತ ಮಾತ್ರ ಶರತ್ಕಾಲದಲ್ಲಿ ಕೊಯ್ಲು ಮಾಡುತ್ತಾನೆ" – BC ಫೋರ್ಬ್ಸ್

### ಮನೆ ಮದ್ದು

ಕಿತ್ತಲೆ ಹಣ್ಣಿನ ರಸವನ್ನು ವಿಷಮಶೀತ ಜ್ವರ ಮತ್ತು ಕ್ಷಯರೋಗದವರಿಗೆ ಕೊಟ್ಟರೆ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ.



# ಮಾವು

## ಮಾವಿನ ಇಳುವರಿ

ಕಸಿ ಮಾವಿನ ಮರಗಳು 4ನೆಯ ವರ್ಷದಿಂದ ಫಲಕೊಡಲು ಪ್ರಾರಂಭಿಸುವುವು. ಮೊದಮೊದಲು ಇಳುವರಿ ತುಂಬ ಕಡಿಮೆ. ಕಾಯಿಗಳ ಸಂಖ್ಯೆ ಮೊದಲು ಮರಕ್ಕೆ 10–15 ಇರುತ್ತಿದ್ದು 6ನೆಯ ವರ್ಷಕ್ಕೆ 50–75 ಆಗಿ 16 ನೆಯ ವರ್ಷಕ್ಕೆ 300–500 ಕ್ಕೇರುತ್ತದೆ. 20 ರಿಂದ 40 ವರ್ಷ ವಯಸ್ಸಿನ ಮರಗಳು ತಲಾ 1000–3000 ಹಣ್ಣುಗಳನ್ನು ಕೊಡುವುದುಂಟು. ಲಂಗರಾ, ದಸೆರಿ, ರಸಪೂರಿ, ನೀಲಮ್, ತೋತಾಪುರಿ (ಬ್ಯಾಂಗಲೂರ), ಸುವರ್ಣರೇಖ ಮುಂತಾದ ಬಗೆಗಳು ಅಧಿಕ ಇಳುವರಿ ಕೊಡುವವೆಂದು ಹೆಸರಾಗಿದ್ದರೆ (800–3000 ಹಣ್ಣುಗಳು), ಜಹಾಂಗೀರ್ ಬಗೆ ಕೇವಲ 200–250 ಹಣ್ಣುಗಳನ್ನು ಮಾತ್ರ ಕೊಡುತ್ತದೆ.

ಮಾವಿನ ಹಣ್ಣಿನ ಸುಗ್ಗಿ ದಕ್ಷಿಣ ಭಾರತದಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಆರಂಭವಾಗಿ ಮೇ ವೇಳೆಗೆ ಮುಗಿಯುತ್ತದಾದರೆ ಉತ್ತರ ಭಾರತದಲ್ಲಿ ಜೂನ್ ಸಮಯಕ್ಕೆ ಆರಂಭವಾಗಿ ಆಗಸ್ಟ್ ಕೊನೆಯ ತನಕ ಇರುತ್ತದೆ.

ಕಾಯಿಗಳು ಪೂರ್ಣ ಬಲಿತಾಗ ಮತ್ತು ಇನ್ನೂ ಹಸುರಾಗಿರುವಾಗಿಯೂ ಕೊಯ್ಲು ಆರಂಭವಾಗುತ್ತದೆ. ಚೆನ್ನಾಗಿ ಬಲಿತ ಕಾಯಿಗಳನ್ನು ಸಂಗ್ರಹ ಕೋಣೆಗಳಲ್ಲಿ ಬತ್ತದ ಒಣಹುಲ್ಲು ಇಲ್ಲವೆ ಗೋದಿ ತೌಡಿನ ಹಾಸಿನ ಮೇಲಿರಿಸಿ ಒಂದು ವಾರ ಕಾಲ ಇರಿಸಿ ಮಾಗಲು ಬಿಡಲಾಗುತ್ತದೆ. ಬಿದಿರಿನ ಬುಟ್ಟಿಗಳಲ್ಲಿ ಇಲ್ಲವೆ ಮರದ ಪೆಟ್ಟಿಗೆಗಳಲ್ಲಿ ಹಣ್ಣುಗಳನ್ನು ಇರಿಸಿ ಮಾರುಕಟ್ಟೆಗೆ ಕಳಿಸಲಾಗುತ್ತದೆ.

## ಉಪಯೋಗಗಳು

ಮಾವಿನ ಹಣ್ಣು ಅತ್ಯಂತ ರುಚಿಕರವಾಗಿದ್ದು, ಪ್ರಪಂಚದಾದ್ಯಂತ ಬೇಡಿಕೆಯಲ್ಲಿದೆ. ಕೆಲವು ತಳಿಗಳು ಪಾನೀಯ ತಯಾರಿಕೆಗೆ ಉಪಯುಕ್ತ. ಕಾಡು ಮಾವಿನ ಜಾತಿಗಳಲ್ಲಿ ಅಪ್ಪೆ ಮತ್ತು ಕೆಲವು ಉಪ್ಪಿನಕಾಯಿ ತಯಾರಿಕೆಗೆ ಬಳಸಲ್ಪಡುತ್ತಿದೆ. ಎಳೆಯ ಮತ್ತು ಮಾಗದ ಕಾಯಿಗಳನ್ನು ಉಪ್ಪಿನಕಾಯಿ, ಚಟ್ನಿ ಮುಂತಾದ ರೂಪಗಳಲ್ಲಿ ಮತ್ತು ವಿವಿಧ ತಿನಿಸುಗಳ ಜೊತೆಯಲ್ಲಿ ಬಳಸಲಾಗುತ್ತದೆ. ಮಾಗಿದ ಹಣ್ಣುಗಳನ್ನು ರಸ, ಜಾಮ್, ಜೆಲ್ಲಿ, ಮುರಬ್ಬ, ಮಾವಿನಹಪ್ಪಳ (ಆಮ್ ಪಾಪಡ್) ಇತ್ಯಾದಿ ರೂಪಗಳಲ್ಲಿ ಸೇವಿಸಲಾಗುತ್ತದೆ.

ಜಾವ, ಫಿಲಿಪೀನ್ಸ್ ದೇಶಗಳಲ್ಲಿ ಮಾವಿನ ಎಳೆಯ ಚಿಗುರನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಎಲೆತೊಪ್ಪಲು ದನಗಳಿಗೆ ಮೇವು ಕೂಡ ಆಗುತ್ತದೆ. ಎಲೆಗಳನ್ನು ಸುಟ್ಟು ಪಡೆಯುವ ಬೂದಿಯನ್ನು ಸುಟ್ಟಗಾಯ ವಾಸಿಮಾಡಲು ಬಳಸುವುದುಂಟು. ಒಣಗಿಸಿದ ಮಾವಿನ ಹೂಗಳು ಅತಿಸಾರ, ಆಮಶಂಕೆಗಳಿಗೆ ಒಳ್ಳೆಯ ಮದ್ದು ಎನಿಸಿವೆ. ಮಾವಿನ ತೊಗಟೆಯಲ್ಲಿ ಟ್ಯಾನಿನ್ ಇದೆಯಾಗಿ ಚರ್ಮಹದಗೊಳಿಸಲೂ ಪ್ರತಿಬಂಧಕವಾಗಿಯೂ ಇದು ಬಳಕೆಯಾಗುತ್ತದೆ. ತೊಗಟೆಯಿಂದ ಪಡೆಯುವ ರಂಗನ್ನು ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳಿಗೆ ತಿಳಿಹಳದಿ ಬಣ್ಣ ಕೊಡಲು ಉಪಯೋಗಿಸುವರು. ಮಾವಿನಮರದಿಂದ ಸಾಕಷ್ಟು ಒಳ್ಳೆಯ ಗೋಂದು ಲಭಿಸುತ್ತದೆ. ಮಾವಿನಮರದ ಚೌಬೀನೆ ಸಾಕಷ್ಟು ದೃಢವಾದುದು, ಗಟ್ಟಿಯಾದುದೂ ಆಗಿರುವುದರಿಂದ ಹಲವಾರು ಮರಗೆಲಸಗಳಿಗೆ ಒದಗುತ್ತದೆ.



## ಮಾವಿನಹಣ್ಣಿನ ಸಾರ

**ಮಾವಿನ ಹಣ್ಣು, ಹಣ್ಣುಗಳ ರಾಜ ಎಂದು ಪರಿಗಣಿಸಲ್ಪಟ್ಟಿದೆ. ಮಾವಿನ ಹಣ್ಣಿನ ಆಲ್ಫಾನ್ಸೋ ಜಾತಿಯ 100 ಗ್ರಾಂ ಹಣ್ಣಿನಲ್ಲಿ ಇರುವ (ಅಂದಾಜು) ಸಾರ;**

ನೀರು –81.6 ಗ್ರಾಂ, ಪ್ರೋಟೀನ್ 0.9ಗ್ರಾಂ, ಕೊಬ್ಬು 0.4 ಗ್ರಾಂ, ಕಾರ್ಬೋಹೈಡ್ರೇಟ್ (ಸಕ್ಕರೆ) –16.3ಗ್ರಾಂ, ನಾರು – 0.4 ಗ್ರಾಂ, ಸುಣ್ಣ –0.40 ಮಿ ಗ್ರಾಂ, ರಂಜಕ – 16.0 ಮಿ ಗ್ರಾಂ, ಪೊಟ್ಯಾಸಿಯಂ –2000.0ಮಿ ಗ್ರಾಂ, ಸೋಡಿಯಂ –9.0 ಮಿಗ್ರಾಂ, ವಿಟಮಿನ್ (ಅನ್ನಾಂಗ) ಎ – 20,000 ಐ.ಯು. ವಿಟಮಿನ್ (ಅನ್ನಾಂಗ) ಬಿ 1 – 0.08ಮಿ ಗ್ರಾಂ, ವಿಟಮಿನ್ (ಅನ್ನಾಂಗ)ಬಿ 2 – 0.09 ಮಿಗ್ರಾಂ, ವಿಟಮಿನ್ (ಅನ್ನಾಂಗ) ಸಿ – 125.0 ಮಿ ಗ್ರಾಂ, ನಿಯಾಚಿನ್ – 4.1 ಮಿ ಗ್ರಾಂ, ಕ್ಯಾಲರೀಗಳು –50, ವಿಟಮಿನ್'ಎ' ಹೆಚ್ಚು ಇರುವುದರಿಂದ ಕಣ್ಣಿನ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳಲಾಗಿದೆ. ತೊಳೆಯದ, ಅತಿ ಕಳಿತ (ಕೊಳೆತ) ಹಣ್ಣು, ಅರ್ಧ ಮಾಗಿದ ಹಣ್ಣು ಅತಿಸಾರಕ್ಕೆ ಕಾರಣವಾಗಬಹುದು. ಮಾಗಿದ ಹಣ್ಣಿನಲ್ಲಿ ಇರುವ ಮುಖ್ಯ ಸಕ್ಕರೆಗಳೆಂದರೆ ಸ್ಯೂಕ್ರೋಸ್, ಗ್ಲೂಕೋಸ್ ಮತ್ತು ಫ್ರಕ್ಟೋಸ್. ಇನ್ನೂ ಕಾಯಿ ಹಂತದಲ್ಲಿರುವಾಗ ಸಿಟ್ರಿಕ್, ಮ್ಯಾಲಿಕ್, ಆಕ್ಸಾಲಿಕ್, ಸಕ್ಸಿನಿಕ್ ಆಮ್ಲಗಳೂ ಗುರುತಿಸಲಾಗದ ಇನ್ನೆರಡು ಆಮ್ಲಗಳೂ ಇರುವುವು. ಮಾಗುತ್ತ ಬಂದಂತೆ ಆಮ್ಲತೆ ಕಡಿಮೆಯಾಗಿ ಸಕ್ಕರೆ ಅಂಶ ಹೆಚ್ಚಾಗುತ್ತ ಹೋಗುತ್ತದೆ.

## ಮಾವಿನ ಬೆಳೆ ಮತ್ತು ನಿರ್ಯಾತ

ಭಾರತದಿಂದ ವಾರ್ಷಿಕ ರಪ್ತಾಗುವ ಮಾವಿನ ಹಣ್ಣಿನ ಪ್ರಮಾಣ ಸುಮಾರು 60 ಸಾವಿರ (60,000– 2013–2014) ಅದರಲ್ಲಿ ಸುಮಾರು 3500 ಟನ್ ಯೂರೋಪಿಗೆ, ಅದರಲ್ಲಿ ಬ್ರಿಟನ್ನಿಗೇ 3000 ಟನ್ ರಫ್ತಾದರೆ ಉಳಿದದ್ದು ಅರಬ್ ದೇಶಗಳಿಗೆ ಅಥವಾ ಮಧ್ಯಪ್ರಾಚ್ಯ ದೇಶಗಳಿಗೆ ಹೋಗುತ್ತದೆ.


ಭಾರತ ಮಾವು ಬೆಳೆಯಲ್ಲಿ ಜಗತ್ತಿನ ಮೊದಲ ಸ್ಥಾನ ಹೊಂದಿದೆ. ಜಗತ್ತಿನಲ್ಲಿ ಸುಮಾರು 1,300 ತಳಿಗಳಿವೆ ಅವುಗಳಲ್ಲಿ ಬಾರತದಲ್ಲಿ ಸುಮಾರು ಸಾವಿರ ತಳಿಗಳ ಮಾವು ಬೆಳೆಯುತ್ತಿದೆ. ನಮ್ಮ ದೇಶದಲ್ಲಿ ಸುಮಾರು 15.2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯುತ್ತಿದ್ದು, 95 ಲಕ್ಷ ಮೆಟ್ರಿಕ್ ಟನ್ ಇಳುವರಿ ಪಡೆಯಲಾಗುತ್ತಿದೆ. ಆಂಧ್ರಪ್ರದೇಶ, ಬಿಹಾರ, ಗುಜರಾತ್, ಮಹಾರಾಷ್ಟ್ರ, ಉತ್ತರಪ್ರದೇಶ ಒಟ್ಟು ಮಾವು ಉತ್ಪಾದನೆಯಲ್ಲಿ ಮೂರನೇ ಎರಡರಷ್ಟು ಪಾಲು ಬೆಳೆಯುವುದು. ಅದರಲ್ಲಿ ಆಂಧ್ರಪ್ರದೇಶ ಮತ್ತು ಉತ್ತರಪ್ರದೇಶ ದೇಶದ ಮಾವು ಉತ್ಪಾದನೆಯನ್ನು ಅರ್ಧದಷ್ಟನ್ನು ಪೂರೈಸುತ್ತವೆ. ಕರ್ನಾಟಕದಲ್ಲಿ ಮಾವು ಸುಮಾರು 1.30 ಲಕ್ಷ ಹೆಕ್ಟೇರ್ ಪ್ರದೇಶ ಆವರಿಸಿದ್ದು, 14 ಲಕ್ಷ ಟನ್ ಉತ್ಪಾದನೆ ಮಾಡಲಾಗುತ್ತಿದೆ (2013–2014).

ಮಾವಿನ ಹಣ್ಣು ಒಂದು ವರ್ಷ ಉತ್ತಮ ಬೆಳೆ ಬಂದರೆ ಮಾರನೇ ವರ್ಷ ಕಡಿಮೆ ಬೆಳೆ ಬರುವುದು. ಕರ್ನಾಟಕದ ಮಾವಿನ ಹಣ್ಣುಗಳು ಪುಣೆಗೆ ಹೋಗಿ ಅಲ್ಲಿಂದ ವಿದೇಶಗಳಿಗೆ ರಫ್ತಾಗುತ್ತವೆ. ಕರ್ನಾಟಕದ ಆಲ್ಫಾನ್ಸೋ ಹಣ್ಣುಗಳು ಮಹಾರಾಷ್ಟ್ರ ಸೇರಿ ಅಲ್ಲಿಂದ ರತ್ನಗಿರಿ (ಬ್ರ್ಯಾಂಡ್ ನೇಮ್) ಹೆಸರಿನಲ್ಲಿ ಹೊರದೇಶಕ್ಕೆ ಹೋಗುತ್ತವೆ. ಆದ್ದರಿಂದ ಕರ್ನಾಟಕದಿಂದ ಎಷ್ಟು ರಫ್ತಾಗುವುದೆನ್ನುವ ಲೆಕ್ಕ ಸಿಗುವುದಿಲ್ಲ. ಮಹಾರಾಷ್ಟ್ರದಲ್ಲಿ ಬೆಳೆಯುವ ರತ್ನಗಿರಿ ಹಣ್ಣಿಗಿಂತ ಕರ್ನಾಟಕದ ಆಲ್ಫಾನ್ಸೋ ಹೆಚ್ಚು ರುಚಿಯುಳ್ಳದ್ದು ಆದರೆ ಅದರ ಹೆಸರು ವಿದೇಶದಲ್ಲಿ ಇಲ್ಲ.

ಕಾರಣ ಅದು ಮಹಾರಾಷ್ಟ್ರದ ರತ್ನಗಿರಿ ಹೆಸರಿನಲ್ಲಿ ಮಾರಾಟವಾಗುವುದು ಮತ್ತು ರಫ್ತಾಗುವುದು. ಈಗ ಕರ್ನಾಟಕದಲ್ಲಿ ಮಾವಿನ ಹಣ್ಣಿನ ರಕ್ಷಣೆಗಾಗಿ ತಂಪು ಉಗ್ರಾಣಗಳು ತಯಾರಾಗುತ್ತಿವೆ. ಅದಾದ ನಂತರ ರಫ್ತಿಗೂ ಅನುಕೂಲವಾಗಿ ಉತ್ತಮ ಬೆಲೆ ರೈತರಿಗೆ ಸಿಗಬಹುದು.

ಕೋಲಾರ ಅತಿ ಹೆಚ್ಚು ಮಾವು ಬೆಳೆಯುವ ಜಿಲ್ಲೆಯಾಗಿದ್ದು, 40,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವರು. ರಾಮನಗರದಲ್ಲಿ 20,000 ಹೆಕ್ಟೇರ್, ಉಳಿದಂತೆ ಧಾರವಾಡ, ಹಾವೇರಿ, ಬೆಳಗಾವಿ, ಶಿವಮೊಗ್ಗ, ಚಿಕ್ಕಬಳ್ಳಾಪುರ, ತುಮಕೂರು, ಧಾರವಾಡ, ಗದಗ, ಬೆಳಗಾವಿ, ಕೊಡಗು ಮೊದಲಾದ ಜಿಲ್ಲೆಗಳಲ್ಲೂ ಬೆಳೆಯಲಾಗುತ್ತದೆ.


ರಾಜ್ಯದ ತಳಿ : ರಸಪುರಿ, ಅಲ್ಫಾನ್ಸೊ, ಮಲ್ಲಿಕಾ, ತೋತಾಪುರಿ, ಬೈಗನಪಲ್ಲಿ, ಪೈರಿ, ನೀಲಂ, ಮಲ್ಗೋವಾ. ರಫ್ತಾಗುವ ಮಾವು : ಅಲ್ಫಾನ್ಸೊ, ಮಲ್ಲಿಕಾ, ತೋತಾಪುರಿ, ಬೈಗನಪಲ್ಲಿ, ಮಲ್ಗೋವಾ. ಸುಮಾರು 100 ಮಾವಿನ ತಳಿಗಳಿರುವ ದೇಶದ ಪುಟ್ಟ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 12 ತಳಿಯ ಮಾವನ್ನು ಬೆಳೆಯಲಾಗುತ್ತಿದೆ. ರಾಜಗಿರಿ, ರಸಪುರಿ, ಮಲಗೋವಾ, ಬಾದಾಮಿ, ಬೇನಿಷಾ, ಮಲ್ಲಿಕಾ, ನೀಲಂ, ತೋತಾಪುರಿ, ಕುದೂಸ್, ಕಾಲಾಪಾಡ್, ಆಮ್ಲೆಟ್ ನಾಟಿ ತಳಿಗಳ ವಹಿವಾಟು ನಡೆಯುತ್ತಿದೆ. ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ, ಮಧ್ಯಪ್ರದೇಶ, ನವದೆಹಲಿ, ಪಂಜಾಬ್, ಹರಿಯಾಣ ರಾಜ್ಯಗಳಿಗೆ ಈ ತಾಲ್ಲೂಕಿನ ಮಾವು ರವಾನೆಯಾಗುತ್ತದೆ. ಕೊಯ್ಲು ಅವಧಿ : ಏಪ್ರಿಲ್– ಜೂನ್.




### ಮಾವಿನ ಬಗೆಗಳು

ಮಾವಿನಲ್ಲಿ ಬೀಜದಿಂದ ವೃದ್ಧಿಸಲಾಗುವ ಮತ್ತು ಕಸಿ ವಿಧಾನದಿಂದ ವೃದ್ಧಿಸಲಾಗುವ ಎಂದು ಎರಡು ಪ್ರಧಾನ ಗುಂಪುಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ಬೆಳೆಯಲಾಗುತ್ತಿರುವ ಮಾವಿನ ವಿವಿಧ ಬಗೆಗಳ ಪೈಕಿ ಮುಕ್ಕಾಲು ಪಾಲು ಮೊದಲನೆಯ ಗುಂಪಿಗೆ ಸೇರಿವೆಯಾದರೂ ಇವು ವಾಣಿಜ್ಯ ದೃಷ್ಟಿಯಿಂದ ಮುಖ್ಯವೆನಿಸಿಲ್ಲ. ಏಕೆಂದರೆ ಇವು ಪುಷ್ಕಳವಾಗಿ ಫಲ ಬಿಡುವುವಾದರೂ ಪ್ರತಿವರ್ಷ ಒಂದೇ ರೀತಿ ಫಲ ಕೊಡುವುವು ಎಂದು ಹೇಳುವಂತಿಲ್ಲ. ಇವುಗಳಲ್ಲಿ ಏಕಭ್ರೂಣೀಯ ಮತ್ತು ಬಹುಭ್ರೂಣೀಯ ಎಂಬ ಎರಡು ಬಗೆಗಳುಂಟು. ಭಾರತದ ಮಾವಿನ ಬಗೆಗಳ ಪೈಕಿ ಬಹುಪಾಲು ಮೊದಲನೆಯ ಗುಂಪಿನವು. ಕೇರಳದ ಕೆಲವೆಡೆಗಳಲ್ಲಿ ಮಾತ್ರ ಎರಡನೆಯ ಬಗೆಯ ಮಾವು ಕಂಡುಬರುತ್ತದೆ. ಉದಾಹರಣೆಗೆ ಓಲೂರು ಮತ್ತು ಚಂದ್ರಕರಣ. ಆಗ್ನೇಯ ಏಷ್ಯದ ಆರ್ದ್ರಕಾಡುಗಳಲ್ಲಿ ಬೆಳೆಯುವಂಥ ಹೆಚ್ಚಿನ ಪಾಲು ಮಾವುಗಳು ಬಹು ಭ್ರೂಣೀಯ ಗುಂಪಿನವಾಗಿವೆ. ಇಂಡೊಚೀನ ಪ್ರದೇಶದಲ್ಲಿ ಬೆಳೆಯುವ ಕಾಂಬೋಡಿಯಾನ, ಫಿಲಿಪೀನ್ಸ್‌ನಲ್ಲಿ ಬೆಳೆಯುವ ಕ್ಯಾರಬಾವೊ ಮತ್ತು ಪೈಕೊ ಬಗೆಗಳು ಈ ಗುಂಪಿನವು.

ಒಂದು ಅಂದಾಜಿನ ಪ್ರಕಾರ ದೇಶದ ವಿವಿಧ ಭಾಗಗಳಲ್ಲಿ ಸುಮಾರು 1000ಕ್ಕೂ ಹೆಚ್ಚಿನ ಮಾವಿನ ಬಗೆಗಳು ಕಾಣದೊರೆಯುತ್ತವೆ. ಇವುಗಳಿಗೆ ಒಂದೊಂದಕ್ಕೂ ವಿಶಿಷ್ಟವಾದ ರುಚಿ, ಸ್ವಾದ, ತಿರುಳಿನ ರಚನೆ ಇವೆಯೆನ್ನಲಾಗಿದೆ. ಆದರೆ ಈ ತೆರನ ವರ್ಗೀಕರಣಕ್ಕೆ ವೈಜ್ಞಾನಿಕ ಆಧಾರಗಳಿಲ್ಲವಾದ್ದರಿಂದ ಕಾಯಿಗಳ ಗಾತ್ರ, ಆಕಾರ ಗುಣಮಟ್ಟ, ಮರದ ಬೆಳವಣಿಗೆ ಮುಂತಾದ ಲಕ್ಷಣಗಳನ್ನು ಗಣನೆಗೆ ತೆಗೆದುಕೊಂಡು ಮಾವಿನ ಬೇರೆ ರೂಪಭೇದಗಳನ್ನು, ಬಗೆಗಳನ್ನು ಹೆಸರಿಸಲು ಪ್ರಯತ್ನ ನಡೆಸಲಾಗಿದೆ. ಇದರ ಫಲವಾಗಿ ಒಟ್ಟು 77 ಭಾರತೀಯ ಬಗೆಗಳನ್ನೂ 24 ವಿದೇಶೀ ಬಗೆಗಳನ್ನೂ ಗುರುತಿಸಲಾಗಿದೆ. ಇವುಗಳ ಪೈಕಿ ವಾಣಿಜ್ಯದೃಷ್ಟಿಯಿಂದ ಅತಿಮುಖ್ಯವೆನಿಸಿರುವ ಕೆಲವು ಬಗೆಗಳನ್ನೂ ಅವುಗಳ ಕೃಷಿಗೆ ಪ್ರಸಿದ್ಧವಾಗಿರುವ ರಾಜ್ಯಗಳನ್ನೂ ಹೆಸರಿಸಲಾಗಿದೆ: ಆಲಂಪುರ್ ಬನೆಷನ್ (ಆಂಧ್ರ ಪ್ರದೇಶ, ತಮಿಳುನಾಡು), ಆಲ್‌ಫೊನ್ಸೊ (ಬಾದಾಮಿ, ಆಪೂಸ್ ಇತ್ಯಾದಿ; ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಆಂಧ್ರ), ಬ್ಯಾಂಗಲೂರ (ತೋತಾಪುರಿ, ಕಿಳಿಮುಕ್ಕು; ಆಂಧ್ರ, ತಮಿಳುನಾಡು, ಕರ್ನಾಟಕ), ಬಂಗನ ಪಲ್ಲೆ (ಆಂಧ್ರ), ದಸೇರಿ (ಉತ್ತರ ಪ್ರದೇಶ, ಪಂಜಾಬ್, ದೆಹಲಿ), ಗುಲಾಬ್ ಖಾಸ್ (ಬಿಹಾರ), ಲಂಗರಾ (ಉತ್ತರಪ್ರದೇಶ, ಬಿಹಾರ), ಮಲ್‌ಗೋವ (ಆಂಧ್ರ, ಮಹಾರಾಷ್ಟ್ರ, ಕರ್ನಾಟಕ), ನೀಲಮ್ (ತಮಿಳುನಾಡು, ಆಂಧ್ರ), ಓಲೂರು (ಕೇರಳ), ಪೈರಿ–ರಸಪೂರಿ (ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಕೇರಳ), ರುಮಾನಿ (ತಮಿಳುನಾಡಿನ ಪೂರ್ವ ಜಿಲ್ಲೆಗಳು), ರಾಜಾಪುರಿ (ಗುಜರಾತ್), ಸುವರ್ಣರೇಖ (ಆಂಧ್ರ), ವನರಾಜ (ಗುಜರಾತಿನ ವಡೋದರ ಭಾಗ), ಫಜ್ಲಿ (ಪಶ್ಚಿಮ ಬಂಗಾಲ, ಉತ್ತರ ಪ್ರದೇಶ, ಬಿಹಾರ), ಜರ್ದಾಲು (ಬಿಹಾರ, ಉತ್ತರ ಪ್ರದೇಶ), ಸಫೇದ (ಲಕ್ನೊ, ಉತ್ತರ ಪ್ರದೇಶ) ಗಳನ್ನು ಬೆಳೆಯುತ್ತಾರೆ. ॐ



# ಕ್ರಿಸ್ಮಸ್



ಕ್ರಿಸ್ಮಸ್ ಎಂದರೆ ಕ್ರಿಸ್ತಜಯಂತಿ ಅಥವಾ ಯೇಸುಕ್ರಿಸ್ತನು ಹುಟ್ಟಿದ ಸಂಭ್ರಮದ ದಿನ. ಜಗತ್ತಿನಾದ್ಯಂತ ಪ್ರತಿ ವರ್ಷದ ಡಿಸೆಂಬರ್ ತಿಂಗಳ ಇಪ್ಪತ್ತೈದನೇ ದಿನವನ್ನು ಯೇಸುಕ್ರಿಸ್ತನ ಹುಟ್ಟುಹಬ್ಬವಾಗಿ ಆಚರಿಸಲಾಗುತ್ತದೆ. ಕ್ರೈಸ್ತ ಸುವಾರ್ತೆ(ಗಾಸ್ಪೆಲ್)ಯ ಪ್ರಕಾರ ಯೇಸುಕ್ರಿಸ್ತನು ಮೇರಿ ಮತ್ತು ಜೋಸೆಫರ ಮಗನಾಗಿ ಇಂದು ಇಸ್ರೇಲ್‌ನಲ್ಲಿರುವ ಬೆತ್ಲಹೆಮ್ ಎಂಬ ಊರಿನಲ್ಲಿ ಹುಟ್ಟಿದ.

ಕ್ರಿಶ್ಚಿಯನ್ ಧರ್ಮದ ಕೇಂದ್ರ ವ್ಯಕ್ತಿ ಎಂದು ಪರಿಗಣಿಸಲ್ಪಟ್ಟ ಯೇಸುಕ್ರಿಸ್ತನ ಜನ್ಮದಿನದ ನೆನಪಿಗಾಗಿ ಡಿಸೆಂಬರ್ 25, ಸೋಮವಾರದಂದು ಕ್ರಿಸ್ಮಸ್ ಆಚರಿಸಲಾಗುತ್ತದೆ. ಇದನ್ನು ಭಾರತದಾದ್ಯಂತ ಆಚರಿಸಲಾಗುತ್ತದೆ. ಇದು ಭಾರತದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ರಾಷ್ಟ್ರೀಯ ರಜಾದಿನವಾಗಿದೆ.

ಕ್ರಿಸ್ಮಸ್‌ಅನ್ನು ಪ್ರಪಂಚದಾದ್ಯಂತ ವಾರ್ಷಿಕವಾಗಿ ಆಚರಿಸಲಾಗುತ್ತದೆ. ಕ್ರಿಸ್‌ಮಸ್ ಕೇವಲ ಧಾರ್ಮಿಕ ರಜಾದಿನವಾಗಿದೆ ಆದರೆ ಪ್ರಪಂಚದ ಅನೇಕ ಭಾಗಗಳಲ್ಲಿ ವ್ಯಾಪಕವಾಗಿ ಆಚರಿಸಲಾಗುವ ಸಾಂಸ್ಕೃತಿಕ ಮತ್ತು ಜಾತ್ಯಾತೀತ ಕಾರ್ಯಕ್ರಮವಾಗಿದೆ, ಆಗಾಗ್ಗೆ ವಿವಿಧ ಪದ್ಧತಿಗಳು, ಸಂಪ್ರದಾಯಗಳು ಮತ್ತು ಹಬ್ಬಗಳಿಂದ ನಿರೂಪಿಸಲ್ಪಟ್ಟಿದೆ.

ಕ್ರಿಶ್ಚಿಯನ್ನರು ಆಚರಿಸುವ ಕ್ರಿಸ್‌ಮಸ್, ದೇವರ ಮಗನೆಂದು ಪೂಜಿಸಲ್ಪಟ್ಟ ಯೇಸುಕ್ರಿಸ್ತನ ಜನ್ಮವನ್ನು ಗೌರವಿಸುತ್ತದೆ. ಪ್ರತಿ ವರ್ಷ ಡಿಸೆಂಬರ್ 25 ರಂದು, ಕ್ರಿಸ್ಮಸ್ ಹಬ್ಬವು ಎರಡು ಯುಗಗಳ ಮೂಲಕ ಪ್ರಪಂಚದಾದ್ಯಂತ ಆಚರಿಸಲಾಗುವ ಜಾತ್ಯತೀತ ಮತ್ತು ಧಾರ್ಮಿಕ ರಜಾದಿನವಾಗಿ ಅಭಿವೃದ್ಧಿಗೊಂಡಿದೆ. ಭಾರತದಲ್ಲಿ, ಕ್ರಿಸ್ಮಸ್ ರಜಾದಿನವು ಗೆಜೆಟೆಡ್ ರಜಾದಿನವಾಗಿದೆ. ಇದು ಯೇಸುವಿನ ವಂಶಾವಳಿಯನ್ನು ನೆನಪಿಸುತ್ತದೆ.

ಹೆಚ್ಚಿನ ಸಂಖ್ಯೆಯ ಕ್ರಿಶ್ಚಿಯನ್ನರನ್ನು ಹೊಂದಿರುವ ರಾಜ್ಯಗಳಲ್ಲಿ, ರಜಾದಿನವನ್ನು ಅರ್ಥಮಾಡಿಕೊಳ್ಳಲು ಸುಲಭವಾಗಿದೆ. ನೇಟಿವಿಟಿ ದೃಶ್ಯಗಳ ಪ್ರದರ್ಶನ, ಸಾಂಟಾ ಕ್ಲಾಸ್ ಆಗಮನ ಮತ್ತು ಕ್ರಿಸ್ಮಸ್ ಮರಗಳ ದೀಪಗಳು ಕ್ರಿಸ್ಮಸ್ ಋತುವನ್ನು ರೂಪಿಸುವ ಕೆಲವು ಸಂಪ್ರದಾಯಗಳಾಗಿವೆ. ಪ್ರಪಂಚದಾದ್ಯಂತದ ಕ್ರಿಶ್ಚಿಯನ್ನರಿಗೆ, ಕ್ರಿಸ್ಮಸ್ ಅತ್ಯಂತ ಪ್ರಮುಖವಾಗಿದೆ.

ಭಾರತದಲ್ಲಿ ಕ್ರಿಸ್ಮಸ್ ಋತುವಿನಲ್ಲಿ, ವಿಶಿಷ್ಟ ಸಂಪ್ರದಾಯಗಳು ಮತ್ತು ಪದ್ಧತಿಗಳ ವಸ್ತ್ರವು ಹಬ್ಬದ ಭೂದೃಶ್ಯವನ್ನು ಅಲಂಕರಿಸುತ್ತದೆ. ಜನರು ಸಂತೋಷ ಮತ್ತು ಆಚರಣೆಯೊಂದಿಗೆ ಗಾಳಿಯನ್ನು ತುಂಬುವ ಹೃದಯಸ್ಪರ್ಶಿ ಆಚರಣೆಗಳ ಸರಣಿಯಲ್ಲಿ ಪಾಲ್ಗೊಳ್ಳುತ್ತಾರೆ.

ವಿಶಿಷ್ಟ ಆಚರಣೆಗಳಲ್ಲಿ ಒಂದು ಬಾಳೆ ಅಥವಾ ಮಾವಿನ ಮರಗಳ ಅಲಂಕಾರವನ್ನು ಒಳಗೊಂಡಿರುತ್ತದೆ. ದೇಶದಾದ್ಯಂತ ಸುಲಭವಾಗಿ ಕಂಡುಬರುವ ಈ ಮರಗಳು ಹಬ್ಬದ ಸೃಜನಶೀಲತೆಗೆ ಕ್ಯಾನ್ವಾಸ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. 'ತೋರಣ' ಎಂದು ಕರೆಯಲ್ಪಡುವ ಬಾಳೆ ಮತ್ತು ಮಾವಿನ ಎಲೆಗಳ ಹಚ್ಚ ಹಸಿರಿನಿಂದ ತಮ್ಮ ಮನೆಗಳನ್ನು ಅಲಂಕರಿಸಲು ಕುಟುಂಬಗಳು ಒಟ್ಟಾಗಿ ಸೇರುತ್ತವೆ. ಮಾರಿಗೋಲ್ಡ್‌ಗಳು ಮತ್ತು ಮಾವಿನ ಎಲೆಗಳನ್ನು ಬಳಸಿ ಕುತಂತ್ರದ ಕೈಗಳ ಫ್ಯಾಶನ್ 'ಟೋರನ್' ಬ್ಯಾನರ್‌ಗಳು, ನಂತರ ಅವುಗಳನ್ನು ದ್ವಾರಗಳ ಮೇಲೆ ಆಕರ್ಷಕವಾಗಿ ಹೊದಿಸಿ, ಪರಿಮಳಯುಕ್ತ ಮತ್ತು ಹಬ್ಬದ ಸ್ಪರ್ಶವನ್ನು ನೀಡುತ್ತದೆ.



ಭಾರತದಲ್ಲಿ ಕ್ರಿಸ್‌ಮಸ್‌ನ ಮಹತ್ವದ ಅಂಶವೆಂದರೆ ಕ್ರಿಸ್‌ಮಸ್ ಕೊಟ್ಟಿಗೆ ಅಥವಾ ನೇಟಿವಿಟಿ ದೃಶ್ಯವನ್ನು ರಚಿಸುವುದು. ಈ ಕಲಾತ್ಮಕ ಕೋಷ್ಟಕವು ಸಾಮಾನ್ಯವಾಗಿ ಮರಳು, ಕಲ್ಲುಗಳು, ಇಟ್ಟಿಗೆಗಳು ಮತ್ತು ಸ್ಥಳೀಯ ಸಸ್ಯಗಳನ್ನು ಒಳಗೊಂಡಿರುತ್ತದೆ.

ಗೋವಾ, ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಂತಹ ರಾಜ್ಯಗಳು ರೋಮಾಂಚಕ ಕ್ರಿಸ್ಮಸ್ ಆಚರಣೆಗಳೊಂದಿಗೆ ಜೀವಂತವಾಗಿವೆ. ಚರ್ಚುಗಳಲ್ಲಿ ಮಧ್ಯರಾತ್ರಿಯ ಜನಸ್ತೋಮಗಳು ಮೇಣದಬತ್ತಿಗಳನ್ನು ಬೆಳಗಿಸುವ ಸಮಾರಂಭಗಳು ಮತ್ತು ಹೃತ್ಪೂರ್ವಕ ಪ್ರಾರ್ಥನೆಗಳೊಂದಿಗೆ ಪ್ರತಿಧ್ವನಿಸುತ್ತವೆ, ಪವಿತ್ರ ಮತ್ತು ಪ್ರಶಾಂತ ವಾತಾವರಣವನ್ನು ಸೃಷ್ಟಿಸುತ್ತವೆ.

ಗೋವಾದ ಸುಂದರವಾದ ಕಡಲತೀರಗಳಲ್ಲಿ, ಸಂಗೀತ, ನೃತ್ಯ, ಮತ್ತು ಸ್ಥಳೀಯ ಪಾಕಪದ್ಧತಿಗಳು ಕೇಂದ್ರ ಹಂತವನ್ನು ತೆಗೆದುಕೊಳ್ಳುತ್ತವೆ, ಇದು ಕ್ರಿಸ್ಮಸ್ ಹಬ್ಬಗಳನ್ನು ಉತ್ಸಾಹಭರಿತ ವ್ಯವಹಾರವನ್ನಾಗಿ ಮಾಡುತ್ತದೆ. ದೆಹಲಿ, ಮುಂಬೈ, ಬೆಂಗಳೂರು ಮತ್ತು ಚೆನ್ನೈನಂತಹ ಪ್ರಮುಖ ನಗರಗಳಲ್ಲಿ, ರಜಾದಿನದ ಉತ್ಸಾಹವು ಬೀದಿಗಳನ್ನು ಆವರಿಸುತ್ತದೆ, ವೈವಿಧ್ಯಮಯ ಅನುಭವಗಳನ್ನು ನೀಡುತ್ತದೆ.

ಈ ಹಬ್ಬದ ಋತುವಿನಲ್ಲಿ, ಗಾಳಿಯು ಕರೋಲ್‌ಗಳ ಮಧುರ ತಳಿಗಳಿಂದ ತುಂಬಿರುತ್ತದೆ. ಸಾಹಿತ್ಯವು ವಿದೇಶಿಯಾಗಿ ಉಳಿದಿದ್ದರೂ, ಉನ್ನತಿಗೇರಿಸುವ ಮಧುರಗಳು ಭಾಷೆಯ ತಡೆಗೋಡೆಗೆ ಸೇತುವೆಯಾಗಿ, ಸಂತೋಷದ ವಾತಾವರಣವನ್ನು ಸೇರಿಸುತ್ತವೆ. ಗೋವಾ ಮತ್ತು ಬಾಂದ್ರಾದಂತಹ ಸ್ಥಳಗಳಲ್ಲಿ, ಸ್ಥಳೀಯರು ಮತ್ತು ಸಂದರ್ಶಕರು ಕ್ಯಾರೋಲಿಂಗ್‌ನ ಉತ್ಸಾಹಭರಿತ ಸಂಪ್ರದಾಯದಲ್ಲಿ ಸೇರಿಕೊಳ್ಳುತ್ತಾರೆ, ರಜಾದಿನದ ನಂತರ ದೀರ್ಘಕಾಲ ಉಳಿಯುವ ಸಾಮರಸ್ಯದ ನೆನಪುಗಳನ್ನು ಸೃಷ್ಟಿಸುತ್ತಾರೆ.

ಕ್ರಿಸ್ಮಸ್ ದಿನದಂದು, ಎಲ್ಲಾ ರಾಜ್ಯ, ರಾಷ್ಟ್ರೀಯ ಮತ್ತು ಸ್ಥಳೀಯ ಬ್ಯಾಂಕುಗಳು ಮತ್ತು ಕಚೇರಿಗಳು ಮುಚ್ಚಲ್ಪಡುತ್ತವೆ. ಭಾರತದಲ್ಲಿ ಕ್ರಿಶ್ಚಿಯನ್ನರ ಒಡೆತನದ ವ್ಯಾಪಾರಗಳು ಮತ್ತು ಅಂಗಡಿಗಳನ್ನು ಮುಚ್ಚಲಾಗುವುದು.

## ಹಿನ್ನೆಲೆ

ಆರಂಭಿಕ ಕ್ರಿಶ್ಚಿಯನ್ ಸಮುದಾಯವು ಯೇಸುವಿನ ಜನ್ಮ ದಿನಾಂಕ ಮತ್ತು ಅದರ ಪ್ರಾರ್ಥನಾ ಆಚರಣೆಯ ನಡುವೆ ವ್ಯತ್ಯಾಸವನ್ನು ಹೊಂದಿದೆ. ಯೇಸುವಿನ ಜನನದ ಆಚರಣೆಯನ್ನು ಸ್ಥಾಪಿಸಲು ಸಮಯ ತೆಗೆದುಕೊಂಡಿತು. ಕುತೂಹಲಕಾರಿಯಾಗಿ, ಕ್ರಿಶ್ಚಿಯನ್ ಧರ್ಮದ ಮೊದಲ ಎರಡು ಶತಮಾನಗಳಲ್ಲಿ, ಜೀಸಸ್ ಮತ್ತು ಹುತಾತ್ಮರು ಸೇರಿದಂತೆ ಜನ್ಮದಿನಗಳನ್ನು ಆಚರಿಸಲು ಪ್ರತಿರೋಧವಿತ್ತು. ಚರ್ಚ್ ಫಾದರ್‌ಗಳು ಪೇಗನ್ ಹುಟ್ಟುಹಬ್ಬದ ಸಂಪ್ರದಾಯಗಳನ್ನು ಪ್ರಶ್ನಿಸಿದರು, ಹುತಾತ್ಮರ ವಾರ್ಷಿಕೋತ್ಸವಗಳನ್ನು ಅವರ ನಿಜವಾದ 'ಹುಟ್ಟುಹಬ್ಬ' ಎಂದು ಒತ್ತಿಹೇಳಿದರು.

ಯೇಸುವಿನ ಜನ್ಮ ದಿನಾಂಕವಾಗಿ ಡಿಸೆಂಬರ್ 25 ರ ಮೂಲವು ಅಸ್ಪಷ್ಟವಾಗಿದೆ, ಹೊಸ ಒಡಂಬಡಿಕೆಯ ಸುಳಿವುಗಳಿಲ್ಲ. ಸೆಕ್ಸ್ಟಸ್ ಜೂಲಿಯಸ್ ಆಫ್ರಿಕನಸ್ ಇದನ್ನು 221 ರಲ್ಲಿ ಪ್ರಸ್ತಾಪಿಸಿದರು, ಅಂತಿಮವಾಗಿ ಅಂಗೀಕಾರವನ್ನು ಪಡೆದರು. ಒಂದು ಸಿದ್ಧಾಂತವು ಇದನ್ನು ರೋಮನ್ ಚಳಿಗಾಲದ ಅಯನ ಸಂಕ್ರಾಂತಿಯ ಆಚರಣೆಯಾದ 'ಡೈಸ್ ಸೋಲಿಸ್ ಇನ್ವಿಕ್ಟಿ ನಾಟಿ'ಗೆ ಸಂಪರ್ಕಿಸುತ್ತದೆ. ಕ್ರಿಶ್ಚಿಯನ್ ಬರಹಗಾರರು ನಂತರ ಸೂರ್ಯನ ಪುನರ್ಜನ್ಮವನ್ನು ಮಗನ ಜನನದೊಂದಿಗೆ ಸಂಪರ್ಕಿಸಿದರು, ಪೇಗನ್ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು.

ಮತ್ತೊಂದು ಸಿದ್ಧಾಂತವು ಡಿಸೆಂಬರ್ 25 ರಿಂದ ಮಾರ್ಚ್ 25 ರವರೆಗೆ ಯೇಸುವಿನ ಪರಿಕಲ್ಪನೆಯ ದಿನವನ್ನು ಸಂಪರ್ಕಿಸುತ್ತದೆ, ವಸಂತ ವಿಷುವತ್ ಸಂಕ್ರಾಂತಿಯು ಸೃಷ್ಟಿಯೊಂದಿಗೆ ಸಂಬಂಧ ಹೊಂದಿದೆ. ಕ್ರಿಸ್ಮಸ್' ಔಪಚಾರಿಕ ಧಾರ್ಮಿಕ ಆಚರಣೆಯು 9 ನೇ ಶತಮಾನದಲ್ಲಿ ಪ್ರಾರಂಭವಾಯಿತು, ಗುಡ್ ಫ್ರೈಡೇ ಅಥವಾ ಈಸ್ಟರ್‌ಗೆ ಎಂದಿಗೂ ಪ್ರತಿಸ್ಪರ್ಧಿಯಾಗಲಿಲ್ಲ. ರೋಮನ್ ಕ್ಯಾಥೋಲಿಕರು ಮಧ್ಯರಾತ್ರಿ ಕ್ರಿಸ್ಮಸ್ ಈವ್ ಮಾಸ್ ಅನ್ನು ಹೊಂದಿದ್ದಾರೆ, ಆದರೆ ಪ್ರೊಟೆಸ್ಟೆಂಟ್‌ಗಳು ಡಿಸೆಂಬರ್ 24 ರ ಕೊನೆಯಲ್ಲಿ ಕ್ಯಾಂಡಲ್‌ಲೈಟ್ ಸೇವೆಗಳನ್ನು ಆಯೋಜಿಸುತ್ತಾರೆ. 'ಪಾಠಗಳು ಮತ್ತು ಕರೋಲ್‌ಗಳ ಸೇವೆ, ಕ್ಯಾರೋಲ್‌ಗಳನ್ನು ಮೋಕ್ಷ ಇತಿಹಾಸದ ವಾಚನಗೋಷ್ಠಿಗಳೊಂದಿಗೆ ಸಂಯೋಜಿಸಿ, ಜನಪ್ರಿಯತೆಯನ್ನು ಗಳಿಸಿತು.





ಕ್ರಿಶ್ಚಿಯನ್ನರು ಅಲ್ಪಸಂಖ್ಯಾತರಾಗಿರುವ ಪಾಶ್ಚಿಮಾತ್ಯೇತರ ದೇಶಗಳಲ್ಲಿ ಕ್ರಿಸ್‌ಮಸ್ ಜಾಗತಿಕವಾಗಿ ಹರಡಿತು. ದಕ್ಷಿಣ ಮತ್ತು ಮಧ್ಯ ಅಮೇರಿಕಾ ವಿಶಿಷ್ಟ ಧಾರ್ಮಿಕ ಮತ್ತು ಜಾತ್ಯತೀತ ಸಂಪ್ರದಾಯಗಳನ್ನು ಒಳಗೊಂಡಿದೆ. ಬ್ರೆಜಿಲ್ ಬೇಸಿಗೆಯ ಕ್ರಿಸ್ಮಸ್ ಅನ್ನು ಪಿಕ್ನಿಕ್ ಮತ್ತು ಪಟಾಕಿಗಳೊಂದಿಗೆ ಆಚರಿಸುತ್ತದೆ. ಭಾರತದಲ್ಲಿ, ಕೆಲವರು ನಿತ್ಯಹರಿದ್ವರ್ಣ ಮರಗಳನ್ನು ಮಾವು ಅಥವಾ ಬಿದಿರಿನ ಮರಗಳಿಂದ ಬದಲಾಯಿಸುತ್ತಾರೆ ಮತ್ತು ಮಾವಿನ ಎಲೆಗಳು ಮತ್ತು ಕಾಗದದ ನಕ್ಷತ್ರಗಳಿಂದ ಮನೆಗಳನ್ನು ಅಲಂಕರಿಸುತ್ತಾರೆ. ಜಪಾನ್ ಮರಗಳು ಮತ್ತು ಹಾಡುಗಳಂತಹ ಜಾತ್ಯತೀತ ಅಂಶಗಳನ್ನು ಸ್ವೀಕರಿಸುತ್ತದೆ, ಧಾರ್ಮಿಕ ಅಂಶಗಳ ಮೇಲೆ ಕಡಿಮೆ ಗಮನಹರಿಸುತ್ತದೆ.

### ಭಾರತದಲ್ಲಿ ಜನರು ಕ್ರಿಸ್ಮಸ್ ಅನ್ನು ಹೇಗೆ ಆಚರಿಸುತ್ತಾರೆ?

ಕ್ರಿಸ್ಮಸ್ ದಿನದಂದು, ಅನೇಕ ಕ್ರೈಸ್ತರು ವಿಶೇಷ ಚರ್ಚ್ ಸೇವೆಗಳಿಗೆ ಹಾಜರಾಗುತ್ತಾರೆ, ಕುಟುಂಬದೊಂದಿಗೆ ಸಮಯ ಕಳೆಯುತ್ತಾರೆ, ಹೊಸ ಬಟ್ಟೆಗಳನ್ನು ಧರಿಸುತ್ತಾರೆ ಮತ್ತು ಹಬ್ಬದ ಶುಲ್ಕದಲ್ಲಿ ಪಾಲ್ಗೊಳ್ಳುತ್ತಾರೆ. ಕೆಲವು ಕುಟುಂಬಗಳು ಮಕ್ಕಳಿಗೆ ಸಣ್ಣ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ. ಅವರ ವಾಸಸ್ಥಾನಗಳನ್ನು ಬಾಳೆ ಅಥವಾ ಮಾವಿನ ಎಲೆಗಳು, ಸ್ವಲ್ಪ ವಿದ್ಯುತ್ ಲ್ಯಾಂಟರ್ನ್‌ಗಳು ಅಥವಾ ಚಿಕಣಿ ಮಣ್ಣಿನ ಎಣ್ಣೆ ಸುಡುವ ದೀಪಗಳಿಂದ ಅಲಂಕರಿಸಬಹುದು. ಕೆಲವು ಜನರು ಮಣ್ಣಿನ-ಆಕೃತಿಯ ನೇಟಿವಿಟಿ ದೃಶ್ಯ ಅಥವಾ ಕ್ರಿಸ್ಮಸ್ ವೃಕ್ಷವನ್ನು ಸಹ ಪ್ರದರ್ಶಿಸುತ್ತಾರೆ. ಭಾರತದಲ್ಲಿ, ಕೃತಕ ಪೈನ್ ಮರಗಳು ಅಥವಾ ಸ್ಥಳೀಯ ಪೊದೆಗಳು ಅಥವಾ ಮರಗಳಿಂದ ಕೊಂಬೆಗಳನ್ನು ಸಾಮಾನ್ಯವಾಗಿ ಕ್ರಿಸ್ಮಸ್ ಮರಗಳಾಗಿ ಬಳಸಲಾಗುತ್ತದೆ.

ಈಶಾನ್ಯ ಭಾರತದ ಶಿಲ್ಲಾಂಗ್, ಕ್ರಿಸ್ಮಸ್ ಅನ್ನು ವೈಭವದಿಂದ ಆಚರಿಸುವ ಗಣನೀಯ ಪ್ರಮಾಣದ ಕ್ರಿಶ್ಚಿಯನ್ ಜನಸಂಖ್ಯೆಯನ್ನು ಹೊಂದಿದೆ. ಬೀದಿಗಳು, ಚರ್ಚ್‌ಗಳು ಮತ್ತು ಮನೆಗಳನ್ನು ದೀಪಗಳಿಂದ ಸುಂದರವಾಗಿ ಅಲಂಕರಿಸಲಾಗಿದೆ ಮತ್ತು ಹಬ್ಬದ ಉತ್ಸಾಹವು ಗಾಳಿಯನ್ನು ತುಂಬುತ್ತದೆ. ಭಾವಪೂರ್ಣವಾದ ಸುವಾರ್ತೆ ಸಂಗೀತದೊಂದಿಗೆ ಮಿಡ್ನೈಟ್ ಮಾಸ್ ಒಂದು ಪ್ರಮುಖ ಅಂಶವಾಗಿದೆ. ಪ್ರದೇಶದ ನೈಸರ್ಗಿಕ ಸೌಂದರ್ಯ ಮತ್ತು ರುಚಿಕರವಾದ ಪಾಕಪದ್ಧತಿಯು ಸ್ಮರಣೀಯ ಅನುಭವವನ್ನು ನೀಡುತ್ತದೆ.

### ಭಾರತದಲ್ಲಿ ಕ್ರಿಸ್ಮಸ್ ಕೊಟ್ಟಿಗೆ ಅಥವಾ ನೇಟಿವಿಟಿ ದೃಶ್ಯದ ಮಹತ್ವವೇನು?

ಭಾರತದಲ್ಲಿ ಕ್ರಿಸ್ಮಸ್ ಕೊಟ್ಟಿಗೆ ಅಥವಾ ನೇಟಿವಿಟಿ ದೃಶ್ಯವು ಸಾಮಾನ್ಯವಾಗಿ ಮರಳು, ಕಲ್ಲುಗಳು, ಇಟ್ಟಿಗೆಗಳು ಮತ್ತು ಸ್ಥಳೀಯ ಸಸ್ಯಗಳನ್ನು ಒಳಗೊಂಡಿರುವ ಕಲಾತ್ಮಕ ಕೋಷ್ಟಕವಾಗಿದೆ. ಯೇಸುವಿನ ಜನನದ ಕಥೆಯನ್ನು ದೃಷ್ಟಿಗೋಚರವಾಗಿ ಹೇಳುವಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸುತ್ತದೆ.

ಭಾರತದಲ್ಲಿ, ಫಾದರ್ ಕ್ರಿಸ್‌ಮಸ್ ಅನ್ನು ಉತ್ಸಾಹದಿಂದ ನಿರೀಕ್ಷಿಸಲಾಗುತ್ತದೆ ಮತ್ತು ಅವರು ಕುದುರೆ-ಎಳೆಯುವ ಕಾರ್ಟ್‌ನಲ್ಲಿ ಶೈಲಿಯಲ್ಲಿ ಆಗಮಿಸುತ್ತಾರೆ, ಇದು ಸದ್ಭಾವನೆ ಮತ್ತು ಉಡುಗೊರೆ-ನೀಡುವಿಕೆಯನ್ನು ಸಂಕೇತಿಸುವ ಪಾಲಿಸಬೇಕಾದ ಭಾರತೀಯ ಸಂಪ್ರದಾಯವಾಗಿದೆ. ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ - ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ - 562 120

ದೂರವಾಣಿ : 8971608213. ಇ-ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/- (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/- (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/- (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

# ನಿಷ್ಕಾಮ ಕರ್ಮಗಳಿಂದ ಅಮೃತತ್ತ್ವ



ಈಶ ಪ್ರಸಾದ

ನಾವು ಜೀವನದುದ್ದಕ್ಕೂ ಪೂಜಾದಿ ಕರ್ಮಗಳನ್ನು ಮಾಡುತ್ತೇವೆ. ಗುಡಿ–ಗುಂಡಾರಗಳಿಗೆ ಹೋಗಿ ಭಜನೆ, ಆರತಿ, ಜಪ–ತಪ ಎಲ್ಲವನ್ನೂ ಮಾಡುತ್ತೇವೆ. ಕೊನೆಯಲ್ಲಿ ನಮಗೆ ಮಕ್ಕಳು–ಮರಿ, ಹೊಲ–ಮನೆ, ಬೆಳ್ಳಿ–ಬಂಗಾರ ಕೊಡು ಎಂದು ದೇವರಲ್ಲಿ ಬೇಡಿಕೊಳ್ಳುತ್ತೇವೆ. ದೇವರನ್ನು ಗುಡಿಯಲ್ಲೇ ಬಿಟ್ಟು ಭದ್ರವಾಗಿ ಕೀಲಿ ಹಾಕಿ ಮನೆಗೆ ಬರುತ್ತೇವೆ. "ದೇವನೇ ನನಗೆ ಏನೂ ಬೇಡ, ನಿನ್ನ ದಿವ್ಯ ದರ್ಶನ ಕೊಡು ಸಾಕು," ಎಂದು ಯಾರಾದರೂ ಕೇಳಿದ್ದುಂಟೇ? ಇಲ್ಲ! ಅದಕ್ಕೆಂದೇ ಬಸವಣ್ಣನವರು ಹೇಳಿದರು.

**ಆಡಿದಡೇನು, ಹಾಡಿದಡೇನು, ಓದಿದಡೇನು/ತ್ರಿವಿಧದಾಸೋಹವಿಲ್ಲದನ್ನಕ್ಕ? ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? / ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.**

ನವಿಲು ಕುಣಿಯುತ್ತದೆ, ತಂತಿ ಹಾಡುತ್ತದೆ, ಗಿಳಿಯು ಓದುತ್ತದೆ. ಹಾಗೆಂದ ಮಾತ್ರಕ್ಕೆ ಅವುಗಳೆಂದಾದರೂ ಶಿವಭಕ್ತರಾಗಲು ಸಾಧ್ಯವೇ? ಇಲ್ಲ! ಹಾಗೆಯೇ ತನು, ಮನ, ಧನವನ್ನು ಗುರುದೇವರಿಗೆ ಅರ್ಪಿಸಲಾರದೆ ಕೇವಲ ಭಕ್ತಿಗೇತೆ ಹಾಡುವುದು, ಗ್ರಂಥ ಓದುವುದು, ಭಾವನ ಪರವಶರಾಗಿ ಕುಣಿಯುವುದು ಎಲ್ಲವೂ ಆ ನವಿಲು, ತಂತಿ, ಗಿಳಿಯು ಮಾಡಿದ ಯಾಂತ್ರಿಕ ಕ್ರಿಯೆಗಳಂತೆ ಆಗುತ್ತದಷ್ಟೆ!

ಓರ್ವ ಮಹಾರಾಜನು ಒಂದು ಹದ್ದನ್ನು ಮುತ್ತು–ರತ್ನಗಳಿಂದ ಅಲಂಕರಿಸಿ, ರೇಷ್ಮೆ ವಸ್ತ್ರ ತೊಡಿಸಿ, ಗಗನದೆತ್ತರ ಹಾರಲೆಂದು ಬಿಟ್ಟುಬಿಟ್ಟ. ಅದು ಸ್ವಲ್ಪ ಸಮಯ ಗಗನ ಭೇದಿಸುವಂತೆ ಮೇಲೆ ಹಾರಿತು. ಮರು ಕ್ಷಣವೇ ಭೂಮಿಯ ಮೇಲೆ ಬಿದ್ದಿದ್ದ ಹೆಣದ ಮೇಲೆ ಬಂದು ಕುಳಿತು ಮಾಂಸ ಸೇವಿಸತೊಡಗಿತು! ರಾಜನು ತಾನು ಆ ಹದ್ದಿಗೆ ಮಾಡಿದ್ದ ಅಲಂಕಾರವೆಲ್ಲ ವ್ಯರ್ಥವಾಯಿತೆಂದು ನಿರಾಶೆಯಿಂದ ಅರಮನೆಯತ್ತ ನಡೆದ. ಅನೇಕರು ಎಷ್ಟೋ ಸಲ ತಮ್ಮ ಆಧ್ಯಾತ್ಮಿಕ ಸಾಧನೆ ಮಾಡುತ್ತ ಬಹು ದೂರ ಸಾಗಿರುತ್ತಾರೆ. ಇನ್ನೇನು ದೇವರದರ್ಶನ ಪಡೆದು ಧನ್ಯರಾಗುತ್ತಾರೆ ಎನ್ನುವುದರಲ್ಲಿ ವಿಷಯ–ವ್ಯಾಮೋಹಕ್ಕೆ ಒಳಗಾಗುತ್ತಾರೆ. ಹೀಗಿದ್ದರೆ ಆ ಹದ್ದಿಗೂ ಏನು ವ್ಯತ್ಯಾಸ?

ಒಬ್ಬ ಬಡ ಭಕ್ತ, ದಿನನಿತ್ಯ ತನ್ನ ತೋಟದಲ್ಲಿ ಮೈ ಮುರಿದು ದುಡಿದು ಸಂಜೆ ಮನೆಗೆ ಬಂದು ಕಟ್ಟೆಯ ಮೇಲೆ ಕುಳಿತು ಭಕ್ತಿಗೀತೆಗಳನ್ನು, ದೇವರ ನಾಮಗಳನ್ನು ಮೈಮರೆತು ಹಾಡುತ್ತಿದ್ದ. ಅನೇಕ ಜನರು ಬಂದು ಅವನ ಭಕ್ತಿಗೀತಾಮೃತವನ್ನು ಸವಿದು ಧನ್ಯರಾಗುತ್ತಿದ್ದರು. ಕಾಯ್ದ ಭೂಮಿಯ ಮೇಲೆ ಮಳೆ ಸುರಿದಂತಾಗಿ ಅವರ ಪ್ರಪಂಚದ ತಾಪವೆಲ್ಲ ಕರಗಿ ಸಂತಸದಿಂದ ಶಿವನ ನೆನೆಯುತ್ತ ಮನೆಗೆ ಮರಳುತ್ತಿದ್ದರು. ಈ ಭಕ್ತನ ಭಕ್ತಿಗೆ ಮೆಚ್ಚಿದ ಭಗವಂತನು ಅವನ ಕನಸಿನಲ್ಲಿ ಬಂದು "ಏನು ವರ ಬೇಕು ಬೇಡು ಕೊಡುತ್ತೇನೆ," ಎಂದ. ಆಗ ಆ ಶ್ರೇಷ್ಠ ಭಕ್ತ ಹೇಳಿದ "ವರವನ್ನು ಕೊಡುವ ಆಶೆ–ಆಮಿಷ ತೋರಿಸುವುದಾದರೆ ನೀನೆಂದಿಗೂ ಭಕ್ತರ ಹತ್ತಿರ ಸುಳಿಯಬೇಡ" ಇಂತ ನಿಷ್ಕಾಮ ಭಕ್ತರೂ ಜಗತ್ತಿನಲ್ಲಿರುವರೆಂದು ತಿಳಿದು ಆ ಭಗವಂತನಿಗೂ ಆಶ್ಚರ್ಯವೇ ಆಶ್ಚರ್ಯ! ಈ ನಿಜಭಕ್ತನ ನಿಷ್ಠುರ ನುಡಿಯನ್ನು ಕೇಳಿಹೋದ ಭಗವಂತನು ಇದುವರೆಗೆ ಭೂಲೋಕದತ್ತ ತಿರುಗಿ ನೋಡಿಲ್ಲವೆಂದೇ ಹೇಳಬಹುದು. ನಿಷ್ಕಾಮ ಭಕ್ತನಿಗೆ ದೇವರಿಂದ ಏನೂ ಬೇಡಿ ಪಡೆಯಬೇಕಾಗಿಲ್ಲ. ಇನ್ನು ಸಕಾಮ ಭಕ್ತನಿಗೆ ಏನು ಕೊಟ್ಟರೂ ಸಮಾಧಾನವಿಲ್ಲ. ಹಾಗಾದರೆ ಭಗವಂತನು ಇಬ್ಬರ ಹತ್ತಿರವೂ ಬರುವ ಅವಶ್ಯಕತೆಯಾದರೂ ಏನಿದೆ?

ನಿಷ್ಕಾಮದಿಂದ ಮಾಡಿದ ಕರ್ಮಗಳು ಪರಮಸತ್ಯ ಪರಮಾತ್ಮನ ಜ್ಞಾನವನ್ನು, ಪರಮಾನಂದವನ್ನೂ ನೀಡುತ್ತವೆ. ಇದುವೇ ಅಮೃತತ್ತ್ವ. ॐ



# ವಿಶ್ವ ಅಂಗವಿಕಲರ ದಿನ

ಜೂನ್ 2019 ರಲ್ಲಿ ಯುನೈಟೆಡ್ ನೇಷನ್ಸ್ ಡಿಸಾಬಿಲಿಟಿ ಇನ್ಸ್ಟಿಟ್ಯೂಷನ್ ಸ್ಟ್ರಾಟಜಿಯನ್ನು ಪ್ರಾರಂಭಿಸುವಾಗ, ಸೆಕ್ರೆಟರಿ–ಜನರಲ್ ಅವರು ವಿಶ್ವಸಂಸ್ಥೆಯು ಉದಾಹರಣೆಯ ಮೂಲಕ ಮುನ್ನಡೆಸಬೇಕು ಮತ್ತು ಅಂಗವೈಕಲ್ಯ ಸೇರ್ಪಡೆಯಲ್ಲಿ ಸಂಸ್ಥೆಯ ಮಾನದಂಡಗಳು ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು ಎಂದು ಹೇಳಿದರು – ಎಲ್ಲಾ ಕೆಲಸದ ಆಧಾರಸ್ತಂಭಗಳಲ್ಲಿ, ಪ್ರಧಾನ ಕಛೇರಿಯಿಂದ ಕ್ಷೇತ್ರದವರೆಗೆ ವಿಶ್ವಸಂಸ್ಥೆಯ ಅಂಗವೈಕಲ್ಯ ಸೇರ್ಪಡೆ ಕಾರ್ಯತಂತ್ರವು ವಿಶ್ವಸಂಸ್ಥೆಯ ಕೆಲಸದ ಎಲ್ಲಾ ಸ್ತಂಭಗಳ ಮೂಲಕ ಅಂಗವೈಕಲ್ಯ ಸೇರ್ಪಡೆಯ ಮೇಲೆ ಸಮರ್ಥನೀಯ ಮತ್ತು ಪರಿವರ್ತಕ ಪ್ರಗತಿಗೆ ಅಡಿಪಾಯವನ್ನು ಒದಗಿಸುತ್ತದೆ. ಕಾರ್ಯತಂತ್ರದ ಮೂಲಕ, ವಿಶ್ವಸಂಸ್ಥೆಯ ವ್ಯವಸ್ಥೆಯು ಎಲ್ಲಾ ವಿಕಲಾಂಗ ವ್ಯಕ್ತಿಗಳ ಮಾನವ ಹಕ್ಕುಗಳ ಸಂಪೂರ್ಣ ಸಾಕ್ಷಾತ್ಕಾರವು ಎಲ್ಲಾ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಅವಿಭಾಜ್ಯಅ ವಿಭಾಜ್ಯ ಭಾಗವಾಗಿದೆ ಎಂದು ಪುನರುಚ್ಚರಿಸುತ್ತದೆ.

ಅಕ್ಟೋಬರ್ 2021 ರಲ್ಲಿ, ಸೆಕ್ರೆಟರಿ–ಜನರಲ್ ಅವರು UN ವ್ಯವಸ್ಥೆಯು 2020 ರಲ್ಲಿ UN ಅಂಗವೈಕಲ್ಯ ಸೇರ್ಪಡೆ ಕಾರ್ಯತಂತ್ರವನ್ನು ಜಾರಿಗೆ ತರಲು ತೆಗೆದುಕೊಂಡ ಕ್ರಮಗಳ ಕುರಿತು ತಮ್ಮ ಎರಡನೇ ವರದಿಯನ್ನು ಸಲ್ಲಿಸಿದರು. ವಿಕಲಾಂಗ ವ್ಯಕ್ತಿಗಳ ಮೇಲೆ COVID–19 ನ ಪ್ರಭಾವವನ್ನು ಗಮನಿಸಿದರೆ, ವರದಿಯು ಸಂಕ್ಷಿಪ್ತ ಪ್ರತಿಬಿಂಬವನ್ನು ಸಹ ಒಳಗೊಂಡಿದೆ ಅಂಗವೈಕಲ್ಯ–ಒಳಗೊಂಡಿರುವ COVID–19 ಪ್ರತಿಕ್ರಿಯೆಯನ್ನು ಗಮನಿಸಬಹುದು.

ವಿಕಲಾಂಗ ವ್ಯಕ್ತಿಗಳ ಅಂತರಾಷ್ಟ್ರೀಯ ದಿನದ ಸ್ಮರಣಾರ್ಥವಾಗಿ 2023 ರ ಜಾಗತಿಕ ಆಚರಣೆಯು ನಾವೀನ್ಯತೆ ಮತ್ತು ಅಂತರ್ಗತ ಅಭಿವೃದ್ಧಿಗಾಗಿ ಪರಿವರ್ತಕ ಪರಿಹಾರಗಳ ವ್ಯಾಪಕ ವಿಷಯವಾಗಿದೆ, ಮೂರು ವಿಭಿನ್ನ ಸಂವಾದಾತ್ಮಕ ಸಂವಾದಗಳಲ್ಲಿ ಈ ಕೆಳಗಿನ ವಿಷಯಾಧಾರಿತ ವಿಷಯಗಳನ್ನು ಒಳಗೊಂಡಿದೆ:

ಉದ್ಯೋಗದಲ್ಲಿ ಅಂಗವೈಕಲ್ಯವನ್ನು ಒಳಗೊಳ್ಳುವ ಅಭಿವೃದ್ಧಿಗಾಗಿ ನಾವೀನ್ಯತೆ ಎಲ್ಲರಿಗೂ ನವೀನ, ವೇಗವಾಗಿ ಬದಲಾಗುತ್ತಿರುವ ತಾಂತ್ರಿಕ ಭೂದೃಶ್ಯದಲ್ಲಿ ಉದ್ಯೋಗವನ್ನು ಪ್ರವೇಶಿಸಲು ಅಗತ್ಯವಿರುವ ಉದ್ಯೋಗ, ಜ್ಞಾನ ಮತ್ತು ಕೌಶಲ್ಯಗಳ ನಡುವಿನ ಸಂಪರ್ಕಗಳು, ಅಸಮಾನತೆಯನ್ನು ಕಡಿಮೆ ಮಾಡುವಲ್ಲಿ ಅಂಗವೈಕಲ್ಯವನ್ನು ಒಳಗೊಂಡ ಅಭಿವೃದ್ಧಿಗಾಗಿ ನಾವೀನ್ಯತೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಅಸಮಾನತೆಗಳನ್ನು ಕಡಿಮೆ ಮಾಡಲು ನಾವೀನ್ಯತೆಗಳು, ಪ್ರಾಯೋಗಿಕ ಪರಿಕರಗಳು ಮತ್ತು ಉತ್ತಮ ಅಭ್ಯಾಸಗಳು, ಇದು ಅಂಗವೈಕಲ್ಯವನ್ನು ಒಳಗೊಂಡಿರುವ ಮತ್ತು ಕೆಲಸದ ಸ್ಥಳದಲ್ಲಿ ವೈವಿಧ್ಯತೆಯನ್ನು ಉತ್ತೇಜಿಸಲು ಆಸಕ್ತಿ ಹೊಂದಿದೆ.

ವಿಕಲಾಂಗ ವ್ಯಕ್ತಿಗಳ ಒಂದು ಶತಕೋಟಿ ಜನಸಂಖ್ಯೆಯಲ್ಲಿ, 80% ಅಭಿವೃದ್ಧಿಶೀಲ ರಾಷ್ಟಗಳಲ್ಲಿ ವಾಸಿಸುತ್ತಿದ್ದಾರೆ. 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವೃದ್ಧರಲ್ಲಿ ಅಂದಾಜು 46% ವಿಕಲಚೇತನರು ಇದ್ದಾರೆ. ಪ್ರತಿ ಐದು ಮಹಿಳೆಯರಲ್ಲಿ ಒಬ್ಬರು ತಮ್ಮ ಜೀವನದಲ್ಲಿ ಅಂಗವೈಕಲ್ಯವನ್ನು ಅನುಭವಿಸುವ ಸಾಧ್ಯತೆಯಿದೆ, ಆದರೆ ಪ್ರತಿ ಹತ್ತು ಮಕ್ಕಳಲ್ಲಿ ಒಬ್ಬರು ಅಂಗವೈಕಲ್ಯ ಹೊಂದಿರುತ್ತಾರೆ.

### ವಿಶ್ವಸಂಸ್ಥೆಯ ಅಂಗವೈಕಲ್ಯ ಸೇರ್ಪಡೆ ತಂತ್ರ

ವಿಕಲಾಂಗ ವ್ಯಕ್ತಿಗಳ ಹಕ್ಕುಗಳನ್ನು ನಾವು ಸುರಕ್ಷಿತಗೊಳಿಸಿದಾಗ, ವಿಶ್ವಸಂಸ್ಥೆಯ ಚಾರ್ಟರ್‌ನ ಮೂಲ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿಹಿಡಿಯಲು ನಾವುಗಳು ಒಂದಾಗುತ್ತಿದ್ದೇವೆ. ವಿಶ್ವಸಂಸ್ಥೆಯ ಅಂಗವೈಕಲ್ಯ ಸೇರ್ಪಡೆ ಕಾರ್ಯತಂತ್ರವು ವಿಶ್ವಸಂಸ್ಥೆಯ ಕೆಲಸದ ಎಲ್ಲಾ ಸ್ತಂಭಗಳ ಮೂಲಕ ಅಂಗವೈಕಲ್ಯ ಸೇರ್ಪಡೆಯ ಮೇಲೆ ಸಮರ್ಥನೀಯ ಮತ್ತು ಪರಿವರ್ತಕ ಪ್ರಗತಿಗೆ ಅಡಿಪಾಯವನ್ನು ಒದಗಿಸುತ್ತದೆ: ಶಾಂತಿ ಮತ್ತು ಭದ್ರತೆ, ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ. ಕಾರ್ಯತಂತ್ರದ ಅನುಷ್ಠಾನದ ಕುರಿತು ಯುಎನ್ ಸೆಕ್ರೆಟರಿ ಜನರಲ್ ಅವರ ಇತ್ತೀಚಿನ ವರದಿಯನ್ನು ಅನುಸರಿಸುತ್ತಾರೆ. ॐ

# ಸಾಕು ಎಂದವ ಸಂನ್ಯಾಸಿ, ಬೇಕು ಎಂದವ ಸಂಸಾರಿ!

ಒಂದು ದಿನ ಒಬ್ಬ ವ್ಯಕ್ತಿ ಒಂದು ಬಟ್ಟೆ ಅಂಗಡಿಗೆ ಬರುತ್ತಾನೆ. ಅದು ದೀಪಾವಳಿಯ ಸಮಯ. ಅವನಿಗೆ ಒಂದು ಸೀರೆ ತೆಗೆದುಕೊಳ್ಳಬೇಕಿತ್ತು. ಅಂಗಡಿಯಲ್ಲಿರುವ ಎಲ್ಲ ಸೀರೆಗಳನ್ನು ನೋಡಿ ಕೊನೆಗೆ ಒಂದು ಸೀರೆ ಆಯ್ಕೆ ಮಾಡಿಕೊಳ್ಳುತ್ತಾನೆ. ಅದಕ್ಕೆ ಬೆಲೆ ಎಷ್ಟು ಎಂದು ಕೇಳಿದಾಗ, ಅಂಗಡಿಯವನು

"ಎರಡು ಸಾವಿರ ರೂಪಾಯಿ" ಎಂದು ಹೇಳುತ್ತಾನೆ.

ಆಗ ಇವನು–"ಒಂದು ಸಾವಿರಕ್ಕೆ ಕೊಡುತ್ತೀರಾ?" ಎಂದು ಕೇಳುತ್ತಾನೆ.

ಅಂಗಡಿಯವನು ಇವನು ಈ ದಿನದ ಮೊದಲ ಗಿರಾಕಿ ಎಂದು ಆಲೋಚಿಸಿ ಆಯ್ತು ಎನ್ನುತ್ತಾನೆ. ಆಗ ಅವನು– "500ಕ್ಕೆ ಕೊಡುತ್ತೀರಾ?" ಎನ್ನುತ್ತಾನೆ. ಅಂಗಡಿಯವನು ಸಮಾಧಾನದಿಂದಲೇ ಆಯ್ತು ಎನ್ನುತ್ತಾನೆ.

ಆಗ ಇವನು–"250 ಕ್ಕೆ ಕೊಡುತ್ತೀರಾ?"ಎನ್ನುತ್ತಾನೆ. ಅಂಗಡಿಯವನು ತಲೆ ಚಿಟ್ಟು ಹಿಡಿದು ಇವನು ಒಮ್ಮೆ ಇಲ್ಲಿಂದ ಹೋದರೆ ಸಾಕು ಎಂದು ಏನೂ ಕೊಡುವುದು ಬೇಡ; ಹಾಗೇ ಅದನ್ನು ಕೊಂಡು ಹೋಗು ಎಂದು ಹೇಳಿ, ಕೊಟ್ಟು, ಅವನನ್ನು ಕಳಿಸುತ್ತಾನೆ.


ಹೌದು, ಜೀವನದಲ್ಲಿ ನಮಗೆ ಎಷ್ಟು ಇದ್ದರೂ ಸಾಕು ಎನಿಸುವುದಿಲ್ಲ. ಇನ್ನಷ್ಟು ಮತ್ತಷ್ಟು ಬೇಕು ಅನಿಸುತ್ತದೆ.

ಒಮ್ಮೆ ಭರ್ತೃಹರಿಯ ಹತ್ತಿರ ಒಬ್ಬ ರಾಜ– "ನಿನ್ನ ಹತ್ತಿರ ಏನುಂಟು! ನೀನೊಬ್ಬ ಬಿಕಾರಿ!" ಎನ್ನುತ್ತಾನೆ.

ಆಗ ಭರ್ತೃಹರಿ– "ನಾನು ಕಾವಿ ಬಟ್ಟೆ ಧರಿಸಿದ್ದರೆ ನೀನು ಪೀತಾಂಬರ ಧರಿಸಿದ್ದೀಯ; ನಿನ್ನ ಹತ್ತಿರ ಅಪಾರ ಸಂಪತ್ತಿರಬಹುದು; ಆದರೆ ನನ್ನ ಹತ್ತಿರ ನೆಮ್ಮದಿ ಇದೆ; ನಿನಗೆ ಇನ್ನಷ್ಟು ಬೇಕು ಎನಿಸಿದೆ; ನನಗೆ ಇನ್ನು ಬೇಡ ಎನಿಸಿದೆ; ಹಾಗಾಗಿ ನಾನು ಶ್ರೀಮಂತ ನೀನೇ ಬಿಕಾರಿ" ಎನ್ನುತ್ತಾನೆ. ॐ

**ಸಾಕು ಎಂದವ ಸಂನ್ಯಾಸಿ, ಬೇಕು ಎಂದವ ಸಂಸಾರಿ ಎನ್ನುತ್ತಾನೆ.**
**ಈ ಬೇಕು ಸಾಕಾದಾಗ ನೆಮ್ಮದಿಯ ಜೀವನ ನಮ್ಮದಾಗುತ್ತದೆ.**

# ಗಣಿತ ದಿನ



ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನವನ್ನು ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಗುತ್ತದೆ. ತಮಿಳುನಾಡಿನ ಈರೋಡ್‌ನಲ್ಲಿ ಡಿಸೆಂಬರ್ 22, 1887 ರಲ್ಲಿ ಜನಿಸಿರುವ ರಾಮಾನುಜನ್‌ಗೆ ಗಣಿತ ವಿಷಯದೊಂದಿಗೆ ಇದ್ದ ಒಲವು, ಅಪಾರ ಜ್ಞಾನದಿಂದಾಗಿ ಪ್ರತಿ ವರ್ಷ ಡಿ. 22ರಂದು ಭಾರತದಲ್ಲಿ ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಗುತ್ತದೆ.

ಬಾಲ್ಯದಿಂದಲೂ ರಾಮಾನುಜನ್‌ಗೆ ಗಣಿತ ವಿಷಯದ ಬಗ್ಗೆ ಅಪಾರ ಉತ್ಸಾಹ ಇತ್ತು. ಅದು ಎಷ್ಟರಮಟ್ಟಿಗೆ ಎಂದರೆ, 12 ನೇ ವಯಸ್ಸಿನಲ್ಲೇ ಟ್ರಿಗನಾಮೆಟ್ರಿ (ತ್ರಿಕೋನಮಿತಿ)ಯಲ್ಲಿ ಅವರು ನಿಪುಣನಾಗಿದ್ದು, ಯಾರ ಸಹಾಯವೂ ಇಲ್ಲದೆ ಅನೇಕ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದ್ದರು. ನಂತರ, ಅವರಿಗೆ ಕುಂಬಕೋಣಮ್‌ನ ಸರಕಾರಿ ಕಲಾ ಕಾಲೇಜಿನಲ್ಲಿ ಓದಲು ಸ್ಕಾಲರ್‌ಶಿಪ್ ಪಡೆದುಕೊಳ್ಳಲು ಯಶಸ್ವಿಯಾದರೂ ಸಹ, ಇತರೆ ವಿಷಯಗಳಲ್ಲಿ ಕಳಪೆ ಪ್ರದರ್ಶನದಿಂದಾಗಿ ಅದನ್ನೂ ಕಳೆದುಕೊಳ್ಳುತ್ತಾರೆ. ಹೀಗಾಗಿ, ಮನೆ ತೊರೆದ ರಾಮಾನುಜನ್, ಮದ್ರಾಸ್‌ನ ಪಚಯಪ್ಪ ಕಾಲೇಜಿಗೆ ಸೇರಿಕೊಳ್ಳುತ್ತಾರೆ.

ಬಳಿಕ, ಗಣಿತಶಾಸ್ತ್ರಜ್ಞ ರಾಮಸ್ವಾಮಿ ಅಯ್ಯರ್ ಬೆಂಬಲದೊಂದಿಗೆ ಅವರು ಮದ್ರಾಸ್ ಬಂದರು ಟ್ರಸ್ಟ್‌ನಲ್ಲಿ ಕ್ಲರ್ಕ್ ಆಗಿ ಕೆಲಸ ಗಿಟ್ಟಿಸಿಕೊಳ್ಳುತ್ತಾರೆ. ಆದರೆ, 1913ರಲ್ಲಿ ಬ್ರಿಟೀಷ್ ಗಣಿತಶಾಸ್ತ್ರಜ್ಞ ಜಿ.ಎಚ್. ಹಾರ್ಡಿಗೆ ಶ್ರೀನಿವಾಸ ರಾಮಾನುಜನ್ ಪತ್ರ ಬರೆಯುತ್ತಾರೆ. ಇದಾದ ಬಳಿಕ ಅವರ ಜೀವನದಲ್ಲಿ ಮಹತ್ವದ ತಿರುವು ದೊರೆಯುತ್ತದೆ. ಗಣಿತ ವಿಷಯದಲ್ಲಿ ರಾಮಾನುಜನ್‌ಗೆ ಇರುವ ಪ್ರತಿಭೆಯನ್ನು ಅರಿತ ಹಾರ್ಡಿ, ಅವರನ್ನು ಲಂಡನ್‌ಗೆ ಆಹ್ವಾನ ನೀಡುತ್ತಾರೆ. ನಂತರ, ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿಗೆ ಸೇರಿಕೊಂಡ ರಾಮಾನುಜನ್‌ರ ಯಶಸ್ಸಿನ ದಿನಗಳು ಅಲ್ಲಿಂದಲೇ ಆರಂಭವಾಗುತ್ತದೆ.

ಗಣಿತಜ್ಞ ಶ್ರೀನಿವಾಸ ರಾಮಾನುಜನ್ ಅವರ ಸಾಧನೆಗಳನ್ನು ಗುರುತಿಸಲು ಪ್ರತಿ ವರ್ಷ ಡಿಸೆಂಬರ್ 22ರಂದು ರಾಷ್ಟ್ರೀಯ ಗಣಿತ ದಿನವನ್ನು ಆಚರಿಸಲಾಗುತ್ತದೆ. 2012ರಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಡಿಸೆಂಬರ್ 22ನ್ನು ರಾಷ್ಟ್ರೀಯ ಗಣಿತ ದಿನವೆಂದು ಘೋಷಿಸಿದ್ದರು.

ಗಣಿತ ದಿನದ ಆಚರಣೆಯ ಹಿಂದಿನ ಮುಖ್ಯ ಉದ್ದೇಶವೆಂದರೆ ಮಾನವೀಯತೆಯ ಬೆಳವಣಿಗೆಗೆ ಗಣಿತದ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು. ದೇಶದ ಯುವ ಪೀಳಿಗೆಯಲ್ಲಿ ಗಣಿತ ಕಲಿಯುವ ಕುರಿತು ಸಕಾರಾತ್ಮಕ ಮನೋಭಾವವನ್ನು ಪ್ರೇರೇಪಿಸುವುದು. ಇದಕ್ಕಾಗಿ ಹಲವಾರು ಕ್ರಮಗಳನ್ನು ಕೂಡಾ ತೆಗೆದುಕೊಳ್ಳಲಾಗಿದೆ.

ಈ ದಿನದಂದು ಗಣಿತ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಶಿಬಿರಗಳ ಮೂಲಕ ತರಬೇತಿಯನ್ನು ನೀಡಲಾಗುತ್ತದೆ ಮತ್ತು ಗಣಿತ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಸಂಶೋಧನೆಗಾಗಿ ಬೋಧನೆ – ಕಲಿಕಾ ಸಾಮಗ್ರಿಗಳ (ಟಿಎಲ್ಎಂ) ಅಭಿವೃದ್ಧಿ, ಉತ್ಪಾದನೆ ಮತ್ತು ಪ್ರಸಾರಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ.

ಭಾರತದ ವಿವಿಧ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರೀಯ ಗಣಿತ ದಿನವನ್ನು ಆಚರಿಸಲಾಗುತ್ತದೆ. ಇಂಟರ್‌ನ್ಯಾಷನಲ್ ಸೊಸೈಟಿ ಯುನೆಸ್ಕೋ (ಯುನೈಟೆಡ್ ನೇಷನ್ಸ್ ಎಜುಕೇಷನಲ್, ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಸೇಶನ್) ಮತ್ತು ಭಾರತ ಕೂಡ ಗಣಿತ ಕಲಿಕೆ ಮತ್ತು ತಿಳಿವಳಿಕೆಯನ್ನು ಹರಡಲು ಒಟ್ಟಾಗಿ ಕೆಲಸ ಮಾಡಲು ಒಪ್ಪಿಕೊಂಡಿವೆ. ಇದರೊಂದಿಗೆ ವಿದ್ಯಾರ್ಥಿಗಳಿಗೆ ಗಣಿತಶಾಸ್ತ್ರದಲ್ಲಿ ಶಿಕ್ಷಣ ನೀಡಲು ಮತ್ತು ಪ್ರಪಂಚದಾದ್ಯಂತದ ವಿದ್ಯಾರ್ಥಿಗಳಿಗೆ ಮತ್ತು ಕಲಿಯುವವರಿಗೆ ಜ್ಞಾನವನ್ನು ಹರಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀನಿವಾಸ್ ರಾಮಾನುಜನ್ ಅವರು ತಮಿಳುನಾಡು ರಾಜ್ಯದ ಈರೋಡ್‌ನಲ್ಲಿ 22 ಡಿಸೆಂಬರ್ 1887 ರಂದು ಜನಿಸಿದರು. ಅವರು 1903 ರಲ್ಲಿ ತಂಜಾವೂರಿನ ಕುಂಭಕೋಣಂನಲ್ಲಿರುವ ಸರ್ಕಾರಿ ಕಾಲೇಜಿಗೆ ಸೇರಿದರು. ಇಲ್ಲಿ ಗಣಿತದ ಮೇಲಿನ ಅತಿಯಾದ ಆಸಕ್ತಿಯಿಂದ ಬೇರೆ ವಿಷಯಗಳಲ್ಲಿ ಅನುತ್ತೀರ್ಣ ಅಥವಾ ಕಡಿಮೆ ಅಂಕಗಳನ್ನು ಪಡೆಯಬೇಕಾಗಿತ್ತು. ನಂತರ ಅವರ ಜೀವಿತಾವಧಿಯಲ್ಲಿ, ಅವರು ಗಣಿತಶಾಸ್ತ್ರದ ಅನೇಕ ತತ್ವಗಳ ಕ್ಷೇತ್ರದಲ್ಲಿ ದೊಡ್ಡ ಕೊಡುಗೆ ನೀಡಿದರು.

ಇಂದು ದೇಶಕ್ಕೆ ಅತ್ಯಂತ ಮಹತ್ವದ ದಿನ. ಕೇವಲ 32 ವರ್ಷಗಳ ಜೀವನದಲ್ಲಿ ತಮ್ಮ ಗಣಿತ ಜ್ಞಾನದಿಂದ ಇಡೀ ವಿಶ್ವವೇ ಹೆಮ್ಮೆ ಪಡುವಂತೆ ಮಾಡಿದ ಶ್ರೀನಿವಾಸ ಅಯ್ಯಂಗಾರ್ ರಾಮಾನುಜನ್ ಅವರ ಜನ್ಮದಿನ ಇಂದು. ಈ ಸಂದರ್ಭದಲ್ಲಿ, ದೇಶದಲ್ಲಿ ಪ್ರತಿ ವರ್ಷ ಡಿಸೆಂಬರ್ 22 ಅನ್ನು ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಗುತ್ತದೆ. ರಾಮಾನುಜನ್ ಅವರ ಸಾಧನೆಗಳನ್ನು ಗೌರವಿಸಲು ಮತ್ತು ಈ ದಿನಾಂಕವನ್ನು ಸ್ಮರಣೀಯವಾಗಿಸಲು, ಭಾರತ ಸರ್ಕಾರವು ಇದನ್ನು ರಾಷ್ಟ್ರೀಯ ಗಣಿತ ದಿನವೆಂದು ಗುರುತಿಸಿದೆ. 2012ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಮಾನುಜನ್ ಅವರ 125ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಅಂದಿನ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಇದನ್ನು ಘೋಷಿಸಿದ್ದರು.

ಅಭಿವೃದ್ಧಿಪಡಿಸಿದ ರಾಮಾನುಜನ್ ಅವರು ತಮ್ಮ ಬಾಲ್ಯದಿಂದಲೂ ಗಣಿತಶಾಸ್ತ್ರದಲ್ಲಿ ಇತರ ಮಾನವರಿಗಿಂತ ಹೆಚ್ಚು ಪರಿಣತರಾಗಿದ್ದರು. ಕೇವಲ 12 ನೇ ವಯಸ್ಸಿನಲ್ಲಿ, ಅವರು ಯಾವುದೇ ಸಹಾಯವಿಲ್ಲದೆ ತ್ರಿಕೋನಮಿತಿಯನ್ನು ಕರಗತ ಮಾಡಿಕೊಂಡರು ಮತ್ತು ಹಲವಾರು ಪ್ರಮೇಯಗಳನ್ನು ಅಭಿವೃದ್ಧಿಪಡಿಸಿದರು. ಅವರು ಮದ್ರಾಸ್ ವಿಶ್ವವಿದ್ಯಾಲಯದಿಂದಲೂ ಅಧ್ಯಯನ ಮಾಡಿದರು. 1911 ರಲ್ಲಿ, ಬರ್ನೌಲ್ಲಿ ಸಂಖ್ಯೆಗಳ ಕುರಿತಾದ ಅವರ 17–ಪುಟಗಳ ಪ್ರಬಂಧವನ್ನು ಇಂಡಿಯನ್ ಮ್ಯಾಥಮೆಟಿಕಲ್ ಸೊಸೈಟಿಯ ಜರ್ನಲ್‌ನಲ್ಲಿ ಪ್ರಕಟಿಸಲಾಯಿತು.

**1917 ರಲ್ಲಿ ಗಣಿತ ಸಮಾಜಕ್ಕೆ ಆಯ್ಕೆ**

ರಾಮಾನುಜನ್ ಅವರು 1916 ರಲ್ಲಿ ಗಣಿತಶಾಸ್ತ್ರದಲ್ಲಿ ತಮ್ಮ B.Sc ಪದವಿಯನ್ನು ಪಡೆದರು. ಒಂದು ವರ್ಷದ ನಂತರ, 1917 ರಲ್ಲಿ, ಅವರು ಲಂಡನ್ ಮ್ಯಾಥಮೆಟಿಕಲ್ ಸೊಸೈಟಿಗೆ ಆಯ್ಕೆಯಾದರು. ಯಾರ ಸಹಾಯವೂ ಇಲ್ಲದೆ ಸಾವಿರಾರು ಸಮೀಕರಣಗಳನ್ನು ರಚಿಸಿ 3900 ಫಲಿತಾಂಶಗಳನ್ನು ಸಂಪಾದಿಸಿದರು. ಇವುಗಳಲ್ಲಿ ಕೆಲವು– ರಾಮಾನುಜನ್ ಪ್ರೈಮ್, ರಾಮಾನುಜನ್ ಥೀಟಾ ಫಂಕ್ಷನ್, ಡಿವಿಷನ್ ಫಾರ್ಮುಲಾ ಮತ್ತು ಮಾಕ್ ಥೀಟಾ ಫಂಕ್ಷನ್ ಇತ್ಯಾದಿ. ನಂತರ ಅವರು ಗಣಿತದ ವಿಭಿನ್ನ ಸರಣಿಯ ಬಗ್ಗೆ ತಮ್ಮ ಸಿದ್ಧಾಂತಗಳನ್ನು ನೀಡಿದರು. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**


|| JAI SRI GURUDEV ||
SRI ADICHUNCHANAGIRI SHIKSHANA TRUST(R)
Adichunchanagiri Institute of Technology
APPROVED BY AICTE NEW DELHI AND RECOGNIZED BY GOVT. OF KARNATAKA. ACCREDITED BY NAAC WITH "A" GRADE (CYCLE - II)
CHIKKAMAGALURU
200+ UNIVERSITY RANKS
GOVERNMENT OF KARNATAKA "SUPER" 30
GRADED A BY NAAC
VISION:
To develop Adichunchanagiri Institute of Technology as a center of excellence and to strive for continuous improvement of technical education and human resource advancement.
MISSION:
To achieve Excellence in Education, Entrepreneurship, and Innovation by producing Engineers with high Ethical Standards, integrity, and Credibility.
Since 1980
CERTIFICATE OF ACCREDITATION
A WASTE MANAGEMENT
A+ GREEN COVER ON CAMPUS
A+ SURFACE WATER HARVESTING
A+ ROOFTOP WATER HARVESTING
A+ ROOFTOP SOLAR SYSTEM
ADMISSIONS OPEN
COURSES OFFERED
B.E.COURSES
1. ARTIFICIAL INTELLIGENCE AND MACHINE LEARNING
2. CIVIL ENGINEERING
3. COMPUTER SCIENCE AND ENGINEERING
4. COMPUTER SCIENCE AND ENGINEERING (DATA SCIENCE)
5. ELECTRONICS AND COMMUNICATION ENGINEERING
6. ELECTRICAL AND ELECTRONICS ENGINEERING
7. INFORMATION SCIENCE AND ENGINEERING
8. MECHANICAL ENGINEERING
B.E.
CET CODE - E064,
COMEDK CODE - E004
MASTER DEGREE COURSES
1. STRUCTURAL ENGINEERING (Civil. Engg.)
2. COMPUTER SCIENCE AND ENGINEERING (CS & Engg.)
3. DIGITAL ELECTRONICS AND COMMUNICATION SYSTEM (E & C Engg.)
4. MBA (MASTER OF BUSINESS ADMINISTRATION)
M.Tech
CET CODE - T803
MBA
CET CODE - B109
OUR TOP RECRUITERS
Cognizant Rakuten TEKsystems HITACHI IBM Infosys Capgemini
OUR PLACEMENT HIGHLIGHTS
• MINIMUM 500+ JOB OFFERS EVERY YEAR
• 50+ CAMPUS DRIVES EVERY YEAR
• MINIMUM 3.25LPA TO MAXIMUM 15LPA PACKAGE OFFERS
• 50+ PLACEMENTS IN FORTUNE 500 COMPANIES
• TRAINING AND PLACEMENT CELL FOR STUDENTS
STUDENTS PLACED IN MERCEDES BENZ -2022 BATCH
10 LAKHS PER ANNUM
STUDENTS PLACED IN CLARIVATE ANALYTICS -2022 BATCH
Clarivate Analytics
8.25 LAKHS PER ANNUM
PRINCIPAL: 9448665711, DIRECTOR: 9448480343, REGISTRAR:9141133697/08262 220444 WWW.AITCKM.IN

Registered with Registrar of News Papers for India No.KARKAN/2018/76081, **Sampreethi Samruddhi,** December - 2023.
License to post without prepayment. License No.**KA/BG/CNA/119/2022-2024,**
Date of publication: **28.11.2023.** Posted at **Magadi Sub Post Office-562120** on **29th** of every month

|| Jai Sri Gurudev ||



# Adichunchanagiri University



## BGS Institute of Technology

BG Nagara-571448, Nagamangala Taluk, Mandya District, Karnataka-NH-75

# Admissions Open

BGSIT CET Code: E142



### BE Courses:

- Civil Engg.
- Mechanical Engg.
- Computer Science & Engg.
- Information Science & Engg.
- Electronics & Communication Engg.
- Artificial Intelligence & Machine Learning(AI&ML)

### P.G Courses:

- MBA
- Structural Engg.
- Computer Science & Engg.
- Infrastructure Management
- VLSI Design & Embedded Systems

### Ph.D. Programmes

- Civil Engineering
- Mechanical Engg
- Computer Science & Engineering
- Electronics & Communication Engineering

### For Admissions Contact

**Dr. M.B. Anandaraju**
Admission Officer
9886108095

**Dr. B.K. Narendra**
Principal
9880100556

**www.bgsit.ac.in | CET Code: E142**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120